SRI D.B. CHANDREGOWDA: Motion has been already moved. We have obtained the consensus of the House to authorise the Speaker.

2. ರಾಜ್ಯಪಾಲರ ಭಾಷಣದ ವಂದನಾ ನಿರ್ಣಯಕ್ಕೆ ಮಾನ್ಯ ಮುಖ್ಯಮಂತ್ರಿಯವರಿಂದ ಉತ್ತರ

+ಶ್ರೀ ಎಸ್.ಎಂ. ಕೃಷ್ಣ (ಮುಖ್ಯಮಂತ್ರಿ): ಮಾನ್ಯ ಅಧ್ಯಕ್ಷರೆ, ಸನ್ಮಾನ್ಯ ರಾಜ್ಯಪಾಲರು ಉಭಯ ಸದನಗಳನ್ನುದ್ದೇಶಿಸಿ ಮಾಡಿದ ಭಾಷಣದ ಮೇಲೆ ಶ್ರೀ ಎಸ್.ಜಿ. ನಂಜಯ್ಯನ ಮಠ್‌ರವರು ಮಂಡಿಸಿದಂತಹ ನಿರ್ಣಯದ ಮೇಲೆ ಸುಧೀರ್ಘವಾದಂತಹ ಚರ್ಚೆ ಈ ಸದನದಲ್ಲಿ ನಡೆದಿದೆ. ಸುಮಾರು ನಲವತ್ತೆರಡು ಜನ ಮಾನ್ಯ ಸದಸ್ಯರುಗಳು ಈ ಚರ್ಚೆಯಲ್ಲಿ ಭಾಗವಹಿಸಿ ಸರ್ಕಾರಕ್ಕೆ ರಚನಾತ್ಮಕವಾದಂತಹ ಸಲಹೆಗಳನ್ನು ಕೊಟ್ಟಿದ್ದಾರೆ; ಅದೇ ರೀತಿಯಲ್ಲಿ ಅವರಿಂದ ಟೀಕೆಗಳು ಸಹ ಬಂದಿವೆ. ಅವೆರಡನ್ನು ಕೂಡ ಸಮಾನ ಮನೋಭಾವನೆಯಿಂದ ನಾವು ಸ್ವೀಕರಿಸುತ್ತಿದೇವೆ. ಕರ್ನಾಟಕ ರಾಜ್ಯದಲ್ಲಿ ಜನತಂತ್ರದ ಆಧಾರದ ಮೇಲೆ ಹೊಸ ಸರ್ಕಾರ ಅಧಿಕಾರಕ್ಕೆ ಬಂದು ಆಡಳಿತ ನಡೆಸುತ್ತಿದೆ. ಈ ಬಗ್ಗೆ ನಾನಾ ರೀತಿಯ ವಿಶ್ಲೇಷಣೆಗಳು ಇಲ್ಲಿ ನಡೆದಿವೆ. ಇದು ಜನಗಳ ಪಾಸಿಟೀವ್ ಓಟ್‌ನಿಂದ ಬಂತೋ ಅಥವಾ ಆಂಟಿ ಇಂಕಂಬೆನ್ಸಿ ಸಿಂಡ್ರೋಂ ಆ ರೀತಿಯ ಪ್ರಭಾವದಿಂದಾಗಿ ವಿಜಯಲಕ್ಷ್ಮಿ ನಮಗೆ ಒಲಿದಳೋ ಇದರ ಬಗ್ಗೆ ನಾನಾ ವಿಧವಾದ ವಿಶ್ಲೇಷಣೆಗಳನ್ನು ನಮ್ಮ ಮಾನ್ಯ ಸದಸ್ಯರು ಮಾಡಿದ್ದಾರೆ. ಈ ವಿಧಾನಸಭೆ ಚುನಾವಣೆಗೆ ಮುನ್ನ ಬುದ್ಧಿಜೀವಿಗಳೆನಿಸಿಕೊಂಡವರು, ಚುನಾವಣಾ ಸರ್ವೇಗಳನ್ನು ಮಾಡಿದವರು, ಒಪೀನಿಯನ್ ಪೋಲ್ ಅನ್ನು ಕಂಡಕ್ಟ್ ಮಾಡಿದವರು ತಮ್ಮ ಫಲಿತಾಂಶಗಳನ್ನು ಮೊದಲೇ ಪ್ರಕಟ ಮಾಡಿದರು. ಆ ಸರ್ವೇಗಳ ಆಧಾರದ ಮೇಲೆ ಏನೆಲ್ಲ ಬದಲಾವಣೆಗಳಾಗಬೇಕಾಗಿತ್ತೋ ಅದು ನಮ್ಮ ರಾಜ್ಯದ ಮಟ್ಟಿಗೆ ಆಗಲಿಲ್ಲವೆನ್ನುವುದು ಈ ಚುನಾವಣಾ ಫಲಿತಾಂಶ ಏಳನೇ ತಾರೀಖಿನಂದು ಬಂದಾದ ಮೇಲೆ ನಮಗೆ ಗೊತ್ತಾಗಿದೆ. ಆದುದರಿಂದ ಈ ಚುನಾವಣೆಗೆ ಸಂಬಂಧಪಟ್ಟಂತೆ ಯಾರು ಸರ್ವೆ ಮಾಡುತ್ತಾರೆ, ಅವರು ಇನ್ನು ಮುಂದೆ ಸರ್ವೇಗಳನ್ನು ತಮ್ಮಲ್ಲೇ ಉಳಿಸಿಕೊಂಡು ಆ ಚುನಾವಣಾ ಫಲಿತಾಂಶ ಬಂದ ಮೇಲೆ ಒಟ್ಟಿಗೆ ಆ ಸರ್ವೆ ಮತ್ತು ಫಲಿತಾಂಶವನ್ನು ಒಟ್ಟಿಗೆ ಕೊಟ್ಟರೆ ದೊಡ್ಡ ಉಪಕಾರ ಮಾಡಿದಂತಾಗುತ್ತದೆಂದು ನಾವು ಭಾವಿಸುತ್ತೇವೆ. ಈ ವಿಧಾನಸಭಾ ಚುನಾವಣೆಯಲ್ಲಿ ಗೆಲ್ಲುವ ಬಗ್ಗೆ ನಮಗೆ ಯಾವ ಅನುಮಾನವೂ ಇರಲಿಲ್ಲ. ಕಳೆದ ಐದು ವರ್ಷಗಳಲ್ಲಿ ಸರ್ಕಾರ ನಡೆದ ರೀತಿನೀತಿಗಳನ್ನು ನೋಡಿದಾಗ ಸರ್ಕಾರ ಜನತೆಗೆ ಏನು ಭರವಸೆಗಳನ್ನು ಕೊಟ್ಟಿದ್ದರು ಅವನ್ನು ಈಡೇರಿಸುವುದರಲ್ಲಿನ ವೈಫಲ್ಯತೆಯನ್ನು ನಾವು ಜನತೆಯ ಮುಂದೆ ಇಟ್ಟೆವು, ಜನರು ನಮಗೆ ಆಶೀರ್ವಾದ ಮಾಡಿದರು, ಆ ಆಶೀರ್ವಾದವನ್ನು ನಾವು ಬಹಳ ವಿನಮ್ರವಾಗಿ ಒಪ್ಪಿಕೊಂಡು ಇಲ್ಲಿ ಬಂದು ಕುಳಿತಿದ್ದೇವೆ. ಅಮೇರಿಕಾದ ರಾಷ್ಟ್ರಾಧ್ಯಕ್ಷರು ಕೂಡ ಎಂಟು ವರ್ಷಗಳ ಮೇಲೆ ಆ ಶ್ವೇತಭವನದಲ್ಲಿ ಇರುವುದಕ್ಕೆ ಸಾಧ್ಯವಾಗುವುದಿಲ್ಲ. ಹಾಗೆಯೇ ನಾವು ಇಲ್ಲಿ ಕುಳಿತಿರುವವರು ಕೂಡ ಟೆನೆಂಟ್ಸ್ ಫಾರ್ ಫೈವ್ ಇಯರ್ಸ್, ಅದರ ಬಗ್ಗೆ ಯಾವುದೇ ರೀತಿಯಲ್ಲಿ ನಮಗೆ ಅನುಮಾನವಿಲ್ಲ. ಐದು ವರ್ಷಗಳ ಕಾಲ ನಾವು ಈ ರಾಜ್ಯದಲ್ಲಿ ಪ್ರಭುತ್ವವನ್ನು

ನಡೆಸುವ ಉಸ್ತುವಾರಿಯನ್ನು ಅಥವಾ ಜವಾಬ್ದಾರಿಯನ್ನು ಜನರು ನಮಗೆ ಕೊಟ್ಟಿದ್ದಾರೆ ಹಾಗೂ ಕೃಪಾಶೀರ್ವಾದವನ್ನು ಮಾಡಿದ್ದಾರೆ. ಆ ಆಶೀರ್ವಾದ ನಮಗೆ ಸಿಕ್ಕಿರುವುದು, ನಾವು ಅವರ ಮುಂದೆ ಮಂಡಿಸಿದ ಪ್ರಣಾಳಿಕೆಯ ಆಧಾರದ ಮೇಲೆ. ಆದುದರಿಂದ ಮುಂದಿನ ಐದು ವರ್ಷಗಳಲ್ಲಿ ಈ ಕಾಂಗ್ರೆಸ್ ಪಕ್ಷ, ಆ ಪ್ರಣಾಳಿಕೆಯನ್ನೇ ಆಧಾರವಾಗಿ ಇಟ್ಟುಕೊಂಡು ನಾವು ಪ್ರಭುತ್ವವನ್ನು ನಡೆಸುವುದಕ್ಕೆ ಪ್ರಾಮಾಣಿಕವಾದ ಪ್ರಯತ್ನವನ್ನು ಮಾಡುತ್ತೇವೆ ಎನ್ನುವುದೇ ನಮ್ಮ ಇಂದಿನ ದೀಕ್ಷೆ. ನಾವು ಆಡಳಿತ ಸುಧಾರಣೆಯ ವಿಚಾರವನ್ನು ಈ ಮೊದಲೇ ಪ್ರಸ್ತಾಪ ಮಾಡಿದ್ದೇವೆ. ಅದಕ್ಕೆ ಮೊದಲು, ಮಾನ್ಯ ರಾಜ್ಯಪಾಲರ ಭಾಷಣದಲ್ಲಿ ಇದನ್ನು ನಮೂದು ಮಾಡಿಲ್ಲ, ಇದನ್ನು ಸ್ಪಷ್ಟಪಡಿಸಿಲ್ಲ, ಇದರ ಬಗ್ಗೆ ಹೆಚ್ಚಿನ ಮಾಹಿತಿಯನ್ನು ಕೊಟ್ಟಿಲ್ಲ ಎನ್ನುವ ಹಲವಾರು ಮಾತುಗಳು ಈ ಸದನದಲ್ಲಿ ಕೇಳಿ ಬಂದವು. ಆದರೆ ನನ್ನ ಹಾಗೂ ಸರ್ಕಾರದ ದೃಷ್ಟಿಯಿಂದ ಯೋಚನೆ ಮಾಡಿದ್ದು, ಕೇವಲ 30 ದಿವಸಗಳ ಕೆಳಗೆ ಈ ಹೊಸ ಸರ್ಕಾರ ಅಧಿಕಾರಕ್ಕೆ ಬಂತು; ಆದುದರಿಂದ ನಮ್ಮ ಆಡಳಿತ ಗೊತ್ತುಗುರಿಗಳು ಏನು ಎನ್ನುವ ಒಂದು ವಿಹಂಗಮವಾದ ನೋಟವನ್ನು ರಾಜ್ಯದ ಜನತೆಗೆ ಕೊಡಬೇಕೆನ್ನುವ ಒಂದು ಸೀಮಿತವಾದ ಉದ್ದೇಶದಿಂದ ಮಾನ್ಯ ರಾಜ್ಯಪಾಲರ ಭಾಷಣವನ್ನು ಚುಟುಕುಗೊಳಿಸಿ, ಸಂಕ್ಷಿಪ್ತಗೊಳಿಸಿ ಬ್ರಾಡ್ ವಿಷನ್ಸ್ ಆಫ್ ದಿಸ್ ಗೌರ್ನಮೆಂಟ್-ಅದನ್ನು ಮಾತ್ರ ಈ ಮಾನ್ಯ ರಾಜ್ಯಪಾಲರ ಭಾಷಣದಲ್ಲಿ ನಮೂದಿಸಿದ್ದೇವೆಯೇ ಹೊರತು, ಎಲ್ಲಾ ವಿಚಾರಗಳನ್ನು ಇಲ್ಲಿ ನಮೂದಿಸುವುದಕ್ಕೆ ಬುದ್ಧಿಪೂರ್ವಕವಾಗಿ ಪ್ರಯತ್ನ ಪಟ್ಟಿಲ್ಲ ಎನ್ನುವುದನ್ನು ತಮ್ಮಲ್ಲಿ ನಿವೇದಿಸಿಕೊಳ್ಳಲು ಇಚ್ಛಿಪಡುತ್ತೇನೆ. ಜನರನ್ನು ಕಾಡುತ್ತಿರುವ ಮೂಲಭೂತ ಸಮಸ್ಯೆಗಳ ಕುರಿತು ನಾವು ಗಮನ ಸೆಳೆದಿದ್ದೇವೆ. ಅದಕ್ಕೆ ಸರ್ಕಾರ ಏನು ಕಾರ್ಯಕ್ರಮಗಳನ್ನು ತೆಗೆದುಕೊಳ್ಳುತ್ತದೆ ಎನ್ನುವ ಒಂದು ಸ್ಥೂಲವಾದ ನೋಟವನ್ನು ಈ ಭಾಷಣದಲ್ಲಿ ಅಭಿವ್ಯಕ್ತಪಡಿಸುವುದಕ್ಕೆ ನಾವು ಪ್ರಯತ್ನ ಮಾಡಿದ್ದೇವೆ. ನಾವು ಈ ಆಡಳಿತ ಸುಧಾರಣೆಯ ಬಗ್ಗೆ ಹೆಚ್ಚು ಒತ್ತನ್ನು ಕೊಡಲು ಪ್ರಯತ್ನ ಮಾಡುತ್ತಿದ್ದೇವೆ. ಈ ಭ್ರಷ್ಟಾಚಾರದ ವಿರುದ್ಧ ನಿರ್ದಾಕ್ಷಿಣ್ಯವಾದ ಕ್ರಮಗಳನ್ನು ತೆಗೆದುಕೊಳ್ಳಬೇಕು, ಆಡಳಿತದಲ್ಲಿ ಪಾರದರ್ಶಕತೆ ಇರಬೇಕು ಮತ್ತು ಆಡಳಿತದಲ್ಲಿ ಅಕೌಂಟೆಬಲಿಟಿ ಇರಬೇಕು, ದಕ್ಷತೆ ಮತ್ತು ಶಿಸ್ತು ಇರಬೇಕು, ಸರ್ಕಾರಿ ಆಡಳಿತದ ಬಗ್ಗೆ ಜನಸಾಮಾನ್ಯರು ಭರವಸೆಯನ್ನಿಡುವ ಸನ್ನಿವೇಶವನ್ನು ನಾವು ಸೃಷ್ಟಿ ಮಾಡಬೇಕು; ಸರ್ಕಾರ ಶೀಘ್ರವಾಗಿ ಜನತೆಯೊಡನೆ ಸ್ಪಂದಿಸುವಂತೆ ಆಡಳಿತ ಯಂತ್ರವನ್ನು ಸಜ್ಜುಗೊಳಿಸಲು ಏನೆಲ್ಲಾ ಅಳವಡಿಸಬೇಕೋ ಅದನ್ನೆಲ್ಲಾ ಅಳವಡಿಸಬೇಕು. ಭ್ರಷ್ಟಾಚಾರವಿದೆ ಎಂದು ಎಲ್ಲರೂ ಸರ್ವೇಸಾಮಾನ್ಯವಾಗಿ ಒಪ್ಪತಕ್ಕ ಮಾತು; ಅದನ್ನು ನಾನು ಅಥವಾ ನಾವು ನಿರ್ನಾಮ ಮಾಡುತ್ತೇವೆ, ಸಂಪೂರ್ಣವಾಗಿ ಅದನ್ನು ಮೂಲೋತ್ಪಾಟನೆ ಮಾಡುತ್ತೇವೆ ಎಂದು ಹೇಳುವುದು ಉದ್ಧಟತನವಾಗುತ್ತದೆ. ಆದರೆ ಭ್ರಷ್ಟಾಚಾರದ ಮೇಲೆ ಕಡಿವಾಣ ಹಾಕಬೇಕಾಗಿರುವುದು ಅಧಿಕಾರಕ್ಕೆ ಬಂದ ಸರ್ಕಾರಗಳು ಮಾಡುತ್ತಿರುವ ಪ್ರಕ್ರಿಯೆ. ಅದನ್ನು ಇನ್ನೂ ಚುರುಕಾಗಿ ಮುಂದುವರೆಸಬೇಕೆನ್ನುವುದು ನಮ್ಮ ಸರ್ಕಾರದ ಮೂಲ ಉದ್ದೇಶ. ಭ್ರಷ್ಟ ಅಧಿಕಾರಿಗಳು, ಮತ್ತು ಈ ಭ್ರಷ್ಟ ವ್ಯವಸ್ಥೆಯ ವಿರುದ್ಧ ನಾವು ಧರ್ಮಯುದ್ಧವನ್ನು ಘೋಷಿಸಬೇಕು. ಅದನ್ನು ಧರ್ಮಯುದ್ಧ ಎಂದು ಕರೆಯಲು ಇಷ್ಟವಿಲ್ಲದಿದ್ದರೆ ಕ್ರುಸೇಡ್ ಎಂದು ಕರೆಯಿರಿ, ಅದೂ ಬೇಡವೆಂದರೆ ಜಿಹಾದ್ ಎಂದು ಕರೆಯಿರಿ; ಒಟ್ಟಿನಲ್ಲಿ ನಾವು ಈ ಭ್ರಷ್ಟಾಚಾರದ ವಿರುದ್ಧವಾಗಿ ನಮ್ಮ ಸ್ವರವನ್ನು ಎತ್ತಬೇಕು. ಆ ಸ್ವರವನ್ನು ಎತ್ತಿದ್ದೇವೆ ಎನ್ನುವುದು ಆಡಳಿತ ನಡೆಸುವ ಜವಾಬ್ದಾರಿಯನ್ನು ಹೊಂದಿರುವ

ಲಕ್ಷಾಂತರ ಮಂದಿ ನಮ್ಮ ಸರ್ಕಾರಿ ಅಧಿಕಾರಿಗಳೇನಿದ್ದಾರೆ ಮತ್ತು ರಾಜಕಾರಣಿಗಳೇನಿದ್ದಾರೆ ಅವರೆಲ್ಲರೂ ಕೂಡ ಇದನ್ನು ಗಮನದಲ್ಲಿಟ್ಟುಕೊಳ್ಳಬೇಕಾಗಿರುವುದು ಅಗತ್ಯವಾಗಿದೆ. ಆಡಳಿತದಲ್ಲಿ ಪಾರದರ್ಶಕತೆ ಇರಬೇಕೆನ್ನುವುದನ್ನು ನಾವೆಲ್ಲರೂ ಒಪ್ಪಿರುವ ಒಂದು ತತ್ವ; ಆ ತತ್ವಕ್ಕೆ ಪರ್ಯಾಯವೇ ಇಲ್ಲ. ಆ ಪಾರದರ್ಶಕತೆಯನ್ನು ಆಡಳಿತದಲ್ಲಿ ಹೇಗೆ ತರುತ್ತೇವೆನ್ನುವುದರ ಬಗ್ಗೆ ಕೂಡ ನಾವು ಗಮನವನ್ನು ಹರಿಸಬೇಕಾಗಿದೆ. ಇವೆರಡರ ಜೊತೆಗೆ ಅಕೌಂಟೆಬಿಲಿಟಿ ಕೂಡ ಬಹಳ ಮುಖ್ಯವಾಗಿದೆ. ಸರ್ಕಾರಗಳಲ್ಲಿ ಏನಾಗುತ್ತದೆಂದರೆ, ಕಾಲಮಿತಿ ಯೋಜನೆಗಳು, ಕಾರ್ಯಕ್ರಮಗಳಿರುತ್ತವೆ, ಅದನ್ನು ಆಗಮಾಡಬೇಕು, ಅದನ್ನು ನಡೆಸಬೇಕು ಎನ್ನುವ ಒಂದು ಮ್ಯಾಂಡೇಟ್ ಇರುತ್ತದೆ. ಯಾರು ಕಾಲಬದ್ಧವಾದ ನಿರ್ಣಯವನ್ನು ಅನ್ವಯ ಮಾಡುವುದಕ್ಕೆ ಶಕ್ತನಾಗುತ್ತಾನೋ ಆತ ಅಕೌಂಟಬಲ್ ಆಗಿರಬೇಕು.

ಅದಕ್ಕೆ ನಾವು ಮಂತ್ರಿಗಳು, ಈ ಮಂತ್ರಿಮಂಡಲ, ಈ ಶಾಸಕಾಂಗ ಆದರ್ಶವಾಗಿರಬೇಕು. ಈ ಸರ್ಕಾರೀ ಆಡಳಿತ ಯಂತ್ರದಲ್ಲಿ ಶಿಸ್ತನ್ನು ತರಬೇಕು ಎನ್ನತಕ್ಕಂಥ ಮಾತನ್ನು ಪ್ರತಿಯೊಬ್ಬ ಮಾನ್ಯ ಸದಸ್ಯರೂ ಕೂಡ ಆಡಿದ್ದಾರೆ; ಆಡಳಿತ ಯಂತ್ರ ಚುರುಕಾಗಿರಬೇಕು ಎಂದು ಅವರೆಲ್ಲ ಹೇಳಿದ್ದಾರೆ. ಆಡಳಿತದಲ್ಲಿ ಆ ಚುರುಕನ್ನು ತರತಕ್ಕಂಥಾದ್ದು ಹೇಗೆ? ಆ ಶಿಸ್ತನ್ನು ತರತಕ್ಕಂಥಾದ್ದು ಹೇಗೆ? ಆ ಶಿಸ್ತನ್ನು ನಾವು ನಮ್ಮಲ್ಲಿ ಅಳವಡಿಸಿಕೊಂಡರೆ ಮಾತ್ರ ನಮ್ಮ ಕೈಕೆಳಗಡೆ ಕೆಲಸ ಮಾಡತಕ್ಕಂಥ, ನಮ್ಮ ಜೊತೆಯಲ್ಲಿ ಕೆಲಸ ಮಾಡತಕ್ಕಂಥ ಅಧಿಕಾರಿ ವರ್ಗದಲ್ಲೂ ಕೂಡ ಶಿಸ್ತು ಬರುತ್ತದೆ ಎನ್ನತಕ್ಕಂಥದ್ದನ್ನು ನಾವು ಗಮನದಲ್ಲಿಟ್ಟುಕೊಳ್ಳಬೇಕಾಗುತ್ತದೆ. ಈ ಭ್ರಷ್ಟಾಚಾರದ ವಿಚಾರದಲ್ಲಿ ಒಂದು ಮಾತನ್ನು ಈ ಸಮಯದಲ್ಲಿ ನಾನು ಹೇಳಲು ಇಚ್ಛಿಪಡುತ್ತೇನೆ. ನಮ್ಮ ಶಾಸನ ಸಭೆಯಲ್ಲೂ ಕೂಡ ಕೆಲವು ಸನ್ಮಿತ್ರರು ಇದ್ದಾರೆ. ಪ್ರಚಲಿತವಾಗಿ ಸುದ್ಧಿ ಮಾಧ್ಯಮಗಳಲ್ಲಿ ಬರತಕ್ಕಂಥ ವಿಚಾರಪೂರ್ಣ ಲೇಖನಗಳನ್ನು ಓದುತ್ತಾರೆ. ತಾವು ಓದಿದ ಮೇಲೆ ಅದನ್ನು ನನ್ನಂಥವರಿಗೆ ಕೂಡ ಕಳುಹಿಸಿ, ನೀವು ಓದಿದರೆ ನೀವೂ ಕೂಡ ಬುದ್ಧಿವಂತರಾಗುತ್ತೀರಿ, ಪ್ರಬುದ್ಧರಾಗುತ್ತೀರಿ ಎನ್ನತಕ್ಕಂಥ ದೃಷ್ಟಿಯಿಂದ ನಮ್ಮ ಮಾನ್ಯ ಸದಸ್ಯರಾದಂಥ ಸುರೇಶ್ ಕುಮಾರ್ ಅವರು ನಿನ್ನೆ ನನಗೆ ಏಷಿಯನ್ ಏಜ್ ಪತ್ರಿಕೆಯಲ್ಲಿ ಶ್ರೀ ಅರುಣ್ ಶೌರಿಯವರು ಬರೆದಿರತಕ್ಕಂಥ ಒಂದು ಲೇಖನವನ್ನು ಕಳುಹಿಸಿದರು. ಆ ಲೇಖನದ ನಾಲ್ಕು ಪದಗಳನ್ನು ಇಲ್ಲಿ ಉಲ್ಲೇಖಿಸುತ್ತಿದ್ದೇನೆ. ಏಕೆಂದರೆ ಇದು ಭ್ರಷ್ಟಾಚಾರದ ವಿಚಾರಗಳಿಗೆ ಬಹಳ ಸಮೀಪವಾಗಿರತಕ್ಕಂಥ ಪ್ರಶ್ನೆ.

"At least in five respects all too often, they lose interest and remedy, the moment it has been enacted". Arun Shourie talks about the Legislature Acts and the Parliament Acts which are passed by our Parliament and by Legislatures.

"N. Vittal, the Chief Vigilance Commissioner gives a telling example. In 1998, the Parliament passed the Benami Transaction Prohibition Act. It was acclaimed to be the decisive step in tackling corruption. Indeed, so urgent and vital, his provisions so aclaimed

that they were first introduced by way of Ordinance. Clause 5 of the Act specifies that a procedure would be prescribed for acquiring property under the Act. 11 years have gone by, no procedure has been prescribed as yet. Governments have forgotten all about the Act and not just Governments..the other day when I referred to the Act against ... in the Rajya Sabha, it was evident that the M.Ps too have not bothered to check up on what they had passed. The 1st point therefore is follow through on what you get through Parliament. Follow through on the schemes you launch." ನಾವು ಸದುದ್ದೇಶದಿಂದ ಬೇಕಾದಷ್ಟು ಕಾಯಿದೆಗಳನ್ನು ಮಾಡುತ್ತೇವೆ, ಕಾನೂನನ್ನು ತಿದ್ದುಪಡಿ ಮಾಡುತ್ತೇವೆ, ಹೊಸ ನಿಯಮಗಳನ್ನು, ಸೂತ್ರವನ್ನು ಹಾಕುತ್ತೇವೆ. ಆದರೆ ಅದನ್ನು ಫಾಲೋಅಪ್ ಮಾಡತಕ್ಕಂಥ ದೃಷ್ಟಿಯಲ್ಲಿ ನಾವು ಗಮನಹರಿಸಲಿಲ್ಲ ಎನ್ನತಕ್ಕಂಥಾದ್ದನ್ನು ಬಹಳ ಸೂಕ್ಷ್ಮವಾಗಿ ಮಾನ್ಯ ಅರುಣ್ ಶೌರಿಯವರು ತಮ್ಮ ಲೇಖನದಲ್ಲಿ ಪ್ರಸ್ತಾಪ ಮಾಡಿದ್ದಾರೆ. ಅದನ್ನು ನಾನು ಈ ಸಭೆಯ ಗಮನಕ್ಕೆ ತರಲು ಈ ಅವಕಾಶವನ್ನು ಉಪಯೋಗಿಸಿಕೊಳ್ಳುತ್ತಿದ್ದೇನೆ. ವಿಧಾನಸೌಧ ಮಿಕ್ಕ ಎಲ್ಲ ಕಛೇರಿಗಳಿಗೂ ಆದರ್ಶವಾಗಿರಬೇಕು. ವಿಧಾನಸೌಧದ ಒಳಗೆ ಶಿಸ್ತು ಇರಬೇಕು, ವಿಧಾನಸೌಧದ ಒಳಗೆ ಪಂಕ್ಚುಯಾಲಿಟಿ ಇರಬೇಕು, ವಿಧಾನಸೌಧದ ಒಳಗೆ ಅಕೌಂಟಬಿಲಿಟಿ ಇರಬೇಕು, ವಿಧಾನಸೌಧದ ಒಳಗೆ, ಜನಸಾಮಾನ್ಯರು ಏನು ಭರವಸೆಗಳನ್ನು ಇಟ್ಟಿದ್ದಾರೆ, ಆ ಭರವಸೆಗಳನ್ನು ಮುಂದುವರೆಸಿಕೊಂಡು ಹೋಗತಕ್ಕಂಥ ಸನ್ನಿವೇಶವನ್ನು ನಾವು ಸೃಷ್ಟಿ ಮಾಡಬೇಕು. ಆದರೆ ಇವತ್ತು ವಿಧಾನಸೌಧದಿಂದ ಅಂಥ ಒಂದು ಸಂದೇಶ ರಾಜ್ಯದ ಜನಗಳಿಗೆ ಹೋಗುತ್ತಿದೆಯೇ ಎನ್ನುವ ಒಂದು ಪ್ರಶ್ನೆಯನ್ನು ನಾವು ಹಾಕಿಕೊಳ್ಳಬೇಕಾಗಿದೆ. ಭಿನ್ನಾಭಿಪ್ರಾಯಗಳು ಇರಬಹುದು, ಅಭಿಪ್ರಾಯಗಳಲ್ಲಿ ವ್ಯತ್ಯಾಸಗಳು ಇರಬಹುದು; ಅಭಿಪ್ರಾಯಗಳಲ್ಲಿ ವ್ಯತ್ಯಾಸಗಳು ಇದ್ದಾಗಲೂ ಕೂಡ ನಮ್ಮ ದೃಷ್ಟಿಯೆಲ್ಲವೂ ಕೂಡ ಒಂದೇ ಒಂದು ಗುರಿಯ ಕಡೆಗೆ ಇದೆ. ಅದು ಶ್ರೀಸಾಮಾನ್ಯನಿಗೆ ಎಷ್ಟರಮಟ್ಟಿಗೆ ನಾವು ಮಾಡತಕ್ಕಂಥ ಭಾಷಣಗಳಿಂದ, ನಾವು ಮಾಡತಕ್ಕಂಥ ಕಾನೂನುಗಳಿಂದ, ನಾವು ತೆಗೆದುಕೊಳ್ಳತಕ್ಕಂಥ ಆಡಳಿತಾತ್ಮಕ ತೀರ್ಮಾನಗಳಿಂದ ಅನುಕೂಲವಾಗುತ್ತದೆ ಎನ್ನತಕ್ಕಂಥಾದ್ದೇ ನಮ್ಮ ಕಾರ್ಯಕ್ರಮಗಳಿಗೆ ಲಿಟ್ಮಸ್ ಟೆಸ್ಟ್. ಆದ್ದರಿಂದ ನಾವು ವಿಧಾನಸೌಧದಲ್ಲಿ ಪಂಕ್ಚುಯಾಲಿಟಿಯನ್ನು ಮಾಡಬೇಕು. ಪಂಕ್ಚುಯಾಲಿಟಿಯನ್ನು ಮಾಡುವುದು ಹೇಗೆ? ಪಂಕ್ಚುಯಾಲಿಟಿ ನಮ್ಮಿಂದ ಪ್ರಾರಂಭವಾಗಬೇಕು. ಪಂಕ್ಚುಯಾಲಿಟಿ ಈ ಶಾಸನಸಭೆಯಿಂದ ಪ್ರಾರಂಭವಾಗಬೇಕು. ಬೆಳಿಗ್ಗೆ, ಮಧ್ಯಾಹ್ನವೆಲ್ಲಾ ಈ ಸದನ ಬೆಲ್ ಬಹಳ ಹೊತ್ತು ಹೊಡೆಯುತ್ತದೆ, ಅದರ ಬಗ್ಗೆ ನಮ್ಮ ಗೌರವಾನ್ವಿತ ಸದಸ್ಯರ ಗಮನವನ್ನು ಸೆಳೆಯುತ್ತೇನೆ. ಇದು ನಮ್ಮ ಮೊಟ್ಟಮೊದಲನೆಯ ಅಧಿವೇಶನ. ಈ ಅಧಿವೇಶನ ಪ್ರಾರಂಭವಾಗುವುದರೊಳಗೆ ನಮ್ಮ ಸದಸ್ಯರುಗಳಲ್ಲಿ ಬಹಳ ಸದಸ್ಯರಿಗೆ ಇನ್ನೂ ಶಾಸಕರ ಭವನದಲ್ಲಿ ಕೊಠಡಿಗಳು ಸಿಕ್ಕಿಲ್ಲ, ಮಂತ್ರಿಗಳಿಗೆ ಇನ್ನೂ ಮನೆಗಳು ಸಿಕ್ಕಿಲ್ಲ. ನಿನ್ನೆ ನಮ್ಮ ಮಾನ್ಯ ಆರಗ ಜ್ಞಾನೇಂದ್ರ ಅವರು ಭಾಷಣ ಮಾಡುತ್ತಾ, ಮಂತ್ರಿಗಳನ್ನು ಹುಡುಕುತ್ತಿದ್ದೇವೆ, ನಮಗೆ ಸಿಗುತ್ತಿಲ್ಲ, ಮಂತ್ರಿಗಳನ್ನು ಎಲ್ಲಿ ಹಿಡಿಯುವುದು, ಎಂದು ಹೇಳಿದರು. ಅವರೇ ಕಾನೂನು ಮಾಡಿದ್ದಾರೆ, ಮಂತ್ರಿಗಳು ವಿಶ್ರಾಂತರಾಗುವುದಕ್ಕೆ ಮುನ್ನ ಬಂಗಲೆಗಳನ್ನು ಖಾಲಿ ಮಾಡಲು

ಅವರಿಗೆ ಎರಡು ತಿಂಗಳು ಅಂದರೆ 60 ದಿವಸಗಳ ಅವಕಾಶವನ್ನು ಕಾನೂನಿನಲ್ಲೇ ನಾವು ಒದಗಿಸಿಕೊಡುತ್ತಿದ್ದೇವೆ. 60 ದಿವಸಗಳವರೆಗೆ ಅವಕಾಶವನ್ನು ಅವರಿಗೆ ನಾವೇ ಕಲ್ಪಿಸಿಕೊಟ್ಟಿದ್ದೇವೆ, ಬುದ್ಧಿಪೂರ್ವಕವಾಗಿ ಕಲ್ಪಿಸಿಕೊಟ್ಟಿದ್ದೇವೆ. ಆದ್ದರಿಂದ ನಾವು ಯಾರನ್ನೂ ಕೂಡ ಒತ್ತಾಯ ಮಾಡತಕ್ಕಂಥ ಸ್ಥಿತಿಯಲ್ಲಿ ಇಲ್ಲ. ಒತ್ತಾಯ ಮಾಡತಕ್ಕಂಥಾದ್ದು ಸೌಜನ್ಯವೂ ಆಗುವುದಿಲ್ಲ. ಆದ್ದರಿಂದ ಮಾನ್ಯ ಆರಗ ಜ್ಞಾನೇಂದ್ರ ಅವರು ಇದನ್ನು ತಿಳಿದುಕೊಂಡರೆ ಮುಂದೆ ಇಂಥವುಗಳನ್ನು ಇಲ್ಲಿ ಪ್ರಸ್ತಾಪ ಮಾಡುವುದಿಲ್ಲ ಎಂದು ನಾನು ಭಾವನೆ ಮಾಡುತ್ತೇನೆ. ನಾನು ಆಗಲೇ ಈ ಪಂಕ್ಚುಯಾಲಿಟಿ ವಿಚಾರದ ಬಗ್ಗೆ ಮಾತನಾಡುತ್ತಿದ್ದೆನು. ವಿಧಾನಸೌಧದಲ್ಲಿ ಪಂಚಿಂಗ್ ಸಿಸ್ಟಂ ಅನ್ನು ಜಾರಿಗೆ ತರಬೇಕು ಎನ್ನುವ ನಿರ್ಣಯವನ್ನು ನಾವು ಮಾಡಬೇಕಾಗಿದೆ. ಇಲ್ಲದಿದ್ದರೆ ನಮಗೆ ಅಕೌಂಟಬಿಲಿಟಿ ಇರುವುದಿಲ್ಲ.

ಆದ್ದರಿಂದ ಇನ್ನು ಮುಂದೆ, ಅತಿ ಶೀಘ್ರದಲ್ಲೇ ವಿಧಾನಸೌಧದಲ್ಲಿ ಮುಖ್ಯಮಂತ್ರಿಯಿಂದ ಹಿಡಿದು ಚಪ್ರಾಸಿಯವರೆಗೆ ಎಲ್ಲರೂ ಪಂಚ್ ಮಾಡಿ ಕಚೇರಿಗಳಿಗೆ ಬರುವಂಥ ವ್ಯವಸ್ಥೆ ಮಾಡುತ್ತೇವೆ. ಆಗ ನಾವು ಎಷ್ಟು ಹೊತ್ತಿಗೆ ಆಪೀಸಿಗೆ ಬಂದೆವು, ಎಷ್ಟು ಹೊತ್ತಿಗೆ ಮನೆಗೆ ಹೋದೆವು ಎನ್ನತಕ್ಕಂಥ ದಾಖಲಾತಿ, ಮಾಹಿತಿ ಸಿಗುತ್ತದೆ. ಮುಖ್ಯಮಂತ್ರಿಯದ್ದೂ ಸಿಗುತ್ತದೆ, ಮಂತ್ರಿಗಳದ್ದೂ ಸಿಗುತ್ತದೆ, ಸರ್ಕಾರಿ ಅಧಿಕಾರಿಗಳದ್ದು, ಸೆಕ್ರೆಟರಿಗಳದ್ದು ಎಲ್ಲರದ್ದೂ ಸಿಗುತ್ತದೆ. ಆದ್ದರಿಂದ ಈ ಒಂದು ಸುಧಾರಣೆಯನ್ನು ತರಲು ತಮ್ಮ ಸಹಕಾರವನ್ನು ನಾನು ಕೇಳುತ್ತಿದ್ದೇನೆ. ಹಾಗೆಯೇ ದಕ್ಷತೆ ಬಗ್ಗೆ ಹೇಳಬೇಕಾದರೆ, ಶಿಸ್ತು ಒಂದು ಕಡೆಯಾದರೆ ದಕ್ಷತೆ ಮತ್ತೊಂದು ಕಡೆ; ಇವೆರಡೂ ಒಂದೇ ನಾಣ್ಯದ ಎರಡು ಮುಖಗಳಿದ್ದಂತೆ. ಈ ದಕ್ಷತೆಯನ್ನು ತರತಕ್ಕಂಥಾದ್ದು ಹೇಗೆ? ದಕ್ಷತೆ ಇಲ್ಲ ಎನ್ನತಕ್ಕಂಥಾದ್ದು, ಸುಮಾರು 20 ವರ್ಷಗಳ ಸೇವೆಯ ಒಬ್ಬ ಅಧಿಕಾರಿಯ ಟರ್ಮ್‌ನಲ್ಲಿ, ಟೆನ್ಯೂರನಲ್ಲಿ ಅವರು ದಕ್ಷನಲ್ಲ ಎನ್ನತಕ್ಕಂಥಾದ್ದು ಅವನ ಚಾರ್ಟ್‌ರೆಕಾರ್ಡ್‌ನಿಂದ ಪ್ರೂವ್ ಆಗಿದ್ದರೆ ಅಂಥವರನ್ನು ಎಷ್ಟು ದಿವಸ ನಾವು ಹೊತ್ತುಕೊಂಡು ತಿರುಗಾಡತಕ್ಕಂಥಾದ್ದು ಆಗುತ್ತದೆ? ಈ ಬಗ್ಗೆ ನಮ್ಮ ಹಿಂದಿನವರು ಬಹಳ ಬುದ್ಧಿಪೂರ್ವಕವಾಗಿ ಕರ್ನಾಟಕ ಸಿವಿಲ್ ಸರ್ವೀಸ್ ರೂಲ್ಸ್‌ನಲ್ಲಿ ಸೆಕ್ಷನ್ 285ನ್ನು ಜೋಡಿಸಿದ್ದಾರೆ. ಅದರ ಅರ್ಥ ಏನೆಂದರೆ, ಯಾರು ಜೇಡೆಡ್ ಮೈಂಡ್, ಯಾರು ಇನ್‌ಎಫಿಷಿಯೆಂಟ್, ಯಾರಿಗೆ ನಾವು ಜನರ ಕೆಲಸವನ್ನು ಮಾಡಬೇಕು ಎನ್ನತಕ್ಕಂಥ ಕಾಳಜಿ ಇಲ್ಲವೋ ಅಂಥ ಅಧಿಕಾರಿಗಳನ್ನು ಮನೆಗೆ ಕಳುಹಿಸಬೇಕು ಎಂದು ಇದೆ. ಅಂಥವರನ್ನು ಮನೆಗೆ ಕಳುಹಿಸಲು ಒಂದು ವಿಧಾನವನ್ನು ಹೇಳಿಕೊಟ್ಟಿದ್ದಾರೆ. ಜನಗಳು ನಮ್ಮನ್ನು ಐದು ವರ್ಷಕ್ಕೊಂದು ಸಾರಿ ಮನೆಗೆ ಕಳುಹಿಸುತ್ತಾರೆ. ಆದರೆ ಅಧಿಕಾರಿಗಳನ್ನು ಮನೆಗೆ ಕಳುಹಿಸಲು 28 ವರ್ಷಗಳು ಬೇಕಾಗುತ್ತದೆ. ಆದ್ದರಿಂದ ಅತ್ಯಂತ ವಿನಯದಿಂದ ನಾನು ಸೂಚನೆ ಮಾಡುತ್ತಿದ್ದೇನೆ, ಸೆಕ್ಷನ್ 285 ಇನ್ನೂ ನಮ್ಮ ರೂಲ್ ಬುಕ್‌ನಲ್ಲಿ ಇದೆ. ಇದನ್ನು ಸರ್ಕಾರೀ ನೌಕರರು ತಮ್ಮ ಗಮನದಲ್ಲಿ ಇಟ್ಟುಕೊಳ್ಳಬೇಕು ಎನ್ನುವ ಸೂಚ್ಯವಾದಂಥ ಮಾತನ್ನು ಆಡುವುದಕ್ಕೆ ಈ ಅವಕಾಶವನ್ನು ನಾನು ಉಪಯೋಗಿಸಿಕೊಳ್ಳುತ್ತಿದ್ದೇನೆ. ಸರ್ಕಾರದ ಜೊತೆಗೆ ಶೀಘ್ರ ಸ್ಪಂದಿಸುವಂತೆ ಆಡಳಿತ ಯಂತ್ರವನ್ನು ಸಜ್ಜುಗೊಳಿಸಬೇಕು ಎನ್ನತಕ್ಕಂಥಾದ್ದಕ್ಕೆ ಮಾಹಿತಿ ತಂತ್ರಜ್ಞಾನವನ್ನು ವ್ಯಾಪಕವಾಗಿ ಬಳಸಿಕೊಳ್ಳಬೇಕು ಎನ್ನತಕ್ಕಂಥಾದ್ದು ಈ ಸರ್ಕಾರದ ತೀರ್ಮಾನ. ಇದು ನಮ್ಮ ದಿವಂಗತ ಮಾನ್ಯ ರಾಜೀವ್‌ಗಾಂಧಿಯವರು ನಮಗೆ ಹೇಳಿಕೊಟ್ಟಂಥ ಪ್ರಥಮಪಾಠ ಆಗತಕ್ಕಂಥಾದ್ದನ್ನು

ನಾನು ನೆನೆಯುತ್ತಿದ್ದೇನೆ. ದಿವಂಗತ ಶ್ರೀಮತಿ ಇಂದಿರಾಗಾಂಧಿಯವರು ಬಣ್ಣದ ಟೆಲಿವಿಷನ್ ಹಾಕಿದಾಗ, ಇದನ್ನು ಯಾರು ನೋಡಲಿಕ್ಕೆ ಬೇಕು ಎಂದು ಕುಚೋದ್ಯದ, ಕುಹಕದ ಮಾತುಗಳನ್ನು ಆಡಿದ ಜನರು ಇದ್ದಾರೆ. ದಿ: ಶ್ರೀ ರಾಜೀವ್‌ಗಾಂಧಿಯವರು 21ನೇ ಶತಮಾನದ ಮಾತನ್ನು ಆಡಿದಂಥ ಕಾಲದಲ್ಲಿ ಅದರ ಬಗ್ಗೆ ಕುಚೋದ್ಯದ ಮಾತುಗಳನ್ನು ಆಡಿದಂಥವರು ಇದ್ದಾರೆ. ಸ್ಯಾಂತ್ರೋಡಾ ಅವರ ನೇತೃತ್ವದಲ್ಲಿ ಟೆಕ್ನಾಲಜಿ ಮೆಷಿನ್‌ಗಳನ್ನು ಶ್ರೀ ರಾಜೀವ್‌ಗಾಂಧಿಯವರು ಬಹಳ ದೂರದೃಷ್ಟಿಯಿಂದ ಸ್ಥಾಪನೆ ಮಾಡಿದಂಥ ಕಾಲದಲ್ಲಿ ಅದರ ಬಗ್ಗೆಯೂ ಕೂಡ ಅಪಸ್ವರಗಳನ್ನು ಎತ್ತಿದಂಥ ಜನಗಳು ಇವತ್ತಿಗೂ ನಮ್ಮ ದೇಶದಲ್ಲಿ ಇದ್ದಾರೆ. ಆದರೆ ಅದರಿಂದ ಬಂದಂಥ ಅಪಾರವಾದಂಥ ಅನುಕೂಲ ಏನು ಎಂದರೆ-ನಮ್ಮ ಮಾನ್ಯ ಸದಸ್ಯರಾದ ಶ್ರೀ ಕೋಳಿವಾಡ ಅವರು ನನ್ನಲ್ಲಿಗೆ ಬಂದು 'ಸರ್, ನಮ್ಮ ಎಲೆಕ್ಟ್ರಿಸಿಟಿ ಬೋರ್ಡ್‌ಗೆ ಸಾಮಾನುಗಳು ಇಲ್ಲ, ಸ್ಪೇರ್‌ಪಾರ್ಟ್ಸ್ ಇಲ್ಲ, ಟ್ರಾನ್ಸ್‌ಫಾರ್ಮರ್ಸ್ ಇಲ್ಲ, ಕೆಪಾಸಿಟರ್ಸ್ ಇಲ್ಲ' ಎಂದು ಹೇಳಿದರು. ನಮ್ಮ ತಂತ್ರಜ್ಞಾನದ ಬಳಕೆಯನ್ನು ನಾವು ಉಪಯೋಗಿಸಿಕೊಂಡು ತಕ್ಷಣ ರಾಣೆಬೆನ್ನೂರಿಗೆ ತಂತ್ರಜ್ಞಾನದ ಮಾಹಿತಿಯನ್ನು ಉಪಯೋಗಿಸಿಕೊಂಡು ಮಾತನಾಡಬಹುದು. ನಮ್ಮ ಕೆ.ಇ.ಬಿ. ಚೇರ್‌ಮನ್ ಕಚೇರಿಯಲ್ಲಿ ಕಂಪ್ಯೂಟರ್ ಇದೆ, ರಾಣೆಬೆನ್ನೂರಿನಲ್ಲಿರುವ ಕೆ.ಇ.ಬಿ. ಕಚೇರಿಯಲ್ಲಿ ಕಂಪ್ಯೂಟರ್ ಇದ್ದರೆ ನಾವು ಕಾಗದ ಬರೆಯಬೇಕಾಗಿಲ್ಲ, ವಿಡಿಯೋ ಕಾನ್‌ಫರೆನ್ಸ್ ಮಾಡಬಹುದು, ಅವನು ಏಕೆ ಇದ್ದಲ್ಲಿ, ಎಲ್ಲಿಗೆ ಹೋಗಿದ್ದ ಎನ್ನತಕ್ಕಂಥದ್ದಕ್ಕೆಲ್ಲ ಅವನು ಅಕೌಂಟಬಲ್ ಆಗುತ್ತಾನೆ, ಏಕೆ ಕಳುಹಿಸಿಲ್ಲ ಎನ್ನುವುದಕ್ಕೆ ಕೆ.ಇ.ಬಿ. ಚೇರ್‌ಮನ್‌ರವರು ಅಕೌಂಟಬಲ್ ಆಗುತ್ತಾರೆ. ನಾನು ಮೊನ್ನೆಯ ದಿವಸ ಧಾರವಾಡ ಜಿಲ್ಲಾಧಿಕಾರಿಯವರ ಜೊತೆಯಲ್ಲಿ ವಿಡಿಯೋ ಕಾನ್‌ಫರೆನ್ಸ್ ಮಾಡಿದೆ, ನಮ್ಮ ದೃಷ್ಟಿಯಲ್ಲಿ ಈ ತಂತ್ರಜ್ಞಾನವನ್ನು ವ್ಯಾಪಕವಾಗಿ ಬಳಸಬೇಕು ಎನ್ನುವ ಉದ್ದೇಶ ಏನೆಂದರೆ ಆಡಳಿತಯಂತ್ರ ಚುರುಕಾಗಿ ಸಾಗಬೇಕು, ಆ ದಿಶೆಯಲ್ಲಿ ಮೈಲಿಗಲ್ಲನ್ನು ನಾವು ಸಾಧಿಸಬೇಕು ಎನ್ನುವ ದೃಷ್ಟಿಯಿಂದ ವಿಡಿಯೋ ಕಾನ್‌ಫರೆನ್ಸ್ ಮುಂತಾದ ತಂತ್ರಜ್ಞಾನವನ್ನು ಬಳಸಿಕೊಳ್ಳುತ್ತಿದ್ದೇವೆ. ಬರೀ ಶೋಕಿಗೋಸ್ಕರ ಕಂಪ್ಯೂಟರ್ ತಂತ್ರಜ್ಞಾನದ ಮಾಹಿತಿಯನ್ನು ಉಪಯೋಗಿಸಿಕೊಳ್ಳುವುದಲ್ಲ, ಮೋಜಿಗೋಸ್ಕರ ಅಲ್ಲ. ಆಡಳಿತ ಯಂತ್ರ ಚುರುಕಾಗಿ ಇರಬೇಕೆಂದು ಮಾನ್ಯ ವಿರೋಧ ಪಕ್ಷದ ನಾಯಕರಾದ ಶ್ರೀ ಜಗದೀಶ ಶೆಟ್ಟರು ಏನು ಹೇಳಿದರು ಅದನ್ನು ನಾವು ಸಾಕ್ಷಾತ್ಕಾರ ಮಾಡಬೇಕು ಎನ್ನತಕ್ಕಂಥ ದೃಷ್ಟಿಯಿಂದ ಈ ಕಂಪ್ಯೂಟರ್ ತಂತ್ರಜ್ಞಾನವನ್ನು ಅಳವಡಿಸಿಕೊಳ್ಳುತ್ತಿದ್ದೇವೆ. ಇನ್ನು 30-35 ದಿವಸಗಳ ಒಳಗೆ ಪ್ರತಿಯೊಬ್ಬ ಜಿಲ್ಲಾಧಿಕಾರಿಗೂ ಕೂಡ ಈ ಕಂಪ್ಯೂಟರ್ ವ್ಯವಸ್ಥೆಯನ್ನು ಮಾಡಬೇಕೆಂದಿದ್ದೇವೆ. ಪ್ರತಿ ದಿನ ಬೆಳಿಗ್ಗೆ ಸುದ್ದಿ-ಸಮಾಚಾರಗಳು ಪತ್ರಿಕೆಗಳಲ್ಲಿ ಬರುತ್ತವೆ, ಎಲೆಕ್ಟ್ರಾನಿಕ್ ಮಾಧ್ಯಮದಲ್ಲಿ ಬರುತ್ತದೆ, ಇದರ ಬಗ್ಗೆ ಮುಖ್ಯಮಂತ್ರಿಗಳಾಗಲಿ, ಮಂತ್ರಿಗಳಾಗಲಿ, ವಿರೋಧಪಕ್ಷದ ನಾಯಕರಾಗಲಿ ತಕ್ಷಣ ಜಿಲ್ಲಾಧಿಕಾರಿಗಳ ಜೊತೆಯಲ್ಲಿ, ಸೂಪರಿಂಟೆಂಡೆಂಟ್ ಆಫ್ ಪೊಲೀಸ್ ಜೊತೆಯಲ್ಲಿ, ಜಿಲ್ಲಾಪರಿಷತ್ತಿನ ಚೀಫ್ ಎಕ್ಸಿಕ್ಯೂಟೀವ್ ಆಫೀಸರ್ ಜೊತೆಯಲ್ಲಿ ಮಾತನಾಡಲಿಕ್ಕೆ, ಮಾಹಿತಿಗಳನ್ನು ಸಂಗ್ರಹ ಮಾಡಲಿಕ್ಕೆ ಇದು ಒಂದು ಅತ್ಯಾವಶ್ಯಕವಾಗಿ ನಾವು ಅಳವಡಿಸಿಕೊಳ್ಳಲೇ ಬೇಕಾಗಿರತಕ್ಕಂಥ ಒಂದು ವಿಧಾನ. ಈ ಫೈಲ್ ಸಿಸ್ಟಮ್ 20ನೇ ಶತಮಾನಕ್ಕೆ ಮುಗಿದುಹೋಗಬೇಕಾಗುತ್ತದೆ. ಕೊನೆಯ ಪಕ್ಷ 21ನೇ ಶತಮಾನದಿಂದ ನಾವು ಈ ತಂತ್ರಜ್ಞಾನದ ಬಳಕೆಯನ್ನು ಇನ್ನೂ ಹೆಚ್ಚು ಮಾಡಬೇಕು. ಇದರಲ್ಲಿ ಕೂಡ ನಾವು ಫೈಲ್‌ಗಳನ್ನು ಲಾಕ್ ಮಾಡಬಹುದು. ಕಂಪ್ಯೂಟರ್‌ಗಳಲ್ಲಿ ನಮ್ಮ ಮಾಹಿತಿಗಳೆಲ್ಲವನ್ನೂ ಕೂಡ ಸಂಗ್ರಹಿಸಬಹುದು.

ಒಂದು ಬಟನ್ ಒತ್ತಿದರೆ ಆ ಹಿಂದಿನ ದಸ್ತಾವೇಜುಗಳೆಲ್ಲಾ ಬರುತ್ತವೆ. ನೀವು ಫೈಲುಗಳನ್ನು ಸಂಗ್ರಹ ಮಾಡಿ ಅದರ ದೂಳು ಕುಡಿಯಬೇಕಾದುದಿಲ್ಲ, ಅದರಿಂದ ಅಲರ್ಜಿ ಆಗಬೇಕಾಗಿಲ್ಲ, ಕಡತಗಳನ್ನು ಹೊತ್ತುಕೊಂಡು ಬರಬೇಕಾದುದಿಲ್ಲ, ಆದ್ದರಿಂದ ನಾನು ವಿರೋಧ ಪಕ್ಷದ ನಾಯಕರಿಗೆ ಒಂದು ಕಂಪ್ಯೂಟರ್ ವ್ಯವಸ್ಥೆಯನ್ನು ಮಾಡುತ್ತೇನೆ, ತಾವು ಅದರ ವ್ಯಾಪಕವಾದಂಥ ಉಪಯೋಗವನ್ನು ಮಾಡಿ ಆ ಮೂಲಕ ಸರ್ಕಾರಕ್ಕೆ ನಾವು ಎಲ್ಲಿ ತಪ್ಪಿಹೋಗುತ್ತೇವೆ. ಅಲ್ಲಿ ನಮಗೆ ನೀವು ಮಾರ್ಗದರ್ಶಕವಾಗಬೇಕು ಎಂದು ಹೇಳುತ್ತಾ, ಮತ್ತು ಪ್ರತಿಯೊಬ್ಬ ಸದಸ್ಯರಿಗೂ ಕೂಡ ಸರ್ಕಾರದ ವತಿಯಿಂದ ಕಂಪ್ಯೂಟರುಗಳನ್ನು ತಮಗೆಲ್ಲರಿಗೂ ಕೂಡ ಸಪ್ಲೈ ಮಾಡಬೇಕು ಎನ್ನುವ ಉದ್ದೇಶವನ್ನಿಟ್ಟುಕೊಂಡಿದ್ದೇವೆ. ಇದರ ಮೂಲಕ ಗ್ರಾಮೀಣ ಪ್ರದೇಶದಲ್ಲಿರತಕ್ಕಂಥ ನಮ್ಮ ರೈತಾಪಿ ಜನಗಳು, ಕೃಷಿಕಾರ್ಮಿಕರು, ಹಣ್ಣು, ಈರುಳ್ಳಿ, ಮೆಣಸಿನಕಾಯಿ, ಜೋಳ, ರಾಗಿ ಬೆಳೆಯತಕ್ಕಂಥ ಇವರೆಲ್ಲರಿಗೂ ಕೂಡ ನಾವು ತಂತ್ರಜ್ಞಾನದ ಮಹತ್ವವನ್ನು ಆ ತಂತ್ರಜ್ಞಾನದ ಮಾಹಿತಿಯ ಮೂಲಕ ಅವರು ಜೀವನವನ್ನು ಹೇಗೆ ಸುಧಾರಣೆ ಮಾಡಿಕೊಳ್ಳಬಹುದು, ಕ್ವಾಲಿಟಿ ಆಫ್ ಲೈಫ್ ಹೇಗೆ ಉತ್ತಮವಾಗಬಹುದು ಎನ್ನತಕ್ಕಂಥದ್ದರ ಬಗ್ಗೆ ವ್ಯಾಪಕವಾದ ಪ್ರಚಾರವನ್ನು ಮಾಡಬೇಕು ಎನ್ನುವ ಸಿದ್ಧಾಂತಕ್ಕೆ ನಾವು ಬಂದಿದ್ದೇವೆ. ಮಾನ್ಯ ಅಧ್ಯಕ್ಷರೆ, ತಮ್ಮ ಅಪ್ಪಣೆ ಮೂಲಕ ಹೇಳುತ್ತಿದ್ದೇನೆ, ಮಾನ್ಯ ಸದಸ್ಯರುಗಳು ಈ ತಂತ್ರಜ್ಞಾನದ ಮಾಹಿತಿಯನ್ನು ಪಡೆಯುವುದಕ್ಕೆ ನಾವು ವಿಶೇಷವಾದಂಥ ವ್ಯವಸ್ಥೆಯನ್ನು ಮಾಡುತ್ತೇವೆ. ಈ ವಿಚಾರದಲ್ಲಿ ಮಾನ್ಯ ಸಿ. ಬೈರೇಗೌಡರು ನಮ್ಮ ಇನ್‌ಫಾರ್ಮೇಷನ್ ಟೆಕ್ನಾಲಜಿ ಸೆಕ್ರೆಟರಿಯವರ ಜೊತೆಗೆ ಈಗಾಗಲೇ ಸಂಪರ್ಕ ಬೆಳೆಸಿದ್ದಾರೆ ಎನ್ನತಕ್ಕಂಥದ್ದನ್ನು ತಿಳಿದು ನನಗೆ ಬಹಳ ಸಂತೋಷವಾಯಿತು. ಆದ್ದರಿಂದ ಪ್ರತಿಯೊಬ್ಬ ಮಾನ್ಯ ಸದಸ್ಯರಿಗೂ ಕೂಡ ಇದರ ಅವಕಾಶವನ್ನು ನಾವು ಕಲ್ಪಿಸಿಕೊಡಬೇಕು ಎನ್ನುವಂಥ ದೃಷ್ಟಿಯಿಂದ ಮಾಡುತ್ತಿದ್ದು ಇದರ ಸದುಪಯೋಗವನ್ನು ಎಲ್ಲರೂ ಬಳಸಿಕೊಳ್ಳಬೇಕು ಎಂದು ನಾನು ತಮ್ಮಲ್ಲಿ ವಿನಂತಿಸಿಕೊಳ್ಳುತ್ತೇನೆ. ಇನ್ನು ನಿಯಮಾವಳಿಗಳ ಸರಳೀಕರಣದ ವಿಚಾರದ ಬಗ್ಗೆ ಹೇಳುವುದಾದರೆ ಇದು ಬಹಳ ಅಗತ್ಯವಾಗಿ ಆಗಬೇಕಾಗಿರತಕ್ಕಂಥ ವಿಚಾರವಾಗಿದೆ. ಇದು ಹೇಳಲಿಕ್ಕೆ ಸುಲಭ ಆದರೆ ಇದನ್ನು ಕಾರ್ಯರೂಪಕ್ಕೆ ತರಲಿಕ್ಕೆ ಬಹಳ ಕಷ್ಟ ಎನ್ನತಕ್ಕಂಥ ವಿಚಾರವನ್ನು ಮಾನ್ಯ ಸದಾನಂದಗೌಡರು ಮತ್ತು ಶ್ರೀ ಸುರೇಶ್ ಕುಮಾರ್ ಅವರು ಒಪ್ಪುತ್ತಾರೆಂದು ನಾನು ಭಾವಿಸುತ್ತೇನೆ. It may be laudable objective, but it is very difficult to implement. ಅದರಲ್ಲಿಯೂ ನಮ್ಮ ಅಧಿಕಾರಿಶಾಹಿಗಳು ಅವರೇ ರೂಲ್ ಬುಕ್ ಇಟ್ಟುಕೊಂಡುಬಿಡುತ್ತಾರೆ. ಅವರು ಆ ರೂಲ್ ಬುಕ್‌ಗೆ accountable; not beyond that. ಅವರದು ತಪ್ಪು ಎಂದು ಹೇಳಲಿಕ್ಕೆ ಬರುವುದಿಲ್ಲ. ಕಾರಣ ನಾವೇ ಮಾಡಿರತಕ್ಕಂಥ ರೂಲ್ಸ್, ನಾವೇ ಮಾಡಿರತಕ್ಕಂಥ ಕಾನೂನು, ಆ ಕಾನೂನಿನ ಚೌಕಟ್ಟಿನೊಳಗೆ ಅವರು ಇಂಟರ್‌ಪ್ರಿಟೇಷನ್ ಮಾಡತಕ್ಕಂಥದ್ದನ್ನು ಅವರು ಮಾಡುತ್ತಾರೆ. ನಾವು ಬೇಕಾದಷ್ಟು ಯೋಜನೆಗಳನ್ನು ಜಾರಿಗೆತರಲು ಪ್ರಯತ್ನ ಮಾಡುತ್ತೇವೆ, ಆದರೆ ಇವಕ್ಕೆಲ್ಲ ಸಂಪನ್ಮೂಲಗಳನ್ನು ಎಲ್ಲಿ ತರುತ್ತೇವೆ? ಈ ಪ್ರಶ್ನೆಯನ್ನು ಕೂಡ ಕೆಲವು ಮಾನ್ಯ ಸದಸ್ಯರು ಕೇಳಿದ್ದಾರೆ. ಇದು ಸ್ವಾಭಾವಿಕವಾಗಿ ಉದ್ಭವಿಸತಕ್ಕಂಥ ಪ್ರಶ್ನೆ. ಉದಾರೀಕರಣ ಆದಮೇಲೆ ನಾನು ಭಾಷೆಯ ಆರ್ಥಿಕ ಸಂಸ್ಥೆಗಳು ಬಹಳಮಟ್ಟಿಗೆ ಧನಸಹಾಯವನ್ನು ಮಾಡಲಿಕ್ಕೆ ಭಾರತ ದೇಶದಲ್ಲಿ ಅವಕಾಶಗಳನ್ನು ಮಾಡಿಕೊಟ್ಟಿದ್ದಾರೆ. ವಿಶ್ವಬ್ಯಾಂಕ್‌ನವರು, ಇಂಟರ್‌ನ್ಯಾಷನಲ್ ಮಾನಿಟರಿ ಫಂಡ್‌ನವರು, ಒ.ಇ.ಸಿ.ಎಫ್.ನವರು ಇಂಥ ಹತ್ತುಹಲವಾರು ಸಂಸ್ಥೆಗಳು ಇವೆ.

ಕೆಲವು ಸಾರಿ ಈ ಬೈವಾಟರಲ್ ಫಂಡಿಂಗ್ ಬಗ್ಗೆ ಬ್ರಿಟಿಷ್ ದೇಶದವರು, ಜರ್ಮನಿ ದೇಶದವರು, ಜಪಾನ್ ದೇಶದವರು ಇವರೆಲ್ಲ ಕೂಡ ಫಂಡ್ ಮಾಡಲಿಕ್ಕೆ ತಯಾರಿದ್ದಾರೆ. ಆದರೆ ಇವನ್ನೆಲ್ಲ ಉಪಯೋಗಿಸಿಕೊಳ್ಳಲಿಕ್ಕೆ ನಾವು ಎಷ್ಟರಮಟ್ಟಿಗೆ ಪ್ರಯತ್ನ ಮಾಡುತ್ತೇವೆ ಎನ್ನುವುದನ್ನು ಯೋಚನೆ ಮಾಡಿದಾಗ ಅದಕ್ಕೆ ನಾವು ಹೆಚ್ಚು ಒತ್ತು ಕೊಡಬೇಕು ಎನ್ನುವುದು ಈ ಸರ್ಕಾರದ ಇರಾದೆ ಆಗಿದೆ. ಡೀಸೆಲ್ ಬೆಲೆಯನ್ನು ಕೇಂದ್ರಸರ್ಕಾರದವರು ಏರಿಸಿರುವುದರಿಂದ ನಾವು ಕೆ.ಎಸ್.ಆರ್.ಟಿ.ಸಿ. ಬಸ್ ಟಿಕೇಟ್ ದರಗಳನ್ನು ಏರಿಸಬೇಕಾದ ಅನಿವಾರ್ಯವಾದಂಥ ಪರಿಸ್ಥಿತಿ ಬಂತು. ಎಷ್ಟು ಏರಿಸಿದರು, ಎಷ್ಟು ಏರಿಸಬೇಕಾಗಿತ್ತು ಎನ್ನುವುದರ ಬಗ್ಗೆ ಪ್ರಾಮಾಣಿಕವಾದಂಥ ಅಭಿಪ್ರಾಯ ವ್ಯತ್ಯಾಸಗಳು ಇರಬಹುದು. ಆದರೆ ಒಂದು ಮೂಲಭೂತವಾದ ಸತ್ಯ ಏನೆಂದರೆ ಇವತ್ತು ಕೇಂದ್ರಸರ್ಕಾರದವರು ಕೂಡ ಅನಿವಾರ್ಯವಾದಂಥ ಒಂದು ಸಂದಿಗ್ಧ ಪರಿಸ್ಥಿತಿಯಲ್ಲಿ ಸಿಕ್ಕಿಹಾಕಿಕೊಂಡಿರತಕ್ಕ ಸಂಸ್ಥೆಗಳ ಬಗ್ಗೆ ಇಂಟರ್‌ನ್ಯಾಷನಲ್ ಆಯಿಲ್ ಪ್ರೈಸಸ್ ಯಾವಾಗ ಹೆಚ್ಚಾಗುತ್ತದೆ, ನಾವು ಹೊರಗಡೆ ರಾಷ್ಟ್ರದಿಂದ ಎಣ್ಣೆಯನ್ನು ಎಲ್ಲಿಯವರೆಗೆ ನಮ್ಮ ದೇಶಕ್ಕೆ ತರಿಸಿಕೊಳ್ಳಬೇಕಾಗುತ್ತದೆ. ಅಲ್ಲಿಯವರೆಗೆ ಇವುಗಳೆಲ್ಲವೂ ಒಂದು ವಿಷವ್ಯೂಹ ಎನ್ನುವುದನ್ನು ನಾವು ಅರ್ಥ ಮಾಡಿಕೊಂಡರೆ ಸಾಕು. ಈ ವಿಚಾರವನ್ನು in its true perspective, proper perspective ನಾವು ಯೋಚನೆ ಮಾಡಲಿಕ್ಕೆ, ಅದರ ಬಗ್ಗೆ ಒಂದು ವ್ಯೂ ತೆಗೆದುಕೊಳ್ಳಲಿಕ್ಕೆ ಅವಕಾಶ ಆಗುತ್ತದೆ ಎನ್ನತಕ್ಕಂಥ ದೃಷ್ಟಿಯಿಂದ ಈ ಮಾತನ್ನು ಹೇಳುತ್ತಿದ್ದೇನೆ. ನಾವು ಮುಂದಿನ ದಿನಗಳಲ್ಲಿ ಎಲ್ಲಾ ಕ್ಷೇತ್ರಗಳಲ್ಲಿಯೂ ಕೂಡ ಹೆಚ್ಚು ಭಾಷೆಯ ಆರ್ಥಿಕ ಸಂಸ್ಥೆಗಳು ಮತ್ತು ನಮ್ಮ ದೇಶದಲ್ಲಿಯೇ ಕೇಂದ್ರ ಸರ್ಕಾರ ಸೃಷ್ಟಿಮಾಡಿರತಕ್ಕಂಥ ಆ ಸಂಸ್ಥೆಗಳು ಏಶಿಯನ್ ಡೆವಲಪ್‌ಮೆಂಟ್ ಬ್ಯಾಂಕ್ ಇವೆ, ಎ.ಡಿ.ಬಿ., ಓ.ಇ.ಸಿ.ಎಫ್. ಜಪಾನ್‌ನವರು ಪ್ರತಿನಿಧಿಸುತ್ತಿರುವ ಬ್ಯಾಂಕು, ಐ.ಎಂ.ಎಫ್.ನವರು ಕೇಂದ್ರ ಸರ್ಕಾರದ ಮೂಲಕ ರಾಜ್ಯಗಳಿಗೆ ಸಾಲವನ್ನು ಕೊಡುತ್ತಾರೆ. ವರ್ಲ್ಡ್ ಬ್ಯಾಂಕ್‌ನವರು ರಾಜ್ಯಗಳಿಗೆ ನೇರವಾಗಿ ಸಾಲವನ್ನು ಕೊಡುತ್ತಾರೆ, ಗ್ರ್ಯಾಂಟ್ಸ್‌ನ್ನು ಕೊಡುತ್ತಾರೆ. ಇವೆಲ್ಲಾ ಸಾಫ್ಟ್ ಲೋನ್ ಇರುತ್ತವೆ. ನಾನು ಒಂದು ಮಾತನ್ನು ಈ ಸಭೆಯ ಗಮನಕ್ಕೆ ತರಲಿಕ್ಕೆ ಅವನ್ನು ಸ್ಪಷ್ಟಪಡಿಸಲಿಕ್ಕೆ ಈ ಅವಕಾಶವನ್ನು ಉಪಯೋಗಿಸಿಕೊಳ್ಳುತ್ತೇನೆ; ಅದೇನೆಂದರೆ, ಕೆಲವು ಕಠಿಣ ನಿರ್ಧಾರಗಳನ್ನು ನಾವು ತೆಗೆದುಕೊಳ್ಳಬೇಕಾಗುತ್ತದೆ. ಏಕೆಂದರೆ, ನಮ್ಮ ಮುಂದೆ ಸಾಫ್ಟ್ ಆಪ್ಷನ್ಸ್ ಇಲ್ಲ. ಹೇಗೆ ಕೇಂದ್ರಸರ್ಕಾರದ ಮುಂದೆ ಸಾಫ್ಟ್ ಆಪ್ಷನ್ಸ್ ಉಳಿದಿಲ್ಲವೋ, ಹಾಗೆಯೇ ಪ್ರತಿಯೊಂದು ರಾಜ್ಯ ಸರ್ಕಾರದ ಮುಂದೆಯೂ ಸಾಫ್ಟ್ ಆಪ್‌ಸೆಷನ್ಸ್ ಉಳಿದಿಲ್ಲವೆನ್ನುವುದನ್ನು ನಾವು ಅರ್ಥ ಮಾಡಿಕೊಳ್ಳಬೇಕು. ಅದನ್ನು ನಾವು ಅಪ್ರಿಷಿಯೇಟ್ ಮಾಡಬೇಕೆಂದು ನಾನು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ. ಇನ್ನು ವಿದ್ಯುಚ್ಛಕ್ತಿ ವಿಚಾರವನ್ನು ಹೇಳುವುದಾದರೆ, ಯಾವ ಪ್ರಮಾಣದಲ್ಲಿ ನಮ್ಮ ವಿದ್ಯುತ್ ಉತ್ಪಾದನೆಯಾಗಬೇಕಿತ್ತೋ, ಆ ಪ್ರಮಾಣದಲ್ಲಿ ಆಗಲಿಲ್ಲವೆನ್ನುವುದು ನನ್ನ ಅನಿಸಿಕೆ. ಆದರೆ, ಕಳೆದ 5 ವರ್ಷಗಳಲ್ಲಿ ಸರ್ಕಾರೀ ಕ್ಷೇತ್ರದಲ್ಲಿ ಕರ್ನಾಟಕ ಪವರ್ ಕಾರ್ಪೋರೇಷನ್ ಅತ್ಯಂತ ಗಮನೀಯವಾದ ವಿದ್ಯುತ್ ಉತ್ಪಾದನೆಯನ್ನು ಮಾಡಿರುವುದಕ್ಕೋಸ್ಕರ ನಾನು ಆ ಕೆಪಿಸಿಯನ್ನು ಮತ್ತು ಹಿಂದಿನ ಸರ್ಕಾರವನ್ನು ಅಭಿನಂದಿಸುತ್ತೇನೆ. ಏಕೆಂದರೆ, ಪಬ್ಲಿಕ್ ಸೆಕ್ಟಾರ್ ಆದ ಕೆಪಿಸಿ ಈಸ್ ಎ ಷೋ-ಕೇಸ್. ಕಳೆದ 5 ವರ್ಷಗಳಲ್ಲಿ ಅದು ಸುಮಾರು 800 ಎಂಡಬ್ಲ್ಯೂ. ವಿದ್ಯುಚ್ಛಕ್ತಿ ಉತ್ಪಾದನೆಯನ್ನು ಮಾಡಿದೆ. ಅದನ್ನು ಮಾಡದೇ ಹೋಗಿದ್ದರೆ, ನಮ್ಮ ರಾಜ್ಯದಲ್ಲಿ ತೀವ್ರತರವಾದ ವಿದ್ಯುತ್ ಕ್ಷಾಮ ಉಂಟಾಗುತ್ತಿತ್ತೆನ್ನುವುದನ್ನು

ನಾನು ಬಲ್ಲೆ. ಆದರೆ, ಖಾಸಗಿ ಕ್ಷೇತ್ರದಲ್ಲಿ ಯಾವ ಪ್ರಮಾಣದಲ್ಲಿ ನಾವು ವಿದ್ಯುತ್ ಉತ್ಪಾದನೆಯನ್ನು ನಿರೀಕ್ಷಿಸಿದ್ದೆವೋ, ಆ ಪ್ರಮಾಣದಲ್ಲಿ ಆಗಿಲ್ಲವೆನ್ನುವ ಮಾತನ್ನು ಕೂಡ ನಾವು ಹೇಳದೇ ಹೋದರೆ, ಪೂರ್ಣ ದೃಷ್ಟಿಯಿಂದ ಒಂದು ವಿಚಾರವನ್ನು ನೋಡಿದಂತಾಗುವುದಿಲ್ಲ. ಇದಕ್ಕೆ ಕಾರಣವೇನೆಂಬುದನ್ನು ನಾವು ಅಂತರ್ಮುಖಿಗಳಾಗಿ ಯೋಚಿಸಬೇಕಾಗಿದೆ. ವಿದ್ಯುತ್ ಬೇಡವೆ? 1991, 93ನೇ ಇಸವಿಯಲ್ಲಿ ಸೆಂಟ್ರಲ್ ಎಲೆಕ್ಟ್ರಿಕ್ ಆಕ್ಟ್‌ಗೆ ಕೇಂದ್ರಸರ್ಕಾರದವರು ಏಕೆ ತಿದ್ದುಪಡಿ ತಂದರು? ನಮ್ಮ ರಾಜ್ಯಗಳ ಒತ್ತಾಯದ ಮೇಲೆಯೇ ಆ ತಿದ್ದುಪಡಿ ಆದದ್ದು. ಕಾರಣ, ಕೇವಲ ಸರ್ಕಾರಿ ಸಂಸ್ಥೆಗಳೇ ಈ ವಿದ್ಯುತ್ ಉತ್ಪಾದನೆಯಲ್ಲಿ ಬಂಡವಾಳವನ್ನು ಹೂಡುವುದು ಸಾಕಾಗುವುದಿಲ್ಲವಾದ್ದರಿಂದ ಖಾಸಗಿ ಕ್ಷೇತ್ರಕ್ಕೆ ಮುಕ್ತ ಅವಕಾಶವನ್ನು ಕೊಟ್ಟರೆ, ನಮ್ಮ ವಿದ್ಯುತ್ತಿನ ಕೊರತೆಯನ್ನು ನಿವಾರಣೆ ಮಾಡುವುದಕ್ಕೆ ಇದೊಂದು ಒಳ್ಳೆಯ ಹೆಜ್ಜೆಯಾಗಬಹುದೆನ್ನುವ ದೃಷ್ಟಿಯಿಂದ ಈ ತಿದ್ದುಪಡಿ ಮಾಡಲಾಯಿತು. ಆದರೆ, ನಮ್ಮ ರಾಜ್ಯದಲ್ಲಿ ದೊಡ್ಡ ದೊಡ್ಡ ಪ್ರಾಜೆಕ್ಟ್‌ಗಳ ವಿಚಾರ ಹೇಳುವುದಾದರೆ, ಕೊಜೆಂಟ್ರಿಕ್ಸ್ 1000 ಎಂ.ಡಬ್ಲ್ಯೂ ವಿದ್ಯುತ್ ಉತ್ಪಾದಿಸಬೇಕು, ಸೂಪ ಥರ್ಮಲ್ ಪವರ್ ಸ್ಟೇಷನ್ನನ್ನು ರಷ್ಯಾದವರು ಮಂಗಳೂರಿನಲ್ಲಿ ಮಾಡಬೇಕೆಂದು ಯೋಚಿಸಿದ್ದರು. ಆದರೆ, ಸೋವಿಯತ್ ಒಕ್ಕೂಟ ಒಡೆದು ಹೋದ ಮೇಲೆ, ಅವರಿಗೆ ಆ ಶಕ್ತಿ ಉಳಿಯಲಿಲ್ಲ. ಆದ್ದರಿಂದ, ನಾವು ಪರ್ಯಾಯವಾಗಿ 1992, 93, 94ರಲ್ಲಿ ಯೋಚನೆ ಮಾಡಬೇಕಾಯಿತು. ಆಗ ನಮ್ಮ ಹಿಂದಿನ ಮುಖ್ಯಮಂತ್ರಿಗಳಾಗಿದ್ದ ಶ್ರೀ ಎಸ್. ಬಂಗಾರಪ್ಪನವರು ಅಮೇರಿಕಾ ದೇಶಕ್ಕೆ ಹೋಗಿ ಹಲವಾರು ಸಂಸ್ಥೆಗಳವರ ಜೊತೆಯಲ್ಲಿ ಮಾತನಾಡಿ, ಕೆಲವು ಎಂ.ಓ.ಯು.ಗಳನ್ನು ಪಡೆದರು. ಅದಕ್ಕೆ ಹಿಂದಿನ ಮುಖ್ಯಮಂತ್ರಿಗಳಾಗಿದ್ದ ಶ್ರೀ ಎಂ. ವೀರಪ್ಪಮೊಯಿಲಿಯವರು ಚಾಲನೆ ಕೊಡಲು ಸಾಕಷ್ಟು ಪ್ರಯತ್ನಿಸಿದರು. ಅನಂತರ, 1994ರಲ್ಲಿ ಅಸ್ತಿತ್ವಕ್ಕೆ ಬಂದ ಸರ್ಕಾರವೂ ಕೂಡ ಇದರ ಬಗ್ಗೆ ತೀವ್ರವಾಗಿ ಗಮನಹರಿಸಿತೆನ್ನುವುದನ್ನು ನಾನು ಒಪ್ಪುತ್ತೇನೆ. ಆದರೆ, ದುರ್ದೈವದಿಂದ, ಈ ಕೊಜೆಂಟ್ರಿಕ್ಸ್ ಹಲವಾರು ವಿವಾದಗಳ ಸುಳಿಗೆ ಸಿಕ್ಕಿದ ಒಂದು ಪ್ರಾಜೆಕ್ಟ್ ಆಗಿ ಪರಿಣಮಿಸಿದೆ. ಸುಪ್ರೀಂ ಕೋರ್ಟಿನ ಮುಂದೆ ಯಾರೋ ಒಬ್ಬರು ಪಿ.ಐ.ಎಲ್. ಹಾಕಿ, ಸುಪ್ರೀಂ ಕೋರ್ಟು ಸ್ಟೇ ಕೊಟ್ಟಿತು. ಪರಿಸರವಾದಿಗಳ ವಿಚಾರವೊಂದು ಕಡೆ ಉಂಟು. ಆದ್ದರಿಂದ, ಸುಪ್ರೀಂಕೋರ್ಟಿನ ತೀರ್ಪನ್ನು ನಾವು ಎದುರು ನೋಡುತ್ತಿದ್ದೇವೆ. ಹಾಗೆಯೇ, ಮಂಗಳೂರಿನಲ್ಲಿ ಮತ್ತೊಂದು ಸಾವಿರ ಎಂ.ಡಬ್ಲ್ಯೂ. ಪ್ರಾಜೆಕ್ಟ್‌ನ್ನು ಮಾಡಲು ಯೋಚಿಸುತ್ತಿದ್ದೇವೆ. ಇವುಗಳು ಅಗತ್ಯವಾಗಿ ಆಗಬೇಕಿರುವಂಥವುಗಳು. ಮಾನ್ಯ ಶಾಸನ ಸಭೆಯ ಸದಸ್ಯರು ತಮ್ಮ ಕ್ಷೇತ್ರಗಳಲ್ಲಿ ಇಂದು ಸರಿಯಾದ ಗುಣಮಟ್ಟದ ವಿದ್ಯುತ್ ಕೊಡುವುದಿರಲಿ, ವಿದ್ಯುತ್ ಎನ್ನುವುದನ್ನೇ ಹರಿಸಲು ಇಂದು ಬಹಳ ಕಷ್ಟಸಾಧ್ಯವಾದ ಪರಿಸ್ಥಿತಿ ಇದೆ. ಈಗಲೇ ನಾನು ಮುನ್ನೆಚ್ಚರಿಕೆ ಕೊಡುತ್ತಿದ್ದೇನೆ, ಫೆಬ್ರವರಿ, ಮಾರ್ಚ್, ಏಪ್ರಿಲ್ ತಿಂಗಳು ಅತ್ಯಂತ ಕಠಿಣತರವಾದ ತಿಂಗಳಾಗುತ್ತವೆ. ಏಕೆಂದರೆ, ಬೇಸಿಗೆ ಶುರುವಾಗುತ್ತದೆ. ನೀರಿನ ಹಾಹಾಕಾರ ಜಾಸ್ತಿಯಾಗುತ್ತದೆ. ಕರೆಂಟ್ ಮೇಲೆ ಒತ್ತಡವಿರುತ್ತದೆ. ಆದ್ದರಿಂದ, ಇದನ್ನು 3 ತಿಂಗಳಲ್ಲಿ ಸುಧಾರಣೆ ಮಾಡಲು ಸಾಧ್ಯವಾಗುವುದಿಲ್ಲ. 3 ತಿಂಗಳಲ್ಲಾಗಲಿ, 6 ತಿಂಗಳಲ್ಲಾಗಲಿ ವಿದ್ಯುತ್ ಪರಿಸ್ಥಿತಿಯನ್ನು ನಾವು ಸುಧಾರಣೆ ಮಾಡುತ್ತೇವೆಂದರೆ ಆಗದು, ಕನಿಷ್ಠ ಒಂದು ವರ್ಷವಾದರೂ ಅವಕಾಶವನ್ನು ಕೊಡಬೇಕಾಗುತ್ತದೆ. ಆ ಒಂದು ವರ್ಷದಲ್ಲಿ ನಾವು ಏನು ಸುಧಾರಣೆಗಳನ್ನು ಮಾಡುತ್ತೇವೆನ್ನುವುದರ ಬಗ್ಗೆ ನಾನು ಒಂದೆರಡು ಮಾತುಗಳನ್ನು ಈ ಸಭೆಯ ಗಮನಕ್ಕೆ ತರುವುದಕ್ಕೆ ತಮ್ಮ ಅಪ್ಪಣೆ

ಕೇಳುತ್ತಿದ್ದೇನೆ. ಏಕೆಂದರೆ, ನಾನು ವಿದ್ಯುತ್ ವಿಷಯದಿಂದ ಪ್ರಾರಂಭಿಸುತ್ತಿರುವ ಉದ್ದೇಶವಾದರೂ ಕೂಡ ವಿದ್ಯುತ್ ನಮ್ಮೆಲ್ಲ ಕೆಲಸ-ಕಾರ್ಯಗಳಿಗೂ ಕೂಡ ಪೂರಕವಾಗಿ ಬೇಕಾಗಿರುವ ಅತ್ಯಂತ ಮಹತ್ವದ ಒಂದು ವ್ಯವಸ್ಥೆ. ಆದ್ದರಿಂದ, ವಿದ್ಯುತ್ ವಿಚಾರದ ಬಗ್ಗೆ ಮಾತನಾಡುವ ಕಾಲದಲ್ಲಿ, ನಾವು ಮೂಲಭೂತ ಸೌಕರ್ಯವೆಂದು ಹೇಳಿ ಇದನ್ನು ಕರೆಯುತ್ತಿದ್ದೇವೆ. ಕನಿಷ್ಟ ಮೂಲಭೂತ ಸೌಕರ್ಯ ಒದಗಿಸುವ ಕಾರ್ಯಕ್ರಮದಡಿ ಈ ವಿದ್ಯುತ್ ಸೌಲಭ್ಯವನ್ನು ತರಬೇಕೆಂದು ಸರ್ಕಾರ ನಿರ್ಣಯಿಸಿದೆ. ಗ್ರಾಮೀಣ ವಿದ್ಯುದೀಕರಣಕ್ಕೆ ಸರ್ಕಾರ ಅತ್ಯಂತ ಹೆಚ್ಚಿನ ಆದ್ಯತೆಯನ್ನು ಕೊಡುತ್ತದೆನ್ನುವುದನ್ನು ನಾನಿಲ್ಲಿ ಪುನರ್ ಪ್ರತಿಪಾದನೆ ಮಾಡುತ್ತಿದ್ದೇನೆ. ಇಂಧನ ಕ್ಷೇತ್ರದ ಸುಧಾರಣೆಗೆ ನಿರ್ದಿಷ್ಟ ಹಾಗೂ ಸಮಯಾಧಾರಿತ ಕಾರ್ಯಕ್ರಮವನ್ನು ರೂಪಿಸಬೇಕಾಗುತ್ತದೆ. ವಿದ್ಯುತ್ ಸಾಗಣೆ ಮತ್ತು ವಿತರಣಾ ಜಾಲ ಸುಧಾರಣೆಗೆ ನವೆಂಬರ್ 2000ನೇ ಇಸವಿ ವೇಳೆಗೆ ಒಂದೂವರೆ ಸಾವಿರ ಕೋಟಿ ರೂಪಾಯಿಗಳನ್ನು ನಾವು ವೆಚ್ಚ ಮಾಡಬೇಕೆಂದು ನಿರ್ಣಯವನ್ನು ತೆಗೆದುಕೊಂಡಿದ್ದೇವೆ. ಅಷ್ಟು ಹಣವನ್ನು ವೆಚ್ಚ ಮಾಡುವ ಉದ್ದೇಶವೇನೆಂದರೆ, ಇಂದು ನಮ್ಮ ಟ್ರಾನ್ಸ್‌ಮಿಷನ್ ಲಾಸಸ್ 30 ಪರ್ಸೆಂಟ್ ಎಂದು ಅಂದಾಜು ಮಾಡುತ್ತಿದ್ದೇನೆ. ಕೇಂದ್ರದಲ್ಲಿಯೂ ನಾನಿದರ ಬಗ್ಗೆ ಚರ್ಚಿಸಿದ್ದೇನೆ. ಏನೆಂದರೆ, ಆಕಾಶದಲ್ಲಿ ಎಷ್ಟು ನಕ್ಷತ್ರಗಳಿವೆ ಎಂದು ಕೇಳಿದ ಹಾಗೆ? ಸುಮಾರು ಒಂದು ಕೋಟಿ 20 ಎಂದು ನಾನು ಹೇಳಿದರೆ, ಮಾನ್ಯ ಆರಗ ಜ್ಞಾನೇಂದ್ರರವರು ಇಲ್ಲ, 18 ಲಕ್ಷ ನಕ್ಷತ್ರಗಳಿವೆ, ಎಣಿಸಿ ನೋಡಿ ಎಂದ ಹಾಗೆ; ಆ ರೀತಿ, ಸರಿಯಾದ ಮಾಹಿತಿ ಇಲ್ಲ. ಇದನ್ನು ತಿಳಿಯಲು ನಾವು ಮೀಟರ್ ಎಲ್ಲಿ ಹಾಕಿದ್ದೇವೆ? ಮೀಟರ್ ಜೋಡಿಸದೆ, ನೀವು ವಿದ್ಯುತ್ ಎಷ್ಟು ಉಪಯೋಗಿಸಿದ್ದೇವೆಂದು ಹೇಳುವುದು ಹೇಗೆ? ಭಾಗ್ಯಜ್ಯೋತಿ ವಿಷಯದಲ್ಲಿ ಹೇಳುವುದಾದರೆ, ಸಾಮಾಜಿಕ ಕಳಕಳಿಯಿಂದ ಸಾಮಾಜಿಕ ನ್ಯಾಯ, ಸುಧಾರಣೆಯಿಂದೆ ಬಡವರಿಗೆ, ಇದರ ಸವಲತ್ತುಗಳನ್ನು ಕೊಡಬೇಕೆಂದು ಕಾಂಗ್ರೆಸ್ ಸರ್ಕಾರದ ಯೋಚನೆ ಏನಿತ್ತು, ಆ ಯೋಚನೆಗೆ ಇಂದು ನಾವು ಭಾಗ್ಯಜ್ಯೋತಿಯನ್ನು ಕೇವಲ ಒಂದು ಬಲ್ಬ್ ಎಂದು ಹೇಳಬಹುದು. ಅದರಲ್ಲಿ ರೆಫ್ರಿಜಿಯೇಟರ್ ಹಾಕುತ್ತಾರೆ, ಟಿ.ವಿ. ಹಾಕುತ್ತಾರೆ, ಇದರ ಜೊತೆಗೆ ಗ್ರೈಂಡರ್ ಕೂಡ ಹಾಕುತ್ತಿದ್ದಾರೆ ಎನ್ನುವ ಮಾಹಿತಿ ಇದೆ. ಅಂದರೆ ಬಡವರು ಕೂಡ ಟಿ.ವಿ. ನೋಡುವ ಮಟ್ಟಕ್ಕೆ ಮುಟ್ಟಿದ್ದಾರೆ, ಗ್ರೈಂಡರ್ ಹಾಕುವ ಮಟ್ಟಕ್ಕೆ ಮುಟ್ಟಿದ್ದಾರೆಂದರೆ, ಇಂಥ ಶಕ್ತಿ ಇವರಿಗೆ ಕೊಡಲಿಕ್ಕೆ ಕಾಂಗ್ರೆಸ್ ಸರ್ಕಾರ ಯಾವ ದೂರದೃಷ್ಟಿಯನ್ನು ಇಟ್ಟುಕೊಂಡು ಇಂಥ ಯೋಜನೆಯನ್ನು ಜಾರಿಗೆ ತಂದಿತು ಎಂಬುದು ಅರ್ಥವಾಗುತ್ತದೆ. ಈ ಯೋಜನೆಯನ್ನು ಮುಂದೆ ಬಂದಂಥ ಸರ್ಕಾರಗಳೂ ಕೂಡ ಮುಂದುವರಿಸಿಕೊಂಡು ಹೋಗಿವೆ ಇದಕ್ಕಾಗಿ ನಾನು ಅವರನ್ನು ಅಭಿನಂದಿಸುತ್ತೇನೆ. ಆದರೆ ಇದಕ್ಕೆಲ್ಲಾ ತಳಹದಿ ಹಾಕಿರತಕ್ಕಂಥವರು ಶ್ರೀಮತಿ ಇಂದಿರಾಗಾಂಧಿಯವರು ಹಾಗೂ ಸನ್ಮಾನ್ಯ ರಾಜೀವಗಾಂಧಿಯವರು, ಕಾಂಗ್ರೆಸ್ ಸರ್ಕಾರದವರು ಎನ್ನತಕ್ಕಂಥದ್ದನ್ನು ಬಡವರು ನೆನಪಿಸಿಕೊಂಡು ಇವತ್ತು ನಮ್ಮನ್ನು ಇಲ್ಲಿ ಕೂರಿಸಿದ್ದಾರೆ ಎನ್ನತಕ್ಕಂಥ ಮಾತನ್ನು ನಾನು ಹೇಳುವುದಕ್ಕೆ ಬಯಸುತ್ತೇನೆ. ಕಳೆದ ವರ್ಷ ವಿದ್ಯುತ್ ಸಾಗಣೆ ಮತ್ತು ವಿತರಣೆ ಜಾಲ ಸುಧಾರಣೆಗೆ 650 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದರು; ಇದು ಕೂಡ ಬಹಳ ಗಣನೀಯವಾದಂಥ ಮೊತ್ತ. ಇದನ್ನು ನಾವು ಅಷ್ಟು ಸುಲಭವಾಗಿ ತಳ್ಳಿ ಹಾಕುವುದಕ್ಕೆ ಆಗುವುದಿಲ್ಲ. ಆದರೆ ಈ 650 ಕೋಟಿ ರೂಪಾಯಿಗಳು ಸಾಲದು ಎನ್ನುವುದು ಇಲ್ಲಿ ಬಂದಿರತಕ್ಕಂಥ ಪ್ರಶ್ನೆ, ಏಕೆಂದರೆ, ಆ ಸಮಸ್ಯೆಯ ಉಲ್ಬಣ ಮತ್ತು ತೀವ್ರತೆಯನ್ನು ಗಮನಿಸಿದಾಗ ಹೊಣೆ ಅರಿತ ಸರ್ಕಾರ ಯಾವ ರೀತಿ ಸ್ಪಂದಿಸುತ್ತದೆ

ಎನ್ನುವುದಕ್ಕೆ ಇವತ್ತಿನ ಕಾಂಗ್ರೆಸ್ ಸರ್ಕಾರ ಈ ವಿದ್ಯುತ್ ಬಗ್ಗೆ ಹೆಚ್ಚಿನ ಮಹತ್ವವನ್ನು ಕೊಡುತ್ತಿದ್ದೇವೆ. ಅದರಲ್ಲೂ ಗ್ರಾಮೀಣ ಪ್ರದೇಶದಲ್ಲಿರತಕ್ಕಂಥವರಿಗೆ ಹೆಚ್ಚಿನ ಆದ್ಯತೆ ಕೊಟ್ಟು ಇದರ ಫಲ ತಲುಪಿಸಬೇಕು ಎನ್ನುವ ದೃಷ್ಟಿಯಿಂದ ಈಗಾಗಲೇ ನಾನು ಒಂದು ಡೆಡ್-ಲೈನ್ ಕೊಟ್ಟಿದ್ದೇನೆ. ಈ ನವೆಂಬರ್ ತಿಂಗಳಿನಿಂದ ಮುಂದಿನ ನವೆಂಬರ್ ತಿಂಗಳ ಒಳಗಾಗಿ 1,500 ಕೋಟಿ ರೂಪಾಯಿಗಳಲ್ಲಿ ಇದರ ಸುಧಾರಣೆಯನ್ನು ಮಾಡಬೇಕು ಎಂದು ಒಂದು ಡೆಡ್ ಲೈನ್ ಕೊಟ್ಟಿದ್ದೇನೆ. ಇದರ ಜೊತೆಗೆ ಮುಂದಿನ ಮೂರು ಅಥವಾ ಐದು ವರ್ಷಗಳಲ್ಲಿ ಒಂದು ಸಾವಿರ ಮೆಗಾವ್ಯಾಟ್ ವಿದ್ಯುತ್ತನ್ನು ಉತ್ಪಾದಿಸುವುದಕ್ಕೆ ಯೋಗ್ಯವಾದ ಭೂಮಿಕೆಯನ್ನು ನಾವು ಇಂದು ನಿರ್ಮಾಣ ಮಾಡಲಿಕ್ಕೆ ಪ್ರಯತ್ನಿಸುತ್ತಿದ್ದೇವೆ. ಆರ್.ಟಿ.ಪಿ.ಎಸ್. 7ನೇ ಘಟಕ 210 ಮೆ.ವ್ಯಾ.ಉತ್ಪಾದನೆ ಮಾಡತಕ್ಕಂಥದ್ದು ಇದೆ, ವಿಜಯನಗರ ಥರ್ಮಲ್ ವಿದ್ಯುತ್ ಕೇಂದ್ರ 500 ಮೆ.ವ್ಯಾ. ವಿದ್ಯುತ್ ಉತ್ಪಾದನೆ ಮಾಡಿಕೊಡಬೇಕಾಗಿದೆ.

ನಿಮ್ಮ ಸರ್ಕಾರ ಅಧಿಕಾರಕ್ಕೆ ಬಂದ ತಕ್ಷಣ ಬಳ್ಳಾರಿ ಪ್ಯಾಕೇಜ್ ಆಗಿದೆ ಎಂದು ಬಹಳಷ್ಟು ಜನ ಹೇಳಿದರು. ಇದು ಕೇವಲ ಬಳ್ಳಾರಿ ಪ್ಯಾಕೇಜ್ ಒಂದೇ ಅಲ್ಲ, ಇಡೀ ರಾಜ್ಯದ ಪ್ಯಾಕೇಜ್ ಇದಾಗಿದೆ ಎಂದು ನಮ್ಮ ವಿರೋಧಪಕ್ಷದ ನಾಯಕರಿಗೆ ಬಹಳ ನಮ್ರವಾಗಿ ನಾನು ಹೇಳಬಯಸುತ್ತೇನೆ. ಇದು ಆಗುತ್ತಿರತಕ್ಕಂಥದ್ದು ಬಳ್ಳಾರಿಯಲ್ಲಿ. ಈಗ ಕಾಳಿನದಿ ವಿದ್ಯುತ್ತನ್ನು ಕೇವಲ ಶಿವಮೊಗ್ಗ ಜಿಲ್ಲೆಯವರು ಉಪಯೋಗಿಸುತ್ತಿಲ್ಲ, ಅದು ಅಲ್ಲಿಂದ ಹರಿದು ಮಂಡ್ಯ, ಮೈಸೂರು, ಎಲ್ಲಾ ಕಡೆ ಬರುತ್ತದೆ. ನಾವು ವಿಜಯನಗರದಲ್ಲಿ ಸ್ಥಾಪನೆ ಮಾಡುತ್ತಿರುವ ಥರ್ಮಲ್ ವಿದ್ಯುತ್ ಕೇಂದ್ರದಿಂದ ಅದು ಕೇವಲ ಬಳ್ಳಾರಿಗಷ್ಟೇ ಸೀಮಿತವಾಗಿರದೆ ಕನಕಪುರ, ಶಿಡ್ಲಘಟ್ಟ, ಹೀಗೆ ಎಲ್ಲಾ ಕಡೆ ವಿದ್ಯುತ್ ಹರಿದು ಬರುತ್ತದೆ. ಆದ್ದರಿಂದ ಕೇವಲ ಬಳ್ಳಾರಿಯನ್ನು ದೃಷ್ಟಿಯಲ್ಲಿಟ್ಟುಕೊಂಡು ಈ ರೀತಿ ಪ್ಯಾಕೇಜ್ ಮಾಡಿದ್ದೇನೆಂದು ಹೇಳಿದರೆ ಹೇಗೆ? ಇದರ ಬಗ್ಗೆ ಅತಿರಂಜಿತವಾದ ಮಾತುಗಳನ್ನು ಆಡಿದ್ದಾರೆ, ಇದನ್ನೇ ಒಂದು ಕಾರಣ ಮಾಡಿಕೊಂಡು ನಮ್ಮ ಊರಿಗೆ ಏನು ಪ್ಯಾಕೇಜ್ ಕೊಡುತ್ತೀರಿ? ಬೆಳಗಾಂಗೆ ಪ್ಯಾಕೇಜ್ ಕೊಡಿ, ಬಿಜಾಪುರಕ್ಕೆ ಪ್ಯಾಕೇಜ್ ಕೊಡಿ, ನಾರ್ತ್‌ಕೆನರಾಗೆ ಪ್ಯಾಕೇಜ್ ಕೊಡಿ ಎಂದು ಕೇಳುತ್ತಿದ್ದಾರೆ.

ಶ್ರೀ ಸಿ. ಬೈರೇಗೌಡ: ತಾವೇ ಅದನ್ನು ಹೇಳಿದ್ದು, ಅದರ ಜನಕರು ತಾವೇ ಕರ್ನಾಟಕದ ಪ್ಯಾಕೇಜ್ ಎಂದು ಹೇಳಿದ್ದರೆ ಅತಿರಂಜಿತವಾದಂಥ ಹೇಳಿಕೆಗಳು ಬರುತ್ತಿರಲಿಲ್ಲ, ನೀವು ಕರ್ನಾಟಕದ ಪ್ಯಾಕೇಜ್ ಎನ್ನುವುದರ ಬದಲು ಬಳ್ಳಾರಿ ಪ್ಯಾಕೇಜ್ ಎಂದು ಹೇಳಿದಿರಿ. ಹೀಗಾಗಿ ಸ್ವಾಭಾವಿಕವಾಗಿ ಇದರ ಬಗ್ಗೆ ಅತಿ ಹೆಚ್ಚು ರಂಜಿತವಾದ ಹೇಳಿಕೆಗಳು ಬಂದೇ ಬರುತ್ತವೆ.

ಶ್ರೀ ಪಿ.ಜಿ.ಆರ್. ಸಿಂಧ್ಯಾ: ನೀವು ನಿಮ್ಮ ಪ್ಯಾಕೇಜ್ ಹೇಳಿಕೆಯನ್ನು ವಿಧಾನ ಸಭೆಯ ಮುಖಾಂತರ ಹೇಳಿದ್ದರೆ, ಅದನ್ನು ಗೆದ್ದ ತಕ್ಷಣವೇ ಹೇಳಿದ್ದರೆ, ಈ ರೀತಿ ರಂಜಿತವಾದ ಹೇಳಿಕೆಗಳನ್ನು ಯಾರು ಮಾಡುತ್ತಿರಲಿಲ್ಲ. ಸೀಟು ಖಾಲಿಯಾದ ತಕ್ಷಣ ಮಾಡಿದರಲ್ಲಾ ಅದಕ್ಕಾಗಿಯೇ ಇದು ಎಲ್ಲಾ ಬಂದಿದು.

ಶ್ರೀ ಎಸ್.ಎಂ. ಕೃಷ್ಣ: ವಿರೋಧ ಪಕ್ಷದಲ್ಲಿ ಅಪಾರವಾದ ಅನುಭವ ಇರುವ ಹಿನ್ನೆಲೆಯಲ್ಲಿ ನಮ್ಮಿಬ್ಬರು ಸ್ನೇಹಿತರು ಮಾತನಾಡಿದರು.

ಶ್ರೀ ಪಿ.ಜಿ.ಆರ್.ಸಿಂಧ್ಯಾ: ನಮಗೇನೂ ಅಪಾರವಾದ ಅನುಭವವಿಲ್ಲ, ತಮಗೆ ಅಪಾರವಾದ ಅನುಭವ ಇರುವುದು, ದಯಮಾಡಿ ನಮಗೆ ಅನುಭವ ಇದೆ ಎಂದು ಹೇಳಬೇಡಿ. ಆದರೆ ಅಪಾರವಾದ ಅನುಭವ ಇದ್ದುಕೊಂಡು ಏಕೆ ಈ ರೀತಿ ತಪ್ಪು ಮಾಡಿದಿರಿ? ಅಮೇಥಿ ಕ್ಷೇತ್ರ ಉಳಿಸಿಕೊಂಡು ಬಳ್ಳಾರಿ ಖಾಲಿ ಮಾಡಿದರಲ್ಲಾ ಆದಕ್ಕೆ ಹೇಳಿದ್ದು.

ಶ್ರೀ ಎಸ್.ಎಂ. ಕೃಷ್ಣ: ಅನುಭವವಿರುವ ನಮ್ಮಿಬ್ಬರು ನಾಯಕರು ಇದಕ್ಕೆ ಜನಕ ನಾನು ಎಂದು ಹೇಳಿದ್ದಕ್ಕೆ ಸಂತೋಷ. ಆದರೆ ಸರಿಯಾದ ನಿಟ್ಟಿನಲ್ಲಿ ಈ ವಿಚಾರವನ್ನು ಒಪ್ಪಿಕೊಂಡು ನಮ್ಮ ಮಾನ್ಯ ಜಗದೀಶ್ ಶೆಟ್ಟರ್‌ರವರು ಸುಮ್ಮನೆ ಇದ್ದಾರೆ.

ಶ್ರೀ ಜಗದೀಶ್ ಶೆಟ್ಟರ್: ಮಾನ್ಯ ಸಿಂಧ್ಯಾರವರು ಹಾಗೂ ಹಿರಿಯರಾದಂಥ ಮಾನ್ಯ ಬೈರೇಗೌಡರವರು ಹೇಳಿದ ಮೇಲೆ ನಾವೇನು ಹೇಳುವುದು ಎಂದು ಸುಮ್ಮನೆ ಕುಳಿತ್ತಿದ್ದೆವು. ಮಾನ್ಯ ಮುಖ್ಯಮಂತ್ರಿಗಳ ಹೇಳಿಕೆ ಪತ್ರಿಕೆಗಳಲ್ಲಿ ಬಂದಾಗ ಕೇವಲ ಬಳ್ಳಾರಿಗೆ ಮಾತ್ರ ಅದು ಸೀಮಿತವಾಗಿತ್ತು, ಆದ್ದರಿಂದ ನಾವು ಈ ರೀತಿ ನಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಬೇಕಾಯಿತು. ಇಡೀ ಕರ್ನಾಟಕದ ಪ್ರಗತಿಯ ದೃಷ್ಟಿಕೋನ ಇಟ್ಟುಕೊಂಡು ಆ ಹೇಳಿಕೆ ಕೊಟ್ಟಿದ್ದರೆ ಅದು ಬೇರೆ ಅರ್ಥವಾಗುತ್ತಿತ್ತು.

ಶ್ರೀ ಎಸ್.ಎಂ.ಕೃಷ್ಣ: ಆ ವಿದ್ಯುತ್ ಸೌಲಭ್ಯದಿಂದ ವಂಚಿತರಾಗಿರತಕ್ಕಂಥ ಇನ್ನೂ 52 ಗ್ರಾಮಗಳಿವೆ. ಇದಕ್ಕೆ ಹಲವಾರು ಕಾರಣಗಳು ಇರಬಹುದು, ಗುಡ್ಡಗಾಡು ಪ್ರದೇಶ ಇರಬಹುದು, ಆ್ಯಕ್ಸಿಸ್‌ಬಲ್ ಆಗಿಲ್ಲದೇ ಇರಬಹುದು. ಆದ್ದರಿಂದ ಇನ್ನೊಂದು ವರ್ಷದಲ್ಲಿ ಆ 52 ಗ್ರಾಮಗಳಿಗೆ ವಿದ್ಯುತ್ ಸಂಪರ್ಕ ಕಲ್ಪಿಸುವ ಮುಖಾಂತರ ಕರ್ನಾಟಕದ ಎಲ್ಲಾ ಹಳ್ಳಿಗಳಿಗೂ ವಿದ್ಯುತ್ ಸರಬರಾಜು ಮಾಡುವ ಒಂದು ರಾಜ್ಯ ಎನ್ನುವ ಹೆಸರನ್ನು ಪಡೆಯುವಂತಾಗುತ್ತದೆ. ಆದರೂ ಕೂಡ ಒಂದು ಕೊರತೆ ಇದೆ, ಏನೆಂದರೆ 18 ಸಾವಿರ ಉಪ ಗ್ರಾಮಗಳಿವೆ. ಇವುಗಳಿಗೆ ನಾವು ವಿದ್ಯುತ್ ಸರಬರಾಜು ಕೊಡಲಿಕ್ಕೆ ಸಾಧ್ಯವಾಗಿಲ್ಲ, ಆದ್ದರಿಂದ ಈ 18 ಸಾವಿರ ಉಪಗ್ರಾಮಗಳಿಗೆ ಇನ್ನು ಐದು ವರ್ಷಗಳ ಅವಧಿಯಲ್ಲಿ ವಿದ್ಯುತ್‌ನ್ನು ಕೊಡಬೇಕು ಎನ್ನುವ ದೃಷ್ಟಿಯಿಂದ ನಾವು ಯೋಜನೆಗಳನ್ನು ರೂಪಿಸಿಕೊಳ್ಳುತ್ತಿದ್ದೇವೆ. ನಾನು ಈ ವಿದ್ಯುತ್ ಸಾಗಾಣಿಕೆಯ ಬಗ್ಗೆ ಈಗಾಗಲೇ ಹೇಳಿದ್ದೇನೆ. ವಿದ್ಯುತ್ ಸೋರುವಿಕೆ ಹಾಗೂ ಸಂಭವಿಸುವ ನಷ್ಟದ ಬಗ್ಗೆ ನನ್ನ ಪೀಠಿಕೆಯಲ್ಲಿ ಈಗಾಗಲೇ ಹೇಳಿದ್ದೇನೆ. ವಿದ್ಯುಚ್ಛಕ್ತಿ ಮಂಡಲಿ ತನಗೆ ಬರಬೇಕಾಗಿರುವ ಹಣವನ್ನು ನಿರ್ದಾಕ್ಷಿಣ್ಯವಾಗಿ ವಸೂಲು ಮಾಡಬೇಕು. ಮತ್ತು ಎಲ್ಲಿ ಕೆಳಗಿನ ಮಟ್ಟದ ಅಧಿಕಾರಿಗಳು ಸರಿಯಾದ ರೀತಿಯಲ್ಲಿ ಕೆಲಸಕಾರ್ಯಗಳನ್ನು ಮಾಡುವುದಿಲ್ಲ ಅಂಥ ಕಡೆ ಅಧಿಕಾರಿಗಳು ತಮ್ಮ ದಂಡವನ್ನು ಉಪಯೋಗಿಸಬೇಕಾಗುತ್ತದೆ. ಪ್ರತಿಯೊಂದು ಜಿಲ್ಲೆಯಲ್ಲೂ ಕೂಡ ವಿದ್ಯುತ್ ಅದಾಲತ್‌ನ್ನು ಮಾಡಬೇಕು ಎನ್ನತಕ್ಕಂಥ ಮತ್ತೊಂದು ಸುಧಾರಣೆಯ ಬಗ್ಗೆ ನಾವು ಯೋಚಿಸುತ್ತಿದ್ದೇವೆ. ಇದಕ್ಕೆ ಜಿಲ್ಲಾಧಿಕಾರಿಗಳನ್ನು ಅದಾಲತ್ ನಡೆಸುವುದಕ್ಕೆ ನೇಮಿಸಿ ಅವರಿಗೆ ಆ ಅಧಿಕಾರವನ್ನು ಕೊಡಬೇಕೆಂದು ಯೋಚಿಸುತ್ತಿದ್ದೇವೆ.

ಶ್ರೀ ಸಿ. ಬೈರೇಗೌಡ: ಅದಾಲತ್ ಎನ್ನುವ ಬದಲಾಗಿ ಕನ್ನಡದಲ್ಲಿ 'ನ್ಯಾಯಾಲಯ' ಎಂದು ಹೇಳಬಹುದಲ್ಲವೆ? ಒಟ್ಟಿನಲ್ಲಿ ವಿದ್ಯುತ್ ನ್ಯಾಯಾಲಯ ಎಂದು ಹೇಳಬಹುದು.

ಶ್ರೀ ಎಸ್.ಎಂ. ಕೃಷ್ಣ: ನೀವು ಏನು ಹೇಳಿದರೂ ಅದಕ್ಕೆ ನಾನು ಒಪ್ಪಿಕೊಳ್ಳುತ್ತೇನೆ, ಅದಕ್ಕೆ ನನ್ನ ತಕರಾರು ಏನೂ ಇಲ್ಲ. ನೀವು ಎದ್ದು ನಿಂತುಕೊಂಡು, ಮುಖ್ಯಮಂತ್ರಿಯವರೇ ನೀವು ಹೀಗೆ ಮಾಡಿ ಎಂದರೆ ನಾನು ಅದನ್ನು ಮಾಡುತ್ತೇನೆ.

ಶ್ರೀ ವಿ. ಮುನಿಯಪ್ಪ (ಗಣಿ ಮತ್ತು ಭೂ ವಿಜ್ಞಾನ ಸಚಿವರು): ಎಲ್ಲವನ್ನು ತಾವು ಒಪ್ಪಿಕೊಳ್ಳಬೇಡಿ, ಕೆಲವೊಮ್ಮೆ ಅವರು ದಾರಿ ತಪ್ಪಿಸುತ್ತಾರೆ.

ಶ್ರೀ ಸಿ. ಬೈರೇಗೌಡ: ನಾವು ಈ ಸ್ಥಾನದಲ್ಲಿ ಕುಳಿತು ಹೇಳುವುದು ಎಷ್ಟು ಸರಿ ಇದೆ ಎನ್ನುವುದನ್ನು ತಾವು ಒಪ್ಪುತ್ತಿದ್ದೀರಿ, ಇದಕ್ಕಾಗಿ ತಮಗೆ ಧನ್ಯವಾದಗಳು.

ಶ್ರೀ ಎಸ್.ಎಂ. ಕೃಷ್ಣ: ಅವರು ಏನು ಹೇಳಿದರೂ ಬುದ್ಧಿಪೂರ್ವಕವಾಗಿ ಹೇಳುವುದರಿಂದ ನಾನು ಅದನ್ನು ಒಪ್ಪುತ್ತೇನೆ. ಅವರು ಹೇಳಿದಂತೆ ಅದಾಲತ್ ಎನ್ನುವ ಬದಲಾಗಿ ವಿದ್ಯುತ್ ನ್ಯಾಯಾಲಯ ಎಂದು ತಿದ್ದುಪಡಿ ಮಾಡಿಕೊಂಡು, ವಿದ್ಯುತ್ ನ್ಯಾಯಾಲಯಗಳನ್ನು ಏರ್ಪಾಡು ಮಾಡುತ್ತೇವೆ. ಇದಕ್ಕೆ ಜಿಲ್ಲಾಧಿಕಾರಿಗಳು ಜವಾಬ್ದಾರಿಯಾಗಿರುತ್ತಾರೆ.

ಶ್ರೀ ಡಿ.ಬಿ. ಚಂದ್ರೇಗೌಡ: ಅದಾಲತ್‌ಗೂ, ನ್ಯಾಯಾಲಯಕ್ಕೂ ವ್ಯತ್ಯಾಸ ಇದೆ. ನ್ಯಾಯಾಲಯ ತೀರ್ಪು ಕೊಡುವಂತಹ ಜಾಗ, ಅದಾಲತ್ ಅಸೆಸ್ ಮಾಡತಕ್ಕಂಥ ಜಾಗ. ಆದ್ದರಿಂದ ಅದಾಲತ್ ಎನ್ನುವುದೇ ಸರಿ.

ಶ್ರೀ ಮಾಲೀಕಯ್ಯ ವಿ ಗುತ್ತೇದಾರ್: ಅದಾಲತ್ ಎನ್ನುವುದು ಹಿಂದಿ ಶಬ್ದ, ನ್ಯಾಯಾಲಯ ಎನ್ನುವುದು ಕನ್ನಡದ ಶಬ್ದ, ಆದ್ದರಿಂದ ಮಾನ್ಯ ಬೈರೇಗೌಡರವರು ಹೇಳಿದ್ದು ಸರಿಯಾಗಿದೆ.

ಒಬ್ಬ ಸದಸ್ಯರು: ಸರಿಯಾದ ತೀರ್ಪು ಕೊಡದಂತಹ ನ್ಯಾಯಾಲಯ, ಅದಾಲತ್, ಏಕೆ ಬೇಕು?

ಶ್ರೀ ಎಸ್.ಎಂ.ಕೃಷ್ಣ: ಸಮಗ್ರ ಕರ್ನಾಟಕದ ಸಮತೋಲನದ ಅಭಿವೃದ್ಧಿಗೆ ದೂರದೃಷ್ಟಿಯಿಂದ ನೀತಿ ರೂಪಿಸಲು ಹಲವಾರು ಸುಧಾರಣೆಗಳನ್ನು ಮತ್ತು ಕಾರ್ಯಕ್ರಮಗಳನ್ನು ನಾವು ಹಮ್ಮಿಕೊಳ್ಳಬೇಕಾಗುತ್ತದೆ. ಗ್ರಾಮೀಣ ಅಭಿವೃದ್ಧಿಗೆ ಹೆಚ್ಚಿನ ಒತ್ತನ್ನು ಈ ಸರ್ಕಾರ ಕೊಡುತ್ತಿದೆ. ಗ್ರಾಮ ಪಂಚಾಯ್ತಿಗಳಿಗೆ ಇದುವರೆವಿಗೂ ನಾವು ಕೊಡತಕ್ಕಂಥ ಅನುದಾನ ಕೇವಲ ಒಂದು ಲಕ್ಷ ರೂಪಾಯಿಗಳು, ಈ ಒಂದು ಲಕ್ಷ ರೂಪಾಯಿಗಳಲ್ಲಿ ಯಾವ ಗ್ರಾಮ ಪಂಚಾಯ್ತಿ ಏನು ಸುಧಾರಣೆ ತರುವುದಕ್ಕೆ ಸಾಧ್ಯ? ಆದ್ದರಿಂದ ಈ ಸರ್ಕಾರ "Empowerment of village panchayats-decentralisation" ಯಾವ ಸದುದ್ದೇಶದಿಂದ ಸನ್ಮಾನ್ಯ ರಾಜೀವಗಾಂಧಿಯವರು ರಾಜ್ಯಾಂಗವನ್ನು ತಿದ್ದುಪಡಿ ಮಾಡುವುದರ ಮೂಲಕ ಇವುಗಳಿಗೆ ರಾಜ್ಯಾಂಗದ ಸಾರ್ವಭೌಮತ್ವವನ್ನು ಆ ಕವಚವನ್ನು ಹೊದಿಸಿದರೋ ಈ ಸಂಘ ಸಂಸ್ಥೆಗಳು ಆರ್ಥಿಕವಾಗಿ ಇನ್ನೂ ಹೆಚ್ಚು ಶಕ್ತರಾಗಬೇಕು ಎನ್ನುವ ದೂರದೃಷ್ಟಿಯಿಂದ ಈ ಪಂಚಾಯ್ತಿಗಳಿಗೆ ನೀಡುವ ಅನುದಾನವನ್ನು ಒಂದು ಲಕ್ಷ ರೂಪಾಯಿಗಳಿಂದ ಎರಡು ಲಕ್ಷ ರೂಪಾಯಿಗಳವರೆಗೆ ಹೆಚ್ಚಿಸಬೇಕು ಎಂದು ಸರ್ಕಾರ ತೀರ್ಮಾನ ತೆಗೆದುಕೊಂಡಿದೆ.

ಏಕೆಂದರೆ, ಇದರ ಬಗ್ಗೆ ಮಾನ್ಯ ಜಗದೀಶ್ ಶೆಟ್ಟರ್‌ರವರು ತಮ್ಮ ಚೊಚ್ಚಲು ಭಾಷಣದಲ್ಲಿ ಚುನಾವಣೆಗಳ ಬಗ್ಗೆ ಮತ್ತು ಪಂಚಾಯತ್ ರಾಜ್ ಸುಧಾರಣೆಗಳ ಬಗ್ಗೆ ನಮ್ಮ ಗಮನವನ್ನು ಸೆಳೆದಿದ್ದಾರೆ. ಇದಕ್ಕೆ ಕಾಂಗ್ರೆಸ್ ಸರ್ಕಾರ ಸ್ಪಂದಿಸತಕ್ಕಂಥ ರೀತಿ ಇದು ಎನ್ನತಕ್ಕಂಥದ್ದನ್ನು ಅತ್ಯಂತ ವಿನಮ್ರದಿಂದ ತಮಗೆ ಹೇಳುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ಜಗದೀಶ್ ಶೆಟ್ಟರ್:- ಸಂಘ ಸಂಸ್ಥೆಗಳಿಗೆ ನೀಡುತ್ತಿರುವ ಅನುದಾನವನ್ನು 1 ಲಕ್ಷ ರೂಪಾಯಿಗಳಿಂದ 2 ಲಕ್ಷ ರೂಪಾಯಿಗಳಿಗೆ ಏರಿಸಿರುವುದಕ್ಕೆ ನಾನು ಧನ್ಯವಾದಗಳನ್ನು ಹೇಳುತ್ತೇನೆ.

ಶ್ರೀ ಎಸ್.ಎಂ.ಕೃಷ್ಣ:- ಗ್ರಾಮ ಪಂಚಾಯಿತಿ ಸದಸ್ಯ, ಉಪಾಧ್ಯಕ್ಷರು ಮತ್ತು ಅಧ್ಯಕ್ಷರ ಸ್ಥಾನಕ್ಕೆ ಮೀಸಲಾತಿ ಹಾಗೂ ರೊಟೇಶನ್ ಪದ್ಧತಿಯನ್ನು ಮುಂದುವರಿಸಿಕೊಂಡು ಹೋಗುತ್ತೇವೆ ಎನ್ನತಕ್ಕಂಥ ಸಂಕಲ್ಪವನ್ನು ನಾವು ಜನರಿಗೆ ಕೊಟ್ಟಿರತಕ್ಕಂಥ ಭರವಸೆಯಾಗಿದೆ. ಈ ಭರವಸೆಯನ್ನು ನಾವು ಈಡೇರಿಸುತ್ತೇವೆ. ಸುಮಾರು 300 ಕೋಟಿ ರೂಪಾಯಿಗಳ ವೆಚ್ಚದೊಂದಿಗೆ ಈಗಾಗಲೇ ಸಿದ್ಧವಾಗಿರತಕ್ಕಂಥ ಸುಮಾರು 1600 ಗ್ರಾಮೀಣ ನೀರು ಸರಬರಾಜು ಯೋಜನೆಗಳಿಗೆ ವಿದ್ಯುತ್ ಪೂರೈಸುವುದಕ್ಕೆ ವಿಫಲವಾಗಿದ್ದು, ಸಿದ್ದವಾಗಿರತಕ್ಕಂಥ ಯೋಜನೆಗಳು ಇನ್ನೂ ಚಾಲನೆಗೆ ಬಂದಿಲ್ಲ. ಇದನ್ನು ಚಾಲನೆಗೆ ತರಬೇಕೆಂದು ಈ ಸರ್ಕಾರದ ನೀತಿಯಾಗಿದೆ. ಇದನ್ನು 1999ರ ಡಿಸೆಂಬರ್ ಅಥವಾ 2000ನೇ ಇಸವಿಯ ಜನವರಿಯೊಳಗೆ ಕಾರ್ಯಗತಗೊಳಿಸುತ್ತೇವೆ. 1,600 ಗ್ರಾಮೀಣ ನೀರು ಸರಬರಾಜು ಯೋಜನೆಗಳಿಗೆ ವಿದ್ಯುತ್‌ನ್ನು ಕೊಡುವುದರ ಮೂಲಕ, 1,600 ಹಳ್ಳಿಗಾಡು ಪ್ರದೇಶಗಳಿಗೆ ನಾವು ಕುಡಿಯುವ ನೀರಿಗೋಸ್ಕರ ದೃಢೀಕರಿಸುವಂಥ ಒಂದು ಅವಶ್ಯಕವಾದಂಥ ಹೆಜ್ಜೆಯಾಗಿದೆ. ರಾಜ್ಯದ ಗ್ರಾಮೀಣ ಮತ್ತು ನಗರ ಪ್ರದೇಶಗಳಿಗೆ ಕುಡಿಯುವ ನೀರಿನ ಪೂರೈಕೆಗೆ ಸುಧಾರಣೆ ಮಾಡುವುದಕ್ಕೋಸ್ಕರ ಕರ್ನಾಟಕ ನೀರು ಸರಬರಾಜು ಮತ್ತು ನೈರ್ಮಲ್ಯಕ್ಕೆ ಟೆಕ್ನಾಲಜಿ ಮಿಷಿನ್‌ನನ್ನು ಸ್ಥಾಪನೆ ಮಾಡಬೇಕೆಂದು ತೀರ್ಮಾನ ಮಾಡಿದ್ದೇವೆ. ಇದಕ್ಕೆ ಹೆಚ್ಚು ಆದ್ಯತೆ ಕೊಡತಕ್ಕಂಥ ದೃಷ್ಟಿಯಿಂದ ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿ ಈ ಟೆಕ್ನಾಲಜಿ ಮಿಷಿನ್‌ನನ್ನು ಸ್ಥಾಪನೆ ಮಾಡುಲಾಗುತ್ತದೆ. ಈ ಟೆಕ್ನಾಲಜಿ ಮಿಷಿನ್ ಬಗ್ಗೆ ಯಾರು ಅಪಾರವಾದಂಥ ಅನುಭವವನ್ನು ಪಡೆದಿರುತ್ತಾರೆಯೋ ಅಂಥವರ ಕನ್ಸಲ್ಟ್ ಇನ್ನು ಪಡೆದುಕೊಂಡಿಲ್ಲ. ಆದ್ದರಿಂದ ಕನ್ಸಲ್ಟ್ ಪಡೆದುಕೊಂಡ ಮೇಲೆ ಇದರ ಪೂರ್ಣವಾದ ವಿವರಗಳನ್ನು ಪ್ರಕಟಿಸುತ್ತೇನೆ. ಈ ಟೆಕ್ನಾಲಜಿ ಮಿಷಿನ್ ಸ್ಥಾಪನೆ ಮಾಡುತ್ತಿರುವ ಮೂಲ ಉದ್ದೇಶ ಏನೆಂದರೆ, ಗ್ರಾಮಿಾಣ ಮತ್ತು ನಗರ ಪ್ರದೇಶಗಳಲ್ಲಿ ಕುಡಿಯುವ ನೀರಿನ ಉತ್ಕಟವಾದಂಥ ಸಮಸ್ಯೆಯನ್ನು ನಾವು ಪರಿಹಾರ ಕಂಡು ಹಿಡಿಯುವ ದೃಷ್ಟಿಗೋಸ್ಕರ ಇದು ಒಂದು ಅನುಕೂಲಕರವಾದಂಥ ಹೆಜ್ಜೆಯಾಗಿದೆ. ಇನ್ನು ಐದು ವರ್ಷಗಳಲ್ಲಿ 55 ಲೀಟರ್ ಪ್ರಮಾಣದಲ್ಲಿ ನೀರು ಸರಬರಾಜು ಮಾಡತಕ್ಕಂಥ ಒಂದು ಕಾರ್ಯಕ್ರಮಗಳನ್ನು ರೂಪಿಸಿಕೊಂಡಿರುವುದು ಈಗಾಗಲೇ ಮಾನ್ಯ ರಾಜ್ಯಪಾಲರ ಭಾಷಣದಲ್ಲಿ ನಮೂದಾಗಿದೆ. ನೀರಾವರಿ ಬಗ್ಗೆ ಹೇಳುವುದಾದರೆ, ಕೆರೆಗಳಲ್ಲಿ ಹೂಳೆತ್ತಲು ಸರ್ಕಾರ ಸ್ಪಷ್ಟವಾದಂಥ, ಮಹತ್ವಾಕಾಂಕ್ಷೆಯ ನೀತಿಯನ್ನು ರೂಪಿಸಿ ಅತ್ಯಾಧ್ಯತೆಯ ಮೇಲೆ ಜಾರಿಗೆ ಕೊಡಲಾಗುವುದು. ನಮ್ಮ ರಾಜ್ಯದ ದಕ್ಷಿಣ ಕರ್ನಾಟಕ ಮತ್ತು ಗುಲ್ಬರ್ಗ, ಕೋಲಾರ, ಚಿತ್ರದುರ್ಗ ಹಾಗೂ ತುಮಕೂರು ಜಿಲ್ಲೆಯಲ್ಲಿ ಹಾಗೂ ಇನ್ನು ಇತರ ಭಾಗಗಳಲ್ಲಿ ವಾಟರ್

ಟೇಬಲ್ ಕೆಳಗೆ ಹೋಗಿರತಕ್ಕಂಥಾದ್ದು ನಮಗೆ ಸಾಕಷ್ಟು ಕಳವಳ ಆನ್ನಿಸುತ್ತದೆ. ಆದ್ದರಿಂದ ಹೂಳು ತೆಗೆಯತಕ್ಕಂಥ ವಿಚಾರದಲ್ಲಿ ಸ್ಪಷ್ಟವಾದ ನೀತಿಯನ್ನು ಮುಂದಿನ ಕೆಲವು ದಿನಗಳಲ್ಲಿ ನಾವು ಸಾದರಪಡಿಸುತ್ತೇವೆ ಎಂಬ ಮಾತನ್ನು ತಮ್ಮಲ್ಲಿ ಹೇಳಿ ಕೊಳ್ಳುತ್ತೇನೆ. ಶಿಕ್ಷಣ ಕ್ಷೇತ್ರದಲ್ಲಿ ಬಹಳ ಮಟ್ಟಿನ ಸುಧಾರಣೆ ಆಗಬೇಕಾಗಿದೆ. ಈ ಸುಧಾರಣೆಗಳನ್ನು ಸರಿಪಡಿಸಬೇಕಾದರೆ, ಮೊದಲು ಪ್ರಾಥಮಿಕ ಶಾಲಾಶಿಕ್ಷಕರನ್ನು ನೇಮಕ ಮಾಡಿಕೊಳ್ಳಬೇಕು. ಹಿಂದಿನ ಸರ್ಕಾರ ಪ್ರಾಥಮಿಕ ಶಾಲಾಶಿಕ್ಷಕರನ್ನು ನೇಮಕ ಮಾಡಿಕೊಂಡಿದೆ. ಇದಕ್ಕೆ ನಾನು ಅವರನ್ನು ಅಭಿನಂದಿಸುತ್ತೇನೆ. 2000 ಇಸವಿಯ ಮಾರ್ಚ್, ಆರ್ಥಿಕ ವರ್ಷ ಮುಗಿಯುವುದರೊಳಗೆ ಇನ್ನು 17 ಸಾವಿರ ಪ್ರಾಥಮಿಕ ಶಾಲಾಶಿಕ್ಷಕರನ್ನು ನೇಮಕ ಮಾಡಬೇಕೆಂದು ಡೈರೆಕ್ಷನ್ ಕೊಟ್ಟಿದ್ದೇವೆ. ಶಿಕ್ಷಕರ ಪುನರ್ ನಿಯೋಜನೆಗೆ ಕ್ರಮ ಕೈಗೊಂಡು ಶಾಲೆಗಳಲ್ಲಿ ಶಿಕ್ಷಕರ ಸಂಖ್ಯೆಯ ಅಸಮತೋಲನವನ್ನು ಸರಿಪಡಿಸಲಾಗುವುದು. ನಮ್ಮ most ಐಡಿಯಲ್ ಸೆಟ್ ಅಪ್ ಏನಿದೆ ಎಂದರೆ, ಒಬ್ಬ ಉಪಾಧ್ಯಾಯನಿಗೆ 40 ವಿದ್ಯಾರ್ಥಿಗಳು ಇರಬೇಕಾಗುತ್ತದೆ. ಇವತ್ತು ಒಬ್ಬ ಮಾಸ್ಟರ್‌ಗೆ 40 ವಿದ್ಯಾರ್ಥಿಗಳಿದ್ದು, ಒಂದು ಸ್ಕೂಲ್‌ಗೆ ಒಬ್ಬ ಉಪಾಧ್ಯಾಯ ಇದ್ದರೆ ಅದು ನಮ್ಮ ಪುಣ್ಯ. ಕೆಲವು ಕಡೆ ಇಲ್ಲವೆಂದು ತಾವೇ ಹೇಳಿದ್ದೀರಿ. There may be exceptions. ಆದ್ದರಿಂದ ಈಗ ನಾವು ಈ ಇಂಬ್ಯಾಲೆನ್ಸ್‌ನ್ನು ಸರಿಪಡಿಸಬೇಕಾಗಿದೆ. ಅದಕ್ಕಾಗಿ ಎಲ್ಲಿ ಮಾಸ್ಟರ್‌ಗಳು ಜಾಸ್ತಿ ಇದ್ದಾರೆ, ಅವರನ್ನು ಕಡಿಮೆ ಇರುವ ಶಾಲೆಗಳಿಗೆ ರೀ-ಡಿಪ್ಲಾಯ್‌ಮೆಂಟ್ ಮಾಡಬೇಕಾಗಿದೆ. ಸಾಕ್ಷರತೆ ವಿಚಾರದಲ್ಲಿ ಇದನ್ನು ನಾವು ಈಗಾಗಲೇ ಮಾನ್ಯ ರಾಜ್ಯಪಾಲರ ಭಾಷಣದಲ್ಲಿ ನಮೂದಿಸಿದ್ದೇವೆ. ಇನ್ನು ಆರೋಗ್ಯ ವಿಚಾರದಲ್ಲಿ ಹೆಚ್ಚು ಗಮನವನ್ನು ಕೊಡುತ್ತೇವೆಂದು ನಮ್ಮ ಪ್ರಣಾಳಿಕೆಯಲ್ಲಿ ಕೊಟ್ಟಿದ್ದೇವೆ. ಈ ದಿಶೆಯಲ್ಲಿ ಪ್ರೈಮರಿ ಹೆಲ್ತ್ ಸೆಂಟರ್‌ನ್ನು ಬಲಪಡಿಸಬೇಕು. ಪ್ರೈಮರಿ ಹೆಲ್ತ್ ಸೆಂಟರ್‌ನ್ನು ನಾವು ನಿರ್ಲಕ್ಷಿಸಬಾರದು. ಇವತ್ತು ಬೆಂಗಳೂರು ಮತ್ತು ಪಟ್ಟಣ ಪ್ರದೇಶಗಳಲ್ಲಿರತಕ್ಕಂಥ ದೊಡ್ಡ ದೊಡ್ಡ ಆಸ್ಪತ್ರೆಗಳನ್ನು ಎಲ್ಲಿಯವರೆಗೆ ವೈಭವೀಕರಣ ಮಾಡಿಕೊಂಡು ಹೋಗುತ್ತಿರುತ್ತೇವೆಯೋ ಅಲ್ಲಿಯವರೆಗೆ ನಾವು ಗ್ರಾಮೀಣ ಜನಗಳಿಗೆ ಉಪಕಾರ ಮಾಡುವುದಕ್ಕಾಗುವುದಿಲ್ಲ ಎನ್ನತಕ್ಕಂಥ ದೃಷ್ಟಿಯಿಂದ ಪ್ರೈಮರಿ ಹೆಲ್ತ್ ಸೆಂಟರ್‌ಗಳನ್ನು ನಾವು ಸುಧಾರಣೆ ಮಾಡಬೇಕಾಗಿದೆ. ಈಗಾಗಲೇ ಸುಮಾರು 500 ರಿಂದ 600 ವೈದ್ಯರನ್ನು ನೇಮಕ ಮಾಡಿಕೊಳ್ಳುವ ದೃಷ್ಟಿಯಿಂದ ಆರೋಗ್ಯ ಇಲಾಖೆಯು ಕೆಲವು ಹೆಜ್ಜೆಗಳನ್ನು ತೆಗೆದುಕೊಂಡಿದೆ. ಇನ್ನು ಒಂದು ತಿಂಗಳಲ್ಲಿ ನೇಮಕ ಮಾಡುವುದರ ಮೂಲಕ ಬಹುತೇಕ ಆಸ್ಪತ್ರೆಗಳಲ್ಲಿ ಡಾಕ್ಟರ್‌ಗಳು, ಸೂಲಗಿತ್ತಿಯರು ಹಾಗೂ ನರ್ಸ್‌ಸ್‌ಗಳು ಇಲ್ಲ ಎನ್ನತಕ್ಕಂಥ ಕೊರತೆಯನ್ನು ನಿವಾರಣೆ ಮಾಡಲಿಕ್ಕೆ ಸಾಧ್ಯವಾಗುತ್ತದೆ ಎನ್ನತಕ್ಕಂಥ ಮಾತನ್ನು ಹೇಳುವುದಕ್ಕೆ ನಾನು ಇಷ್ಟಪಡುತ್ತೇನೆ. ಗ್ರಾಮೀಣ ಪ್ರಾಥಮಿಕ ಆರೋಗ್ಯ ಕೇಂದ್ರಗಳ ಕಾರ್ಯ ಶೈಲಿಗಳನ್ನು ಸುಧಾರಣೆ ಮಾಡಬೇಕಾಗಿದೆ. ಖಾಲಿ ಇರತಕ್ಕಂಥ ವೈದ್ಯರ ಮತ್ತು ವೈದ್ಯೇತರ ಸಿಬ್ಬಂದಿ ಹುದ್ದೆಗಳನ್ನು ನಾವು ತುಂಬಬೇಕಾಗಿದೆ. ಏಕೆಂದರೆ, ಇಲ್ಲಿ ನಾವು ಸ್ಪಷ್ಟವಾದಂಥ ನಿಲುವನ್ನು ಅನುಸರಿಸಬೇಕಾಗುತ್ತದೆ. ಅದು ಏನೆಂದರೆ, ಸರ್ಕಾರದಲ್ಲಿ ಸಹಸ್ರಾರು ವಿವಿಧ ಹುದ್ದೆಗಳು ಖಾಲಿ ಇವೆ. ಉದ್ದೇಶ, ಬುದ್ಧಿ ಪೂರ್ವಕವಾಗಿ ನಾವು ಎಲ್ಲಾ ಹುದ್ದೆಗಳನ್ನು ಭರ್ತಿ ಮಾಡುವುದಕ್ಕೆ ಹೊರಟಿಲ್ಲ. ಆದರೆ, ಶಿಕ್ಷಣ ಮತ್ತು ಆರೋಗ್ಯ ಕ್ಷೇತ್ರಗಳಲ್ಲಿ ಎಷ್ಟು ಹುದ್ದೆಗಳು ಖಾಲಿ ಇವೆಯೋ, ಆ ಎಲ್ಲಾ ಹುದ್ದೆಗಳನ್ನು ತುಂಬಲಿಕ್ಕೆ ಮತ್ತು ಇನ್ನು ಬಹಳಷ್ಟು ಹೊಸ ವೈದ್ಯರುಗಳನ್ನು ನೇಮಕ ಮಾಡಿಕೊಳ್ಳಬೇಕಾಗಿದೆ. ಏಕೆಂದರೆ,

ನಮ್ಮ ದೃಷ್ಟಿಯಲ್ಲಿ, ಡಾಕ್ಟರ್‌ಗಳು ಇಲ್ಲದೇ ಇರತಕ್ಕಂಥ ಆಸ್ಪತ್ರೆ ನೆನ್ನೆಯ ವಿಚಾರ ಆಗಬೇಕು, ಇವತ್ತಿನ ವಿಚಾರ ಆಗಬಾರದು ಎನ್ನತಕ್ಕಂಥ ದೃಷ್ಟಿಯಿಂದ ಇದರ ಬಗ್ಗೆ ನಾವು ಕಾರ್ಯೋನ್ಮುಖರಾಗಿದ್ದೇವೆ ಎಂದು ತಮ್ಮಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಇನ್ನು ನೀರಾವರಿ ಇಲಾಖೆ, ನೀರಾವರಿ ಗ್ರಾಮೀಣ ಬದುಕನ್ನು ಹಸನು ಮಾಡುವಂಥ ಸ್ಥರವಾಗಿದೆ. ನೀರಾವರಿಗೆ ನಾವು ಆದ್ಯತೆಯನ್ನು ಕೊಡಬೇಕೆಂದು ಮಾನ್ಯ ವಿರೋಧಪಕ್ಷದ ನಾಯಕರಾದಂಥ ಶ್ರೀ ಜಗದೀಶ್ ಶೆಟ್ಟರ್‌ರವರು ಮತ್ತು ಮಾನ್ಯ ಬಚ್ಚೇಗೌಡರು ಹಾಗೂ ಮಾನ್ಯ ಬನ್ನಿಕೋಡ್‌ರವರು ಹಾಗೆಯೇ ಹಲವಾರು ಸ್ನೇಹಿತರು ಈ ವಿಚಾರದ ಬಗ್ಗೆ ಮಾತನಾಡಿದ್ದಾರೆ; ಆದರೆ ಕೃಷ್ಣ ಮತ್ತು ಕಾವೇರಿ ನದಿ ನೀರಿನ ವಿಚಾರವನ್ನು ಜಾಸ್ತಿ ಹೇಳಿಲ್ಲ.

ಶ್ರೀ ಪಿ.ಜಿ.ಆರ್. ಸಿಂಧ್ಯ: ಏಕೆಂದರೆ ಈಗಾಗಲೇ ಇದು ಮುಗಿದಿರುವ ವಿಷಯವಾಗಿದೆ.

ಶ್ರೀ ಎಸ್.ಎಂ. ಕೃಷ್ಣ: ಈಗ ನಾವು ಹೇಳುವುದು ಏನು ಇಲ್ಲ. ಏಕೆಂದರೆ ಹಿಂದಿನ ಸರ್ಕಾರದವರು ಇದನ್ನು ಮಾಡಿ ಮುಗಿಸಿಬಿಟ್ಟಿದ್ದಾರೆ. ನಾವು ಕೆಲವು ಸಮಯದಲ್ಲಿ ಹೆಚ್ಚಿಗೆ ಮಾತನಾಡಿದರೆ ಅದರಿಂದ ಅಪಾಯ ಉಂಟು ಎನ್ನತಕ್ಕಂಥ ದೃಷ್ಟಿಯಿಂದ, ಈ ಸೂಕ್ಷ್ಮ-ಸೂಕ್ಷ್ಮತೆಯನ್ನು ಅರಿತವರಾಗಿ ನಾವು ಎಷ್ಟು ಮಾತನಾಡಬೇಕೋ ಅಷ್ಟನ್ನು ಮಾತನಾಡುವುದರಿಂದ ಅನುಕೂಲ ಆಗಬಹುದೆಂದು ನನ್ನ ಉದ್ದೇಶವಾಗಿದೆ.

ಶ್ರೀ ಪಿ.ಜಿ.ಆರ್. ಸಿಂಧ್ಯ: ಸ್ವಾಮಿ, ನೀರಾವರಿ ವಿಚಾರದಲ್ಲಿ ಅಂತರ್‌ರಾಜ್ಯದ ಮಟ್ಟದಲ್ಲಿ ಈ ಬಗ್ಗೆ ನಮ್ಮಲ್ಲಿ ಅನೇಕ ರೀತಿಯ ಭಿನ್ನಾಭಿಪ್ರಾಯಗಳು ಇರುವುದರಿಂದ ಅದರ ಬಗ್ಗೆ ಹೆಚ್ಚು ಮಾತನಾಡದೆ ಇರತಕ್ಕಂಥದ್ದು ಸೂಕ್ತವಾದಂಥದ್ದು ಆಗಿದೆ. ಅದನ್ನು ನಾವು ಸ್ವಾಗತ ಮಾಡುತ್ತೇವೆ. ನಾವು ಆ ಕಡೆ ಅಂದರೆ, ಆಡಳಿತ ಪಕ್ಷದಲ್ಲಿ ಕುಳಿತುಕೊಂಡಾಗ ಹೆಚ್ಚಿಗೆ ಮಾತನಾಡಿದ್ದೀರೆಂದು ತಾವು ವ್ಯಂಗವಾಗಿ ಹೇಳಿದ್ದೀರಿ, ಅದರಲ್ಲಿ ಸತ್ಯಾಂಶ ಇದೆ, ಇಲ್ಲವೆಂದು ನಾನು ಹೇಳುವುದಿಲ್ಲ. ತಾವು ಇನ್ನು ಒಂದು ವ್ಯಂಗ್ಯವಾದ ಮಾತನ್ನು ಇಲ್ಲಿ ಹೇಳಿದ್ದೀರಿ. ನಾವು ಮಾತನಾಡಿದಷ್ಟು ಕೆಲಸವನ್ನು ಮಾಡಿಲ್ಲವೆಂದು ಹೇಳಿದ್ದೀರಿ. It is alright. We are at the receiving end. We are prepared to receive it. ಅಪ್ಪರ ಕೃಷ್ಣ ಪ್ರಾಜೆಕ್ಟ್ ನಮ್ಮ ಕೈಯಲ್ಲಿದ್ದಾಗ ನಮ್ಮ ಸರ್ಕಾರದ ಅವಧಿಯಲ್ಲಿ ಏನೇನು ಆಯಿತು. ಜನಗಳು ಈಗ ನಿಮ್ಮ ಕೈಯ್ಯಲ್ಲಿ ಸರ್ಕಾರದ ಅಧಿಕಾರವನ್ನು ಕೊಟ್ಟಿದ್ದಾರೆ. ನಾವು ನೀರನ್ನು ಎಷ್ಟು ಅಚ್ಚುಕಟ್ಟಾಗಿ ಮಾಡಿದ್ದೇವೆ. ನಾವು ಎಷ್ಟು ಹಣವನ್ನು ಖರ್ಚು ಮಾಡಿರುತ್ತೇವೆ. ಇದರ ವಿವರಣೆಯನ್ನು ನಾವು ನಿಮ್ಮನ್ನು ಕೇಳುವುದರ ಜೊತೆಗೆ ನೀವು ಮುಂದಿನ ವರ್ಷಗಳಲ್ಲಿ ಎಷ್ಟು ಹಣವನ್ನು ಖರ್ಚು ಮಾಡುತ್ತೀರಿ ಅದನ್ನು ಹೇಳಿದರೆ ಸಾಕು.

ಶ್ರೀ ಎಸ್.ಎಂ. ಕೃಷ್ಣ: 2000 ಮೇ ಯೊಳಗಾಗಿ ಕೃಷ್ಣಾ ನದಿಯ, ರಾಜ್ಯದ ನೀರಿನ ಪಾಲನ್ನು ಸಂಗ್ರಹಿಸಿಟ್ಟುಕೊಳ್ಳುವ ಕ್ರಮವನ್ನು ತೆಗೆದುಕೊಳ್ಳಲಾಗುವುದು ಎನ್ನುವ ತೀರ್ಮಾನವನ್ನು ನಿಮ್ಮ ಸರ್ಕಾರದಲ್ಲಿ ಇದ್ದಾಗ ಹೇಳಿದ್ದೀರಿ. ನೀವು ಏನು ಹೇಳಿದ್ದೀರೋ ಅದನ್ನು ನಿರ್ವಂಚನೆಯಿಂದ ಮುಂದುವರೆಸುತ್ತೇವೆ.

ಶ್ರೀ ಬಿ.ಎಚ್.ಬನ್ನಿಕೋಡ್: ರಾಜ್ಯದ ಮುಖ್ಯಮಂತ್ರಿಗಳಾಗಿ ನಿರ್ವಂಚನೆಯಿಂದ ಅದನ್ನು ತಾವು ಮುಂದುವರೆಸಿಕೊಂಡು ಹೋಗುತ್ತೇವೆಂದು ಹೇಳಿದಿರಿ, ಹಿಂದಿನವರು ಏನು ಮಾಡಿದರೆಂದು ತಾವು ಹೇಳುತ್ತೀರಾ? ಆ ಸರ್ಕಾರದವರು ಮಾಡಿದಷ್ಟು ಖರ್ಚನ್ನು ಯಾರು ಮಾಡಿಲ್ಲ.

ಶ್ರೀ ಎಸ್.ಎಂ. ಕೃಷ್ಣ: ಅದನ್ನು ನೀವು ಹೇಳಬೇಕು, ನಾವು ಹೇಳುವುದಕ್ಕೆ ಶಕ್ತರಲ್ಲ.

ಶ್ರೀ ಬಿ.ಎಚ್.ಬನ್ನಿಕೋಡ್: ಮಾನ್ಯ ಸಭಾಧ್ಯಕ್ಷರೆ, ಮಾನ್ಯ ಮುಖ್ಯಮಂತ್ರಿಗಳು ಹೇಳುವ ವಿಚಾರ, ನಾವು ನಿರ್ವಂಚನೆಯಿಂದ ಮುಂದುವರೆಸುತ್ತೇವೆ ಅಂದರೆ, ಹಿಂದಿನ ಸರ್ಕಾರದವರು ಮಾತನಾಡಿದ ಪ್ರಕಾರ ಕೆಲಸವನ್ನು ಮಾಡಿಲ್ಲವೆಂದು ಅರ್ಥವಾಗುತ್ತದೆ. ಕಳೆದ 45 ವರ್ಷಗಳಿಂದ ಈ ದೇಶವನ್ನು ಈ ರಾಜ್ಯವನ್ನು ಆಳಿದ ಕಾಂಗ್ರೆಸ್ ಸರ್ಕಾರ ಈ ಕೃಷ್ಣಾ ನೀರಾವರಿ ಯೋಜನೆಗೆ ಖರ್ಚು ಮಾಡಿರುವ ಹಣವೆಷ್ಟು? ಐದು ವರ್ಷಗಳಲ್ಲಿ ಹಿಂದಿನ ಸರ್ಕಾರ ಮಾಡಿರುವ ಖರ್ಚು ಎಷ್ಟು ಎನ್ನುವುದನ್ನು ಈಗಾಗಲೇ ಮಾನ್ಯ ಸಿಂಧ್ಯಾರವರು ಹೇಳಿದ್ದಾರೆ. ಅದರ ವಿವರಣೆಯನ್ನು ಮಾನ್ಯ ಮುಖ್ಯಮಂತ್ರಿಗಳು ಕೊಟ್ಟರೆ ಸಾಕು. ಅದರ ಮೂರು ಪಟ್ಟು ಹಣ ಐದು ವರ್ಷಗಳಲ್ಲಿ ಹೆಚ್ಚಿಗೆ ಖರ್ಚು ಮಾಡಿದೆ, ಇನ್ನು ಮಾಡಬೇಕಾದದ್ದು ಸಾಕಷ್ಟು ಇದೆ. ನಿರ್ವಂಚನೆಯಿಂದ ಮಾಡುವುದು ಸರ್ಕಾರದ ಕೆಲಸ. ಯಾವುದೇ ಸರ್ಕಾರವಿರಲಿ ಅದನ್ನು ತಾವು ನಿರ್ವಂಚನೆಯಿಂದ ಮಾಡಿ ರೈತರ ಆಸೆಗೆ ಒಂದು ವರದಾನವಾಗಿ ಈ ನೀರಾವರಿ ಯೋಜನೆ ಶಾಶ್ವತವಾಗುವಂತೆ ಮಾಡಿಕೊಡಬೇಕು. ಆದರೆ ಹಿಂದಿನ ಸರ್ಕಾರದವರು ಏನು ಮಾಡಿದರು ನಾವು ಏನು ಮಾಡುತ್ತೇವೆ ಎನ್ನುವ ಬದಲು ಪೂರ್ಣ ನೀರಿನ ಬಳಕೆಯನ್ನು ಮಾಡಲಿಕ್ಕೆ ತಮ್ಮ ಸರ್ಕಾರ ಏನು ಕಾರ್ಯಕ್ರಮವನ್ನು ಹಾಕಿಕೊಂಡಿದೆ ಅದನ್ನು ಈ ಸದನದ ಮೂಲಕ ಜನತೆಗೆ ತಿಳಿಸಿದರೆ ಒಳ್ಳೆಯದೆಂದು ನಾನು ಮಾನ್ಯ ಸಭಾಧ್ಯಕ್ಷರ ಮೂಲಕ ವಿನಂತಿಸಿ ಕೊಳ್ಳುತ್ತೇನೆ.

ಶ್ರೀ ಎಸ್.ಎಂ. ಕೃಷ್ಣ: ನಾನು ಹೆಚ್ಚು ಒತ್ತನ್ನು ನಿರ್ವಂಚನೆ ಮೇಲೆ ಹಾಕಲಿಲ್ಲ ಅದನ್ನು ಮುಂದುವರೆಸುತ್ತೇವೆ ಎನ್ನುವ ಬಗ್ಗೆ ನಾನು ಹೆಚ್ಚು ಒತ್ತನ್ನು ಕೊಟ್ಟಿರುತ್ತೇನೆ. ಕರ್ನಾಟಕ ನೀರಾವರಿ ನಿಗಮದ ಮೇಲ್ವಿಚಾರಣೆ ದೀರ್ಘಕಾಲದವರೆಗೆ ನೆನೆಗುದಿಗೆ ಬಿದ್ದಿರತಕ್ಕಂಥ ಘಟಪ್ರಭಾ ಮತ್ತು ಮಲಪ್ರಭಾ 2000 ಅಥವಾ 2001ನೇ ಇಸ್ವಿಯೊಳಗೆ ಪೂರ್ಣಗೊಳಿಸಿ 1 ಲಕ್ಷ 90 ಸಾವಿರ ಹೆಕ್ಟೇರ್ ಪ್ರದೇಶಕ್ಕೆ ನೀರಾವರಿ ಸಾಮರ್ಥ್ಯವನ್ನು ಹೆಚ್ಚಿಸುವುದು ನಮ್ಮ ಆದ್ಯ ಕರ್ತವ್ಯ. ಅಂತರ್‌ರಾಜ್ಯ ಜಲವಿವಾದವನ್ನು ಪರಸ್ಪರ ಮಾತುಕತೆ ಮೂಲಕ ಬಗೆಹರಿಸಿಕೊಳ್ಳಬೇಕು ಎನ್ನುವ ನಮ್ಮ ಆಸೆ ಏನು ಇದೆ, ಇದರ ಬಗ್ಗೆ ಸರ್ಕಾರದ ನಿಲುವು ಏನು ಎನ್ನುವ ಬಗ್ಗೆ ಮಾನ್ಯ ವಿರೋಧ ಪಕ್ಷದ ನಾಯಕರು ಪ್ರಶ್ನಿಸಿದ್ದಾರೆ. ಅದನ್ನು ನಾನು ಪುನರುಚ್ಚಾರಣೆ ಮಾಡುತ್ತೇನೆ. ಎಲ್ಲ ಸರ್ಕಾರಗಳ ಉದ್ದೇಶ ಕೂಡ ಅದೆ. ಎಲ್ಲ ಸರ್ಕಾರಗಳ ಅಪ್ರೋಚ್, ಎಲ್ಲ ಸರ್ಕಾರದ ಪ್ರತಿಪಾದನೆ, ನಿಲುವು ಪರಸ್ಪರ ಮಾತುಕತೆಗಳ ಮೂಲಕ ಈ ವ್ಯವಹಾರವನ್ನು ಹಾಗೂ ಇಂತಹ ಭಿನ್ನಾಭಿಪ್ರಾಯಗಳನ್ನು ಬಗೆಹರಿಸಿಕೊಳ್ಳಬೇಕು. ಕೃಷ್ಣಾ ಮತ್ತು ಕಾವೇರಿ ಕಣಿವೆಯ ರೈತರ ಹಿತಾಸಕ್ತಿಯನ್ನು ವಿರೋಧಪಕ್ಷದವರ ಹಾಗೂ ಎಲ್ಲ ಮುಖಂಡರುಗಳ ಜೊತೆಯಲ್ಲಿ ಆಗಿಂದಾಗ್ಗೆ ಸಮಾಲೋಚನೆ ಮಾಡಿ ಕರ್ನಾಟಕದ ಒಟ್ಟಾರೆ ನಿಲುವನ್ನು ಸಮಗ್ರವಾದ ನಮ್ಮ ರಾಜ್ಯದ ಹಿತವನ್ನು ಮೂಲಭೂತವಾಗಿ ಕಾಪಾಡಬೇಕೆನ್ನುವ

ದೃಷ್ಟಿಯಿಂದ ವಿರೋಧಪಕ್ಷದ ನಾಯಕರ ಮತ್ತು ಮಿಕ್ಕ ರಾಜಕೀಯ ಪಕ್ಷದ ಅಧ್ವರ್ಯರ ಸಮಾಲೋಚನೆ ಅವರ ಮಾರ್ಗದರ್ಶನ ಇವುಗಳನ್ನು ಗಮನದಲ್ಲಿಟ್ಟುಕೊಂಡು ನಾವು ನಮ್ಮ ನಿಲುವನ್ನು ಆಗಿಂದಾಗ್ಗೆ ನಾವು ರೂಪಿಸುತ್ತೇವೆ ಎನ್ನತಕ್ಕಂಥದ್ದನ್ನು ತಮಗೆ ಹೇಳುತ್ತೇನೆ. ಕೃಷ್ಣಾ ನದಿ ಯೋಜನೆಗೆ 1994ರ ಡಿಸೆಂಬರ್‌ನಿಂದ ಸೆಪ್ಟೆಂಬರ್ 1999ರವರೆಗೆ 10 ಸಾವಿರ ಕೋಟಿ ರೂಪಾಯಿಗಳನ್ನು ಹಿಂದಿನ ಸರ್ಕಾರ ನೀಡಿತ್ತೆಂದು ಶ್ರೀಮಾನ್ ಬಚ್ಚೇಗೌಡರು ಪ್ರತಿಪಾದಿಸಿದರು. ಆದರೆ ನನಗೆ ಸಿಕ್ಕಿರತಕ್ಕಂಥ ಮಾಹಿತಿಯ ಪ್ರಕಾರ ಸುಮಾರು 7,139 ಕೋಟಿ ರೂಪಾಯಿಗಳನ್ನು ಮಂಜೂರು ಮಾಡಿದ್ದು ಅದರಲ್ಲಿ 4,541 ಕೋಟಿ ರೂಪಾಯಿಗಳನ್ನು ವೆಚ್ಚ ಮಾಡಿದ್ದಾರೆ ಎನ್ನತಕ್ಕಂಥ ಮಾಹಿತಿಯನ್ನು ಸಭೆಗೆ ಕೊಡಲು ಪ್ರಯತ್ನ ಮಾಡುತ್ತೇನೆ. This was in a period of about five years as against 7,100 crores which was meant to be spent. ಕೃಷಿ ಇಲಾಖೆ ನಮ್ಮ ಗ್ರಾಮೀಣ ಜನರ ಬದುಕಿನ ಬಗ್ಗೆ ಬಹಳ ಹೆಚ್ಚಿನ ರೀತಿಯಲ್ಲಿ ಸ್ಪಂದಿಸಬೇಕು ಎನ್ನತಕ್ಕಂಥ ಮಾತು, ಹಲವಾರು ಎಜೆನ್ಸಿಗಳು ಇವೆ. ಕೃಷಿ ಇಲಾಖೆಯ ಬಗ್ಗೆ ಎರಡು-ಮೂರು ವಿಚಾರಗಳು. ಕೃಷಿ ಕಾರ್ಮಿಕರಿಗೆ ಅವರು ತಮ್ಮ ಭೂಮಿಯನ್ನು ಒಕ್ಕಲು ಮಾಡುವಾಗ ಅವರಿಗೆ ಬೇಕಾಗಿರತಕ್ಕಂಥ ತಾಂತ್ರಿಕ ಮಾಹಿತಿಯನ್ನು ಕೊಡಬೇಕಾಗಿರತಕ್ಕಂಥದ್ದು ಬಹಳ ಅವಶ್ಯಕವಾಗಿದೆ. ನಾನು ನಮ್ಮ ದೇಶವನ್ನು ಒಂದು ಘಟಕಕ್ಕೆ ಹೋಲಿಸಿ ನೋಡಿದಾಗ, ಚೈನಾ ದೇಶಕ್ಕೆ ಹೋಲಿಸಿ ನೋಡಿದಾಗ, ಒಂದು ಎಕರೆಗೆ ಯಾವ ಪ್ರಮಾಣದಲ್ಲಿ ನಾವು ಬೆಳೆಯನ್ನು ಬೆಳೆಯಬೇಕು, ಎಷ್ಟನ್ನು ಉತ್ಪಾದಿಸಬೇಕೋ ಅಷ್ಟನ್ನು ಉತ್ಪಾದಿಸುವುದಕ್ಕೆ ನಮಗೆ ಸಾಧ್ಯವಾಗುತ್ತಿಲ್ಲ. ಅದಕ್ಕೆ ಕಾರಣವೇನೆಂದರೆ, ನಮ್ಮ conventional system of agricultural operations. ನಮಗೆ ಒಳ್ಳೆಯ ಬೀಜಗಳನ್ನು ಕೊಡುವುದಕ್ಕೆ ಸಾಧ್ಯವಾಗುವುದಿಲ್ಲ, ಆ ದಿಕ್ಕಿನಲ್ಲಿ ಪ್ರಾಮಾಣಿಕವಾದ ಪ್ರಯತ್ನ ನಡೆದಿದೆ, ಆದರೆ ಯೋಗ್ಯವಾದ ಬಿತ್ತನೆ ಬೀಜಗಳನ್ನು ಕೊಡುವುದಕ್ಕೆ ಸಾಧ್ಯವಾಗುತ್ತಾ ಇಲ್ಲ. ಸಮರ್ಪಕವಾದ ರಸಗೊಬ್ಬರಗಳನ್ನು ಕೊಡುವುದಕ್ಕೆ ಆಗುತ್ತಿಲ್ಲ. ಅವರಿಗೆ ಬೇಕಾಗಿರತಕ್ಕಂಥ ಪೆಸ್ಟಿಸೈಡ್ಸ್‌ನ್ನು ಕೊಡುವುದಕ್ಕೆ ಸಾಧ್ಯವಾಗುತ್ತಿಲ್ಲ. ಇವೆಲ್ಲವನ್ನು ಕೊಟ್ಟು ನಂತರ ಅವನು ಬೆಳೆದಿರತಕ್ಕಂಥ ಬೆಳೆಗೆ ಯೋಗ್ಯವಾದ ಬೆಲೆಯನ್ನು ಕೊಡುವುದಕ್ಕೆ ಸಾಧ್ಯವಾಗುತ್ತಿಲ್ಲ. ಅದರಲ್ಲಿ ಏರುಪೇರುಗಳು ಇರುತ್ತವೆ. ಮಳೆಬರುತ್ತದೆ, ಇಲ್ಲದಿದ್ದರೆ ಹೆಚ್ಚು ಮಳೆ ಬಾರದೆ ಹೆಚ್ಚು ತೊಂದರೆಗಳು ಉಂಟಾಗುತ್ತವೆ. ಆದ್ದರಿಂದ ಈ ದೇಶದಲ್ಲಿರತಕ್ಕಂಥ ಕೃಷಿಕನ ಜೀವನ ಬಹಳ ಕಷ್ಟಕರವಾಗಿದೆ ಎನ್ನತಕ್ಕಂಥದ್ದು ನಮ್ಮ ಅನುಭವಕ್ಕೆ ವೇದ್ಯವಾಗಿರತಕ್ಕಂಥ ವಿಚಾರ. ನಮ್ಮನ್ನು ಸಾಕತಕ್ಕಂಥ ಆ ನೇಗಿಲುಯೋಗಿಗೆ ಅವನು ಮುಕ್ತವಾದಂಥ ವಾತಾವರಣದಲ್ಲಿ ತನ್ನ ಜೀವನವನ್ನು ಉತ್ತಮಪಡಿಸಿಕೊಳ್ಳುವುದಕ್ಕೆ ರಾಜ್ಯಕ್ಕೂ ಮತ್ತು ದೇಶಕ್ಕೂ ಸಹಾಯ ಮಾಡತಕ್ಕಂಥ ಸನ್ನಿವೇಶವನ್ನು ನಾವು ನಿರ್ಮಾಣ ಮಾಡಬೇಕಾಗಿದೆ. ನಮ್ಮಲ್ಲಿ ನೀರಾವರಿ ಶೇಕಡಾ 40 ಭಾಗ ಆಗಿರಬಹುದು, ಇನ್ನು 60 ಭಾಗ ನಮ್ಮ ದೇಶದಲ್ಲಿ ಈ ನೀರಾವರಿಯಿಂದ ವಂಚಿತವಾದ ಪ್ರದೇಶಗಳು ಇರುತ್ತವೆ. ಆ ಪ್ರದೇಶಗಳವರು ಕೇವಲ ಆಕಾಶವನ್ನು ಮಾತ್ರ ನೋಡಿ ಅವರ ಜೀವನವನ್ನು ಸಾಗಿಸಬೇಕಾಗಿರತಕ್ಕಂಥ ದುರ್ಬರವಾದ ಪರಿಸ್ಥಿತಿ ಇದೆ. ಅದಕ್ಕೋಸ್ಕರವಾಗಿ ಈ ವಾಟರ್ ಶೆಡ್ ಪ್ರೋಗ್ರಾಮ್‌ಗೆ ಅಧಿಕಾರಕ್ಕೆ ಬಂದ ಸರ್ಕಾರಗಳು ಹೆಚ್ಚು ಒತ್ತನ್ನು ಕೊಡಬೇಕಾಗಿರತಕ್ಕಂಥದ್ದು ಇದಕ್ಕೆ ಹೊರದೇಶಗಳಿಂದ ಕೂಡ ಫಂಡಿಂಗ್ ಸಾಧ್ಯತೆ ಇದೆ. ವಾಟರ್ ಶೆಡ್ ಪ್ರೋಗ್ರಾಮ್ ಬಗ್ಗೆ ನಮ್ಮ ಕಾಗೋಡು ತಿಮ್ಮಪ್ಪನವರು ಪ್ರಸ್ತಾಪ ಮಾಡುತ್ತಿದ್ದರು. ವಾಟರ್ ಶೆಡ್ ಪ್ರೋಗ್ರಾಮ್ ಎಷ್ಟು ಮುಖ್ಯ ಎನ್ನತಕ್ಕಂಥದ್ದು

ಸೈಂಟಿಫಿಕಲಿ ನಮ್ಮ ದೇಶದ ವಾಟರ್ ಶೆಡ್ ಪ್ರೋಗ್ರಾಮ್‌ಗಳಿಗೆ ಬೇರೆ ದೇಶದವರು ಹೆಚ್ಚು ಆಸಕ್ತಿಯನ್ನು ತೋರಿಸುತ್ತಿದ್ದಾರೆ, ಆದರೆ ನಾವು ತೋರಿಸತಕ್ಕಂಥ ಆಸಕ್ತಿ ಕಡಿಮೆ ಇದೆ. ಮಾನ್ಯ ಅಧ್ಯಕ್ಷರೆ, ಜಲಾನಯನ ಪ್ರದೇಶ ಅಭಿವೃದ್ಧಿ ಮಾಡಬೇಕು; ಇದರಿಂದ ಬಹಳ ಹೆಚ್ಚಿನ ಅನುಕೂಲವಾಗುತ್ತದೆ ಎನ್ನತಕ್ಕದ್ದು ನನ್ನ ಗಮನಕ್ಕೆ ಬಂತು. ಜರ್ಮನಿಯವರು ಬೈಲ್ಯಾಟ್ರೆಲ್ ಫಂಡಿಂಗ್‌ನಲ್ಲಿ ನಮ್ಮ ರಾಜ್ಯಕ್ಕೆ ಸುಮಾರು 30-40ಕೋಟಿ ರೂಪಾಯಿಗಳನ್ನು ಕೊಡಬೇಕೆಂದು ಹೇಳಿದೆವು, ಆದರೆ ಅವರು ಕೊಡತಕ್ಕ ಈ ಅನುದಾನ ಔಟ್‌ಲೆಟ್ ಗ್ರಾಂಟ್ ಸಾಲ ಅಲ್ಲ; ಇಂಟರೆಸ್ಟ್ ಇಲ್ಲ, ಸುಮ್ಮನೆ ಕೊಡುತ್ತಿದ್ದುದು ನಾವು ಚುರುಕಾಗಿ ಅದಕ್ಕೆ ಸ್ಪಂಧಿಸುವುದರ ಮೂಲಕ ಆ ಹಣವನ್ನು ನಾವು ಉಪಯೋಗಿಸಲಿಕ್ಕೆ ಸಾಧ್ಯವಾಗಲಿಲ್ಲವೆನ್ನತಕ್ಕ ನಿದರ್ಶನಗಳು ನನ್ನ ಗಮನಕ್ಕೆ ಬಂದಿದೆ, ಇದು ಆಗಬಾರದು. ಏಕೆಂದರೆ ನಮ್ಮ ಕ್ರೆಡಿಬಿಲಿಟಿ ಪ್ರಶ್ನೆ ಇದು. ಮೊನ್ನೆ ಅಮೇರಿಕಾ ದೇಶದ ರಾಯಭಾರಿಗಳು ಬೆಂಗಳೂರಿಗೆ ಬಂದಿದ್ದರು. ಆಗ ನನ್ನ ಜೊತೆಯಲ್ಲಿ ಮಾತನಾಡುತ್ತಾ ಈ ಬೈಲಾಟ್ರೆಲ್ ರಿಲೇಷನ್‌ಶಿಪ್ ಹೇಗೆ ಇರಬೇಕು When a Government commits itself to a particular plan of action or to a particular project, unless there is something basically wrong with it, ಅದನ್ನು ನಾವು ಮುಂದುವರಿಸಿಕೊಂಡು ಹೋಗಬೇಕೆನ್ನತಕ್ಕದ್ದು ಪಬ್ಲಿಕ್ ಅಡ್ಮಿನಿಸ್ಟ್ರೇಷನ್‌ನಲ್ಲಿ ಒಂದು ಕಾರ್ಡಿನಲ್ ಪ್ರಿನ್ಸಿಪಾಲ್. ಆ ಕಾರ್ಡಿನಲ್ ಪ್ರಿನ್ಸಿಪಾಲ್ ಮುಂದುವರಿಸಿಕೊಂಡು ಹೋಗಬೇಕು ಎನ್ನತಕ್ಕ ದೃಷ್ಟಿಯಿಂದಲೇ, ಪಾಪ ಮಹಾರಾಷ್ಟ್ರದಲ್ಲಿ ಬಿ.ಜೆ.ಪಿ.ಯವರು ಶಿವಸೇನೆಯವರು ಸರ್ಕಾರ ನಡೆಸುತ್ತಿದ್ದ ಕಾಲದಲ್ಲಿ ಎನ್ರಾಲ್ ಕಾರ್ಪೋರೇಷನ್ ಬಗ್ಗೆ ನಡೆದ ವಿಷಯ ತಮಗೆ ಜ್ಞಾಪಕವಿರಬೇಕಲ್ಲ; ಹಾಗೆ it is binding on successive governments, ನೀವು ಎಷ್ಟೇ ಅಪಸ್ವರಗಳನ್ನು ಎತ್ತಿರಲಿ ಹಿಂದೆ ಅದರ ಬಗ್ಗೆ ನೀವು ಏನೇ ಟೀಕೆ ಮಾಡಿರಲಿ when the chips are down you fall into the right track and thereby send a message. ಈಗ ಯಾವುದೋ ಒಂದು ಬೈಲ್ಯಾಟ್ರಲ್ ಅಗ್ರಿಮೆಂಟ್ ವಿಚಾರದಲ್ಲಿ ಇದು ನಮ್ಮ ದಿವ್ಯ ನಿರ್ಲಕ್ಷ್ಯವನ್ನು ತೋರಿಸುತ್ತದೆ. ಅದರಿಂದ ಆಗತಕ್ಕ ಅನಾಹುತ ಕೇವಲ ಕರ್ನಾಟಕ ರಾಜ್ಯಕ್ಕೆ ಅಲ್ಲ, ಇಡೀ ದೇಶಕ್ಕೆ ಆಗುತ್ತದೆ. ಏಕೆಂದರೆ ಅವರು they would have any number of bilateral understandings with various State Government. ಆದ್ದರಿಂದ ಇದರ ಬಗ್ಗೆ ನಾವು ಸ್ವಲ್ಪ ಹುಷಾರಾಗಿರಬೇಕು ಎನ್ನುವುದನ್ನು ನಾವು ಅರ್ಥ ಮಾಡಿಕೊಂಡಿದ್ದೇವೆ. ಆ ಚೌಕಟ್ಟಿನೊಳಗಡೆ ನಾವು ಕೆಲಸ ಮಾಡುತ್ತೇವೆಂದು ಹೇಳಿ ಅದನ್ನು ಇಲ್ಲಿಗೆ ಬಿಟ್ಟುಬಿಡುತ್ತೇನೆ, ಮುಂದುವರಿಸುವುದಿಲ್ಲ. ಇನ್ನು ರಸ್ತೆಗಳು, ನಮ್ಮ ಎಲ್ಲ ಸ್ನೇಹಿತರಲ್ಲಿ, ಮಾನ್ಯ ಸದಸ್ಯರಲ್ಲಿ ಮತ್ತು ಕರ್ನಾಟಕಕ್ಕೆ ಬಂದು ಹೋಗತಕ್ಕವರೆಲ್ಲರಲ್ಲೂ ಕೂಡ ಅದರಲ್ಲೂ ವಿಶೇಷವಾಗಿ ಮಾನ್ಯ ಶಂಕರಲಿಂಗೇಗೌಡರನ್ನು ಭಾದಿಸುತ್ತಿರತಕ್ಕದ್ದು ಈ ರಸ್ತೆ ವಿಚಾರ.

ಶ್ರೀ ಹೆಚ್.ಎಸ್. ಶಂಕರಲಿಂಗೇಗೌಡ: ಮಾನ್ಯ ಅಧ್ಯಕ್ಷರೆ, ಮೈಸೂರಿನಲ್ಲಿ ಯಾವುದೇ ಮೊಹಲ್ಲಾದ ರಸ್ತೆಯಲ್ಲಿ ಗರ್ಭಿಣಿ ಸ್ತ್ರೀಯನ್ನು ಯಾವುದಾದರೂ ವಾಹನದಲ್ಲಿ ಆಸ್ಪತ್ರೆಗೆ ಹೆರಿಗೆಗೋಸ್ಕರ ಕರೆದುಕೊಂಡು ಹೋಗುತ್ತಿದ್ದರೆ ಹೋಗುವಾಗಲೇ ಪ್ರಸವವೇದನೆಯಾಗಿ ಮಗು ಹೊರಗಡೆ ಬಂದುಬಿಡುತ್ತದೆ. ಮಂಡ್ಯ, ಮೈಸೂರು ಜಿಲ್ಲೆಗಳು ಒಂದೇ ರೀತಿ ಇರುವುದರಿಂದ ದಯಮಾಡಿ

ತಾವು ಮೈಸೂರಿಗೆ ಎರಡು ಸಾರಿ ಭೇಟಿ ಕೊಡಿ.

ಶ್ರೀ ಬಿ.ಹೆಚ್.ಬನ್ನಿಕೋಡ್: ಅವರ ಜಿಲ್ಲೆಯಲ್ಲಿ ಅಷ್ಟೇ ಅಲ್ಲ, ಇಡೀ ರಾಜ್ಯದಲ್ಲಿ ರಸ್ತೆಗಳು ಹದಗೆಟ್ಟಿವೆ.

ಶ್ರೀ ಹೆಚ್.ಎಸ್.ಶಂಕರಲಿಂಗೇಗೌಡ: ಮಾನ್ಯ ಮುಖ್ಯಮಂತ್ರಿಗಳು ನನ್ನ ಕ್ಷೇತ್ರದ್ದು ಹೇಳಿದರು ಅದಕ್ಕೆ ಹೇಳಿದ್ದೇನೆ. ನಿಮ್ಮ ಕ್ಷೇತ್ರದ್ದು ತೊಂದರೆಯಿದ್ದರೆ ಹೇಳಿ. ಹೇಳುವುದಕ್ಕೆ ನಿಮಗೆ ಅಧಿಕಾರವಿದೆ.

ಶ್ರೀ ಎಸ್.ಎಂ.ಕೃಷ್ಣ : ಅದು ರಸ್ತೆಗಳ ವಿಚಾರವಾಯಿತು. ರಸ್ತೆಗಳ ಸುಧಾರಣೆ ಆಗಲೇಬೇಕಾಗಿದೆ. ಪರಿಸ್ಥಿತಿ ಬಹಳ ಗಂಭೀರವಾಗಿದೆ. ಅದಕ್ಕೆ ಸಹಸ್ರಾರು ಕೋಟಿ ರೂಪಾಯಿಗಳು ಬೇಕಾಗುತ್ತದೆ. ಈ ರಸ್ತೆಗಳನ್ನು ನಾವು ಸರಿಪಡಿಸಬೇಕಾಗಿದ್ದರೆ ಅದಕ್ಕೆ ಎರಡು ಮೂರು ದಾರಿಗಳಿವೆ. ರಸ್ತೆಗಳನ್ನು ಸುಧಾರಿಸಬೇಕಾಗಿದ್ದರೆ ಲೋಕೋಪಯೋಗಿ ಇಲಾಖೆ ಚೌಕಟ್ಟಿನೊಳಗಡೆ ಬರತಕ್ಕ ರಸ್ತೆಗಳನ್ನು ಇಲಾಜ್ ಮಾಡಲಿಕ್ಕೆ ಅಥವಾ ಸುಧಾರಣೆ ಮಾಡಲಿಕ್ಕೆ 300ಕೋಟಿ ರೂಪಾಯಿಗಳನ್ನು ನಾವು ಮುಂದಿನ ತಿಂಗಳುಗಳಲ್ಲಿ ಖರ್ಚು ಮಾಡಬೇಕೆನ್ನತಕ್ಕ ನಿರ್ಣಯವನ್ನು ತೆಗೆದುಕೊಳ್ಳುತ್ತಿದ್ದೇವೆ. ಗ್ರಾಮೀಣ ಪ್ರದೇಶಗಳಲ್ಲಿರತಕ್ಕ ರಸ್ತೆಗಳನ್ನು ಸುಧಾರಣೆ ಮಾಡಲಿಕ್ಕೆ ತತ್‌ಕ್ಷಣ 100ಕೋಟಿ ರೂಪಾಯಿಗಳ ಹಣವನ್ನು ಅದಕ್ಕಾಗಿ ವೆಚ್ಚ ಮಾಡಬೇಕೆಂದು ತೀರ್ಮಾನ ಮಾಡಿದ್ದೇವೆ. ಇದರ ಜೊತೆಗೆ ವರ್ಲ್ಡ್ ಬ್ಯಾಂಕ್ ಮತ್ತು ಹುಡ್ಕೋ ಇವರುಗಳಿಗೆ ನಾವು ಸಂಪರ್ಕಿಸಿ ನಾಲ್ಕು ಪ್ರಾಮುಖ್ಯವಾದ ರಸ್ತೆಗಳನ್ನು ಈ ವರ್ಲ್ಡ್‌ಬ್ಯಾಂಕ್ ಸಹಾಯದಿಂದ ಮುಂದಿನ ದಿನಗಳಲ್ಲಿ ಇವುಗಳನ್ನು ಕೈಗೆತ್ತಿಕೊಳ್ಳಬೇಕೆಂದು ಹೇಳಿ ಬಿಜಾಪುರ-ಲೋಕಾಪುರ ರಸ್ತೆ ಬೀದರ್-ಶ್ರೀರಂಗಪಟ್ಟಣ ರಸ್ತೆ, ಮತ್ತೊಂದು ಕಲ್ಮಲ-ಗಿಣಿಗೇರ ಮುನಿರಾಬಾದ್ ರಸ್ತೆ ಇನ್ನೊಂದು ಶಿವಮೊಗ್ಗ-ಮರಿಯಮ್ಮನಹಳ್ಳಿ ಈ ನಾಲ್ಕು ರಸ್ತೆಗಳನ್ನು ವರ್ಲ್ಡ್‌ಬ್ಯಾಂಕ್ ಚೌಕಟ್ಟಿನಲ್ಲಿ ದುರಸ್ತಿ ಮಾಡಲಿಕ್ಕೆ ತೆಗೆದುಕೊಳ್ಳುತ್ತೇವೆ.

ಶ್ರೀ ಕೆ.ಎಂ. ಕೃಷ್ಣಮೂರ್ತಿ:ಮಾನ್ಯ ಸಭಾನಾಯಕರೆ, ತಾವು ನಾಲ್ಕು ಮುಖ್ಯ ರಸ್ತೆಗಳ ಬಗ್ಗೆ ಹೇಳಿದ್ದೀರಿ, ಬಾಕಿ ರಸ್ತೆಗಳ ಗತಿಯೇನು ಎಂದು ಹೇಳಬೇಕು.

ಶ್ರೀ ಎಸ್.ಎಂ.ಕೃಷ್ಣ: ಅದನ್ನು ಹೇಳುತ್ತೇನೆ.

ಶ್ರೀ ಹೆಚ್.ಎಸ್. ಶಂಕರಲಿಂಗೇಗೌಡ: ಸಾಲ ಮಾಡುವುದು ಮುಖ್ಯವಲ್ಲ, ಸಾಲ ಮಾಡುವ ಹಣ ಸರಿಯಾದ ರೀತಿಯಲ್ಲಿ ಸದುಪಯೋಗವಾಗಿದೆಯೇ ಎನ್ನುವುದು ಮುಖ್ಯ. ಆ ವಿವರವನ್ನು ತಾವು ತರಿಸಿಕೊಡುತ್ತೀರಾ?

ಅಧ್ಯಕ್ಷರು: ಅದರ ಬಗ್ಗೆ ಆಮೇಲೆ ಕ್ಲಾರಿಫಿಕೇಶನ್ ಕೇಳುವಾಗ ಕೇಳಿ. ಮಧ್ಯೆ ಮಧ್ಯೆ ನೀವು ಕೇಳುವುದು ಸರಿಯಲ್ಲ.

ಶ್ರೀ ಎಸ್.ಎಂ. ಕೃಷ್ಣ: ಈ ವಿಶ್ವಬ್ಯಾಂಕಿನ ಯೋಜನೆ ಅಲ್ಲದೆ ಹುಡ್ಕೋ ಯೋಜನೆಯಿಂದ ತತ್‌ಕ್ಷಣ ನಾವು ತೆಗೆದುಕೊಳ್ಳತಕ್ಕ ರಸ್ತೆ ಸುಧಾರಣೆ ಕಾರ್ಯಕ್ರಮದಲ್ಲಿ ಬೆಂಗಳೂರು, ಮೈಸೂರು, ಮಡಿಕೇರಿ, ಮಂಗಳೂರು ಈ ರಸ್ತೆಗಳನ್ನು ನಾವು ಸುಧಾರಣೆ ಮಾಡಬೇಕೆಂದು ತೀರ್ಮಾನ

ಮಾಡಿದ್ದೇವೆ. ಹಾಗೆಯೇ ಮೈಸೂರು-ಚಿಕ್ಕಮಗಳೂರು ರಸ್ತೆಯನ್ನು ಕೂಡ ಸುಧಾರಣೆ ಮಾಡಬೇಕೆಂದು ಹೇಳಿ ಅದಕ್ಕೆ ಬೇಕಾಗತಕ್ಕ ಹಣವನ್ನು ನಾವು ಹುಡ್ಕೋ ಅವರ ಜೊತೆಯಲ್ಲಿ ಪ್ರಸ್ತಾವನೆ ಮಾಡಿ ಅತಿ ಶೀಘ್ರದಲ್ಲೆ ಇವುಗಳನ್ನು ಇಂಪ್ಲಿಮೆಂಟ್ ಮಾಡುವವರು ಇದ್ದೇವೆ. ನಾವು ವರ್ಲ್ಡ್ ಬ್ಯಾಂಕ್ ಸಾಲ ತೆಗೆದು ಮಾಡುವ ಸುಧಾರಣೆ ಯಾವ ಪ್ರಮಾಣದ್ದು ಎಂದು ಹೇಳಿದರೆ 1,800ಕೋಟಿ ರೂಪಾಯಿಗಳ ಖರ್ಚನ್ನು ನಾವು ಭರಿಸಬೇಕಾಗುತ್ತದೆ. ಅದನ್ನು ಸದನ ಗಮನದಲ್ಲಿಟ್ಟುಕೊಳ್ಳಬೇಕೆಂದು ಪ್ರಾರ್ಥನೆ ಮಾಡುತ್ತೇನೆ. ಗ್ರಾಮಾಂತರ ಪ್ರದೇಶದ ರಸ್ತೆಗಳನ್ನು ಸುಧಾರಣೆ ಮಾಡಲಿಕ್ಕೆ ನಾವೇನು ತಕ್ಷಣದಲ್ಲಿ ಹಣ ಖರ್ಚುಮಾಡಬೇಕೆಂದು ಇದ್ದೇವೆ ಇದನ್ನು ಹೆಚ್ಚು ಮಾಡಲಿಕ್ಕೆ ಕೂಡ ನಮಗೆ ಅವಕಾಶವಿದೆ. ಇದು ತತ್‌ಕ್ಷಣದಲ್ಲಿ ನಾವು ಮಾಡಿರತಕ್ಕ ಒಂದು ಅಂದಾಜು.

ಶ್ರೀ ಮಾಲೀಕಯ್ಯ ವಿ. ಗುತ್ತೇದಾರ್: ಮಾನ್ಯ ಸಭಾನಾಯಕರು ಏನು ಹೇಳುತ್ತಿದ್ದಾರೆ ಅದು ಈಗಾಗಲೇ ಬಜೆಟ್‌ನಲ್ಲಿ ಇದೆ. ಬಜೆಟ್‌ನಲ್ಲಿರುವುದನ್ನು ಬಿಟ್ಟು ಏನಾದರೂ ವಿಶೇಷವಾಗಿ ಇಷ್ಟು ಕೋಟಿ ರೂಪಾಯಿಗಳನ್ನು ಹೆಚ್ಚಿಗೆ ಕೊಡುತ್ತಿದ್ದೀರಾ?

ಶ್ರೀ ಎಸ್.ಎಂ. ಕೃಷ್ಣ: ಹೌದು.

ಶ್ರೀ ಸಿ.ಭೈರೇಗೌಡ: ಮಾನ್ಯ ಅಧ್ಯಕ್ಷರೆ, ನಾನು ಆಮೇಲೆ ಕೇಳಬೇಕೆಂದು ಇದ್ದೆ, ಆದರೆ ಮಾನ್ಯ ಮುಖ್ಯಮಂತ್ರಿಗಳು ಹೇಳುತ್ತಿರುವುದು 300ಕೋಟಿ ರೂಪಾಯಿಗಳ ಲೋಕೋಪಯೋಗಿ ರಸ್ತೆಗಳಿಗೆ ಮತ್ತೆ 100ಕೋಟಿ ರೂಪಾಯಿಗಳ ಗ್ರಾಮೀಣ ಪ್ರದೇಶದ ರಸ್ತೆಗಳಿಗೆ ಖರ್ಚುಮಾಡುತ್ತೀರಿ. ಇದು ಈ ವರ್ಷದ ಬಜೆಟ್‌ನಲ್ಲಿ ಇರುವುದಕ್ಕಿಂತ is it over and above the budgeted amount for the current year?

ಶ್ರೀ ಎಸ್.ಎಂ. ಕೃಷ್ಣ: ಪ್ಲಾನ್ ಮತ್ತು ನಾನ್‌ಪ್ಲಾನ್ ಎರಡೂ ಸೇರಿ.

ಶ್ರೀ ಸಿ. ಭೈರೇಗೌಡ: ಈ ವರ್ಷದ ಬಜೆಟ್‌ನಲ್ಲಿದೆ. Is it over and above the dudgeted amount

ಶ್ರೀ ಎಸ್.ಎಂ. ಕೃಷ್ಣ: ಈಗ ನಾವು ಅದನ್ನೆ ಖರ್ಚು ಮಾಡುವುದು. ಹೊಸದು ನಾನು ಎಲ್ಲಿಂದ ತರಲಿ? ಹೊಸದು ತರುವುದಕ್ಕೆ ಬರುವುದಿಲ್ಲ. ಬಜೆಟ್‌ನಲ್ಲಿರುವುದನ್ನು ನೀವು ಖರ್ಚು ಮಾಡದೇ ಬಿಟ್ಟು ಹೋದಿರಲ್ಲ ಅದನ್ನೆ ನಾವು ಖರ್ಚು ಮಾಡುತ್ತೇವೆ ಎನ್ನತಕ್ಕದ್ದು ಅಷ್ಟೆ. ವೆರಿ ಸಿಂಪಲ್.

SRI C.BAIREGOWDA: Now the cat is out of the bag.

SRI S.M.KRISHNA: The cat was out of the bag on 6th night itself. It didn't come out now.

ಶ್ರೀ ಸಿ. ಭೈರೇಗೌಡ: It has come already. ತಾವೇನು 300ಕೋಟಿ, 100ಕೋಟಿ ರೂಪಾಯಿಗಳನ್ನು ಖರ್ಚು ಮಾಡುತ್ತೇವೆಂದು ಹೇಳುವುದನ್ನು ನೋಡಿದರೆ ಏನೋ

ವಿಶೇಷವಾಗಿರತಕ್ಕ ಹಣವೆನ್ನುವ ಭಾವನೆಯಿತ್ತು. ಈಗ ತಾವು ಅದನ್ನು ದೂರ ಮಾಡಿದ್ದೀರಿ. That is why I said the cat is out of the bag.

SRI S.M.KRISHNA: Now we are very transparent.

SRI C.BAIREGOWDA: Very good. we welcome that.

ಶ್ರೀ ಬಿ.ಹೆಚ್.ಬನ್ನಿಕೋಡ್: ಮಾನ್ಯ ಭೈರೇಗೌಡರು ಏನು ಖರ್ಚುಮಾಡದೆ ಉಳಿಸಿದ್ದಾರೆ ಅದನ್ನು ಇವರು ಖರ್ಚುಮಾಡುತ್ತಾರೆ.

ಶ್ರೀ ಕೆ.ಎಂ. ಕೃಷ್ಣಮೂರ್ತಿ: ಕಂಟ್ರಾಕ್ಟರುಗಳಿಗೆ ಕೊಡುವ ಬಾಕಿ ಬಿಲ್ಲು 250 ಕೋಟಿ ರೂಪಾಯಿಗಳ ಬಾಕಿಯಿದೆ.

ಶ್ರೀ ಎಸ್.ಎಂ. ಕೃಷ್ಣ: ಮಾನ್ಯ ಭೈರೇಗೌಡರು ಏನು ಅನುಮಾನಗಳನ್ನು ಹೇಳಿದ್ದಾರೆ... Government is an on-going institution. The budget is an exercise which is binding on successive Governments. We are going to spend that three hundred crores which the previous Government has provided. ಆ ವರ್ಲ್ಡ್‌ಬ್ಯಾಂಕಿನ ಸಹಾಯದಿಂದ ಮಾಡುವ ನಾಲ್ಕು ರಸ್ತೆಗಳ ಬಗ್ಗೆ ಹೇಳಿದೆನಲ್ಲ, ಹಾಗೇನೆ ಹುಡ್ಕೋದಿಂದ ಮೈಸೂರು-ಬೆಂಗಳೂರು, ಮೈಸೂರು-ಮಡಿಕೇರಿ-ಮಂಗಳೂರು, ಮೈಸೂರು-ಚಿಕ್ಕಮಗಳೂರು ಈ ರಸ್ತೆಗಳು ಹುಡ್ಕೋ ಚೌಕಟ್ಟಿನಲ್ಲಿ ಬರುತ್ತವೆ. ಮತ್ತೆ ನಾನು ಹೇಳಿದಂತೆ ನಾಲ್ಕು ದೊಡ್ಡದಾರಿಗಳು ಬೀದರ್-ಶ್ರೀರಂಗಪಟ್ಟಣ,-ಅವುಗಳೆಲ್ಲ ವರ್ಲ್ಡ್‌ಬ್ಯಾಂಕ್ ಚೌಕಟ್ಟಿನಲ್ಲಿ ಬರುತ್ತವೆ. ನಿಮ್ಮ ಸರ್ಕಾರವೇ ಅದನ್ನು ಮಾಡಿದೆ. Let me be very frank. ಆದ್ದರಿಂದ, ಇವತ್ತು ಏನು ಹಲವಾರು ವಿಚಾರಗಳನ್ನು ನಮ್ಮ ಮಾನ್ಯ ಸದಸ್ಯರುಗಳು ಹೇಳಿದ್ದಾರೆ, ನಾವು ಅವುಗಳೆಲ್ಲದರ ಬಗ್ಗೆ ಪ್ರಸ್ತಾಪ ಮಾಡತಕ್ಕಂಥಾದ್ದು ಸಾಧ್ಯವಾಗುವುದಿಲ್ಲ; ಏಕೆಂದರೆ ಸಮಯದ ಅಭಾವ. ನಾನು ನನ್ನ ಭಾಷಣವನ್ನು ಪ್ರಾರಂಭಮಾಡಿ ಈಗಾಗಲೇ ಒಂದೂವರೆ ಗಂಟೆಯಾಗಿದೆ.

ಶ್ರೀ ವಿ. ಸೋಮಣ್ಣ: ಬೇರೆ ನಗರಗಳ ಬಗ್ಗೆ ತಾವು ಸಮಸ್ತ ಚಿತ್ರಣವನ್ನು ಕೊಡುತ್ತಾ ಬಂದಿರಿ. ಆದರೆ ಬೆಂಗಳೂರು ನಗರದ ಬಗ್ಗೆ ತಾವೇನೂ ಹೇಳಿಲ್ಲ. ತಾವು ಅದನ್ನು ಮರೆತಿದ್ದೀರೋ ಏನೋ ಎಂದು ಗೊತ್ತಾಗಲಿಲ್ಲ.

ಶ್ರೀ ಎಸ್.ಎಂ. ಕೃಷ್ಣ: ಗ್ರಾಮೀಣ ಅಭಿವೃದ್ಧಿ ಬಗ್ಗೆ ಹೆಚ್ಚು ಕಾಳಜಿ ಇರುವುದರಿಂದ ಗ್ರಾಮೀಣ ಅಭಿವೃದ್ಧಿಗೋಸ್ಕರ ಹೆಚ್ಚು ಒತ್ತನ್ನು ಈ ಸರ್ಕಾರ ಕೊಡುತ್ತದೆ ಎನ್ನತಕ್ಕಂಥ ಪ್ರಬಲವಾದಂಥ ಇಚ್ಛೆ ಇತ್ತಲ್ಲ, ಅದಕ್ಕೋಸ್ಕರ ಗ್ರಾಮಾಂತರ ಪ್ರದೇಶಗಳಿಂದ ಪ್ರಾರಂಭವಾಗಿ ಈಗ ಬೆಂಗಳೂರು ನಗರಕ್ಕೆ ಬರುತ್ತಿದ್ದೇನೆ.

ಶ್ರೀ ಡಿ.ವಿ.ಸದಾನಂದಗೌಡ: ಗ್ರಾಮೀಣ ಪ್ರದೇಶಗಳಿಂದ ತಾವು ನಗರಕ್ಕೆ ಬರುತ್ತಿದ್ದೀರಿ.

ಆದರೆ ಕರಾವಳಿ ಪ್ರದೇಶವನ್ನು ಸಮುದ್ರಕ್ಕೆ ತಳ್ಳುತ್ತೀರೇನೋ ಎನ್ನುವ ಸಂಶಯ ಇದೆ. ಆದ್ದರಿಂದ ಅದರ ಬಗ್ಗೆ ತಾವು ಹೇಳಬೇಕಾಗಿದೆ.

ಶ್ರೀ ಬಿ.ಶಿವರಾಮು: ಜಿಲ್ಲಾ ಪಂಚಾಯತ್ ರಸ್ತೆಗಳಿಗೆ ತಾವು ಹೆಚ್ಚು ಒತ್ತು ಕೊಡುತ್ತೇವೆ ಎನ್ನತಕ್ಕಂಥ ಮಾತನ್ನು ಹೇಳಬೇಕು. ತಾವು ಹೇಳುತ್ತಾ ಇರತಕ್ಕಂಥ ರಸ್ತೆಗಳು ಪ್ರಾಮುಖ್ಯವಾದವು ಆಗಿದ್ದರೂ ಕೂಡ ಮಳೆ ಹಾನಿಯಿಂದ ಹಾಳಾದ ಹಳ್ಳಿಗಳ ರಸ್ತೆಗಳಿಗೆ ನಾವು ಹೆಚ್ಚು ರೀತಿಯಲ್ಲಿ ಒತ್ತು ಕೊಟ್ಟಿಲ್ಲ. ಈಗ ಆಯವ್ಯಯದಲ್ಲಿ ಜಿಲ್ಲಾಪಂಚಾಯತ್ ರಸ್ತೆಗಳಿಗೆ ಕೊಟ್ಟಿರತಕ್ಕಂಥ ಹಣ ಏನೇನೂ ಸಾಲದು. ಆದ್ದರಿಂದ, ದಯವಿಟ್ಟು ಇದಕ್ಕೆ ಹೆಚ್ಚು ಆದ್ಯತೆಯನ್ನು ಕೊಡಬೇಕು. ಇದಕ್ಕೆ ಆದ್ಯತೆ ಕೊಡುವುದು ಬಹಳ ಪ್ರಾಮುಖ್ಯವಾದುದು ಎಂದು ಹೇಳುವುದಕ್ಕೆ ಇಚ್ಚಿಪಡುತ್ತೇನೆ.

ಶ್ರೀ ಎಸ್.ಎಂ.ಕೃಷ್ಣ: ಅದರ ಮಹತ್ವವನ್ನು ನಾವು ಅರ್ಥಮಾಡಿಕೊಂಡಿದ್ದೇವೆ. ಈಗ ಬೆಂಗಳೂರು ಸೋಮಣ್ಣನವರ ಊರು, ನಮ್ಮ ಊರು, ವಿಧಾನಸೌಧ ಇರತಕ್ಕಂಥ ಊರು, ಹೈಕೋರ್ಟು ಇರತಕ್ಕಂಥ ಊರು, ನಮ್ಮ ರಾಜ್ಯದ ಪ್ರಭುತ್ವ ನಡೆಸತಕ್ಕಂಥ ಸ್ಥಳ. ಆದ್ದರಿಂದ ವಿಶೇಷವಾದಂಥ ಗಮನವನ್ನು ಅನಿವಾರ್ಯವಾಗಿ ಬೆಂಗಳೂರಿಗೆ ನಾವು ಕೊಡಬೇಕಾಗುತ್ತದೆ. ಏಕೆಂದರೆ ಕೆಲವರು ಹೇಳುತ್ತಾರೆ, ಏನೆಂದರೆ ಬಂದಬಂದ ಸರ್ಕಾರಗಳೆಲ್ಲ ಆದ್ಯತೆಯನ್ನು ಪಟ್ಟಣ ಪ್ರದೇಶಗಳಿಗೆ ಕೊಡುತ್ತಾರೆ, ಬೆಂಗಳೂರಿಗೆ ಕೊಡುತ್ತಾರೆ, ಹೈಟೆಕ್‌ಗೆ ಕೊಡುತ್ತಾರೆ, Elite politician, oxford, ಆದ್ದರಿಂದ ಸ್ವಲ್ಪ ಅಳುಕಿನಿಂದಲೇ ನಾನು ಬೆಂಗಳೂರಿನ ವಿಚಾರ ಪ್ರಸ್ತಾಪ ಮಾಡುವಾಗ ಹೇಳಬೇಕಾಗುತ್ತದೆ. ನಾವು ಈ ಬೆಂಗಳೂರು ನಗರಕ್ಕೆ ಹೆಚ್ಚು ಆದ್ಯತೆಯನ್ನು ಕೊಡಬೇಕಾಗಿರತಕ್ಕಂಥ ದೃಷ್ಟಿ ಏನು ಎಂದರೆ ಅಮೆರಿಕದ ಒಂದು ಪ್ರತಿಷ್ಠಿತ ಮ್ಯಾಗಜಿನ್‌ನವರು ಬೆಂಗಳೂರಿನಲ್ಲಿ ಮಾಡಿದಂಥ ಒಂದು ಸರ್ವೆ ಪ್ರಕಾರ ವಿಶ್ವದ ಹತ್ತು ನಗರಗಳು ಬೆಳೆಯಬೇಕಾಗಿರತಕ್ಕಂಥಾದ್ದು ಇವೆ. ಅದರಲ್ಲೂ ಹೈಟೆಕ್ ನಗರ, ಹೈಟೆಕ್ ಕೈಗಾರಿಕೆಗಳು ಬೆಳೆಯುವುದಕ್ಕೆ ಯೋಗ್ಯವಾದಂಥ ಭೂಮಿಕೆಯನ್ನು ಪಡೆದಿರತಕ್ಕಂಥಾದ್ದು ಮಿಕ್ಕ 9 ನಗರಗಳ ಜೊತೆಗೆ ಬೆಂಗಳೂರು ಕೂಡ ಹಾಗೆ ಇದೆ ಎಂದು ಇದನ್ನು ಸೇರಿಸಿದ್ದಾರೆ. ಮತ್ತು ಬೆಂಗಳೂರಿನ ಮಹತ್ವ ಇತ್ತೀಚಿನ ವರ್ಷಗಳಲ್ಲಿ ಇಳಿದುಹೋಗುತ್ತಿದೆಯೇನೋ, ಎನ್ನುವ ಪ್ರಚಾರ ನಡೆಯುತ್ತಿತ್ತು. ಆ ಪ್ರಚಾರಕ್ಕೆ ಒಂದು ಪೂರ್ಣವಿರಾಮವನ್ನು ನಾವು ಹಾಕಲೇಬೇಕಾಗಿತ್ತು. ಆ ಕೆಲಸವನ್ನು ಈ ಸರ್ಕಾರ ಬಂದ ಮೂವತ್ತು ದಿವಸಗಳಲ್ಲಿ ಮಾಡಿದೆ ಎನ್ನತಕ್ಕಂಥಾದ್ದನ್ನು ಬಹಳ ಹೆಮ್ಮೆಯಿಂದ ನಾನು ಹೇಳುತ್ತಿದ್ದೇನೆ. ಏಕೆಂದರೆ ಬೆಂಗಳೂರಿನಿಂದ ಕಾರ್ಖಾನೆಗಳೆಲ್ಲ ಹೊರಟುಹೋಗುತ್ತಿವೆ, ಏಕೆಂದರೆ ಇಲ್ಲಿ ವಿದ್ಯುಚ್ಛಕ್ತಿ ಇಲ್ಲ, ಇಲ್ಲಿ ರಸ್ತೆಗಳಿಲ್ಲ, ಇಲ್ಲಿ ಫ್ಲೈಓವರ್‌ಗಳು ಇಲ್ಲ, ಒಳಚರಂಡಿ ವ್ಯವಸ್ಥೆಯಿಲ್ಲ Solid waste management ತೆಗೆಯುವಂಥ ಕೆಲಸಕಾರ್ಯಗಳು ನಡೆಯುತ್ತಿಲ್ಲ ಎನ್ನುವ ಮಾತಿದೆ. ಮಾನ್ಯ ಸದಸ್ಯರಾದ ಸುಬ್ಬಾರೆಡ್ಡಿಯವರು ಮತ್ತು ಮಾನ್ಯ ಸೋಮಣ್ಣನವರು ಇದು 'ಡೈಯಿಂಗ್ ಸಿಟಿ' ಎಂದು ಏನೋ ಹೇಳಿದರು. ಮಾನ್ಯ ಸೋಮಣ್ಣನವರು ಹಾಗೆ ಹೇಳುವುದಕ್ಕೆ ಸಾಧ್ಯವಿಲ್ಲ. ಏಕೆಂದರೆ ಇದರ ಉತ್ಕರ್ಷಗೆ ನೀವು ಬಹಳ ಸಹಾಯ ಮಾಡಿದ್ದೀರಿ. ಇದೊಂದು 'ಗಾರ್ಬೆಜ್ ಸಿಟಿ' ಎಂದು ಯಾರೋ ಹೇಳಿದರು. ಇವೆಲ್ಲವನ್ನೂ ನಾವು ಮೂವತ್ತು ದಿವಸಗಳಲ್ಲಿ ಸರಿಮಾಡುವುದಕ್ಕೆ ಆಗುವುದಿಲ್ಲ. ಅದರಲ್ಲೂ ಕೂಡ ನೂರು ಜನ ನಗರಪಿತೃಗಳು ಇರುವಾಗ, ಮಹಾನಗರಪಾಲಿಕೆ ಇರತಕ್ಕಂಥ ಕಾಲದಲ್ಲಿ, ಬಾಂಡ್‌ರೋಡ್‌ಗಳು ಆಗಿರತಕ್ಕಂಥ

ಕಾಲದಲ್ಲಿ ನಾವು ಇದನ್ನು ಸರಿಪಡಿಸುವುದಕ್ಕೆ ಬಹಳ ಶ್ರಮಪಡಬೇಕಾಗುತ್ತದೆ. ಇದು ಕಠಿಣಸಾಧ್ಯವಾದಂಥ ಕೆಲಸ ಎಂದು ಮಾನ್ಯ ಸುರೇಶ್‌ಕುಮಾರ್ ಅವರು ಒಪ್ಪುತ್ತಾರೆ. ಏಕೆಂದರೆ ಅವರು ಕಾರ್ಪೊರೇಟರ್ ಆಗಿದ್ದರು, ಈಗ ಲೆಜಿಸ್ಲೇಟರ್ ಆಗಿದ್ದಾರೆ, ಮುಂದೆ ಏನೇನು ಆಗುತ್ತಾರೋ ಗೊತ್ತಿಲ್ಲ. ಆದ್ದರಿಂದ, ನಿಮ್ಮ ಸಹಕಾರವನ್ನು ಮಾತ್ರ ಕೇಳುತ್ತಿದ್ದೇನೆ. ಕಾರಣ ನಗರದ ಜನಜೀವನದ ಗುಣಮಟ್ಟ ಸುಧಾರಣೆ ಮಾಡಬೇಕಾಗಿರತಕ್ಕಂಥಾದ್ದು ಬಹಳ ಅಗತ್ಯವಿರುವಂಥಾದ್ದು. ಮುಂದಿನ ಐದು ವರ್ಷಗಳಲ್ಲಿ ಪ್ರಾಮುಖ್ಯವಾಗಿ ಹುಡ್ಕೋ ಸಂಸ್ಥೆಯ ಮೂಲಕ ಎರಡು ಸಾವಿರ ಕೋಟಿ ರೂಪಾಯಿಗಳನ್ನು ನಾವು ಈ ಬೆಂಗಳೂರು ನಗರದಲ್ಲಿ ಉಪಯೋಗಿಸಬೇಕು ಎಂದು ತೀರ್ಮಾನ ಮಾಡುತ್ತಿದ್ದೇವೆ. ಇದರಲ್ಲಿ ನಗರದಲ್ಲಿ ಮೇಲುಸೇತುವೆಗಳು ಬಹಳ ಅಗತ್ಯವಾಗಿ ಆಗ ಬೇಕಾಗುತ್ತದೆ. traffic congestion ಬಹಳ ಇದೆ. ನಮ್ಮನ್ನು ಹೈದರಾಬಾದ್ ನಗರಕ್ಕೆ ಹೋಲಿಸತಕ್ಕದ್ದು ಉಂಟು. ಇನ್ನು ಒಂದು ವರ್ಷದಲ್ಲಿ ಅಥವಾ ಎರಡು ವರ್ಷದಲ್ಲಿ ಬೆಂಗಳೂರನ್ನು ಸರಿಸಮಾನವಾಗಿ ಅದನ್ನು ಮುಟ್ಟತಕ್ಕವರು ಯಾರೂ ಇಲ್ಲ ಎನ್ನತಕ್ಕಂಥ ಒಂದು ಕಲ್ಪನೆ ಬರತಕ್ಕಂಥ ರೀತಿಯಲ್ಲಿ ಬೆಂಗಳೂರನ್ನು ಬದಲಾವಣೆ ಮಾಡಬೇಕಾಗಿರತಕ್ಕಂಥ ಅವಶ್ಯಕತೆ ಇದೆ. ಇದಕ್ಕೆ ನಾವು ಕೆಲವು ಕಠಿಣವಾದಂಥ ನಿರ್ಧಾರಗಳನ್ನು ತೆಗೆದುಕೊಳ್ಳಬೇಕಾಗುತ್ತದೆ. ಅದಕ್ಕೆ ಮಾನ್ಯ ಸೋಮಣ್ಣನವರು ಮತ್ತು ಮಾನ್ಯ ಸುರೇಶ್‌ಕುಮಾರ್ ಅವರ ಸಹಕಾರವನ್ನು ಕೋರಬೇಕಾಗಿ ಬರುತ್ತದೆ. ಏಕೆಂದರೆ ಈ ಬಗ್ಗೆ ಕಠಿಣ ನಿರ್ಧಾರಗಳನ್ನು ತೆಗೆದುಕೊಳ್ಳಬೇಕಾಗಿದೆ. ಪೇಷೆಂಟ್‌ಗೆ ಜ್ವರ ಬಂದಾಗ ಕಹಿಮಾತ್ರೆ ಅಥವಾ ಇಂಜೆಕ್ಷನ್ ಕೊಡಲೇಬೇಕಾಗುತ್ತದೆ. ಇವತ್ತು ಬೆಂಗಳೂರನ್ನು ನಾವು ಪುನರ್‌ನಿರ್ಮಾಣ ಮಾಡಬೇಕಾಗುತ್ತದೆ. ಕೆಂಪೇಗೌಡ ಸೃಷ್ಟಿ ಮಾಡಿದಂಥ ನಾಲ್ಕು ಗೋಪುರಗಳು ಏನಿವೆ, ಅದನ್ನು ದಾಟಿ ಸುಮಾರು ಇಪ್ಪತ್ತು ಕಿಲೋಮೀಟರ್‌ನಷ್ಟು ನಾವು ಹೊರಟು ಹೋಗಿದ್ದೇವೆ. ಆದ್ದರಿಂದ ಬೆಂಗಳೂರಿನ ಇನ್‌ಫ್ರಾಸ್ಟ್ರಕ್ಚರ್ಸ್‌ನ್ನು ಇಂಪ್ರೂವ್ ಮಾಡಬೇಕಾಗಿರತಕ್ಕಂಥಾದ್ದು ಇವತ್ತಿನ ಅನಿವಾರ್ಯತೆಗಳಲ್ಲಿ ಒಂದು. ಅದರಿಂದ ಬಿಡಿಸಿಕೊಳ್ಳುವುದಕ್ಕೆ ಸಾಧ್ಯವಾಗುವುದಿಲ್ಲ. ಅದು ಆಗಬೇಕಾದರೆ ನಾವು ಡಿಸಿಪ್ಲಿನ್‌ನ್ನು ತರಬೇಕಾಗುತ್ತದೆ. ಕಾರ್ಪೊರೇಷನ್ ಲೆವಲ್‌ನಲ್ಲಿ ಡಿಸಿಪ್ಲಿನ್‌ತರಬೇಕಾಗುತ್ತದೆ ಮತ್ತು ಬೆಂಗಳೂರಿನ ಮುನಿಸಿಪಲ್ ವರಮಾನ ಇವತ್ತು ನೂರು ನೂರಿಪ್ಪತ್ತು ಕೋಟಿ ರೂಪಾಯಿಗಳು ಇದೆಯೆಂದು ನಾನು ಕೇಳಿದೆ. ನಮಗೆ ಈಗ ಬರತಕ್ಕಂಥ ವರಮಾನ ಇದು. ಸೂರತ್ ಎನ್ನತಕ್ಕಂಥ ಒಂದು ಪಟ್ಟಣ ಇದೆ. ಅಲ್ಲಿ ನಾಲ್ಕುನೂರು ಕೋಟಿ ರೂಪಾಯಿಗಳ ವರಮಾನ ಇದೆ. ಬೆಂಗಳೂರು ಬೆಳೆದಿರತಕ್ಕಂಥ ಪ್ರಮಾಣ ಏನು, ಅದರ ವ್ಯಾಪಕತೆ ಏನು, ಎತ್ತರ, ಅದರ ಆಳ ಏನು। ಅಂಥಾದ್ದರಲ್ಲಿ ಸೂರತ್‌ಗೆ ಹೋಲಿಸಿ ನೋಡಿದರೆ ನಾವು ನಾಲ್ಕು ನೂರು ಕೋಟಿರೂಪಾಯಿಗಳನ್ನು ತೆರಿಗೆ ಮೂಲಕ ವಸೂಲು ಮಾಡಲು ಸಾಧ್ಯವಾಗುವುದಿಲ್ಲ ಎಂದರೆ ಏನೋ.....

ಶ್ರೀ ಎಸ್.ಸುರೇಶ್‌ಕುಮಾರ್: ಅಧ್ಯಕ್ಷರೆ, Bangalore City Corporation is very poor. ಆದರೆ ಕಾರ್ಪೊರೇಷನ್‌ನಲ್ಲಿ ಇರುವವರು ಬಹಳ rich.

ಒಬ್ಬಸದಸ್ಯರು: ಐದು ವರ್ಷಗಳ ಹಿಂದೆ ಪ್ಲೇಗ್ ಬರುವುದಕ್ಕೆ ಮುಂಚೆ ಸೂರತ್ ಒಂದು ಹಾಳು ಕೊಂಪೆಯಾಗಿತ್ತು. ಮೂರು ತಿಂಗಳ ಹಿಂದೆ ನಾನು ಹೋಗಿದ್ದೆ. ಇವತ್ತು ಅದು ಅಷ್ಟೇ ಸುಂದರವಾಗಿದೆ. ಅಷ್ಟರಮಟ್ಟಿಗೆ ಅದರ ಅಭಿವೃದ್ಧಿಯಾಗಿದೆ.

ಶ್ರೀ ಎಸ್.ಎಂ. ಕೃಷ್ಣ : ತಾವು ಹೇಳಿದ್ದರಲ್ಲಿ ಸತ್ಯ ಇದೆ. ಬೆಂಗಳೂರು ಕಾರ್ಪೊರೇಷನ್ ಬಡವಾಗುತ್ತಿದೆ, ಆದರೆ ಅದನ್ನು ಹೊಂದಿರತಕ್ಕಂಥವರು, ಅದನ್ನು ಅವಲಂಬಿಸಿರತಕ್ಕವರು, ಅಲ್ಲಿ ಕೆಲಸ ಮಾಡುತ್ತಿರತಕ್ಕವರು ಬಹಳ ಚೆನ್ನಾಗಿ ಇದ್ದಾರೆ. ಆದರೆ ಪ್ರಶ್ನೆ ಇರುವುದು ಅವರು ಚೆನ್ನಾಗಿ ಇರುವುದಕ್ಕೆ ಬಿಡಬೇಕೇ ಅಥವಾ ಅವರ ಮೇಲೆ ನಿಯಂತ್ರಣ ಹಾಕಬೇಕೇ ಎನ್ನುವುದು. ಈ ಸರ್ಕಾರ ಅವರ ಮೇಲೆ ನಿಯಂತ್ರಣ ಹಾಕುವುದಕ್ಕೆ ಸ್ಪಷ್ಟವಾದ ತೀರ್ಮಾನ ತೆಗೆದುಕೊಳ್ಳುತ್ತದೆ. ಆಸಕ್ತ, ಹಿತಾಸಕ್ತಿಗಳು ಏನಿವೆ, ಅವನ್ನು ಕಿತ್ತು ಆಚೆ ಬೇರುಸಹಿತ ಬಿಸಾಡಬೇಕಾಗಿದೆ; ಇಲ್ಲದೇ ಹೋದರೆ ಬೆಂಗಳೂರಿಗೆ ಮುಕ್ತಿ ಸಿಗುವುದಿಲ್ಲ. ಯಾರು ಯಾರು ಇಂಜಿನಿಯರ್ಸ್ ಕಾರ್ಪೊರೇಷನ್‌ಗಳಲ್ಲಿ ಗೂಟ ಕಟ್ಟಿಕೊಂಡಿದ್ದಾರೋ ಅವರನ್ನೆಲ್ಲಾ ಆಚೆಗೆ ಕಳುಹಿಸಬೇಕಾದಂಥಾದ್ದು, ಬಹಳ ಅವಶ್ಯಕವಾದ ಸುಧಾರಣೆಗಳನ್ನು ಮಾಡಿ ಎಂದು ಹೇಳಿ ಹೊಸ ಆಯುಕ್ತರನ್ನು ಈ ಸರ್ಕಾರ ನೇಮಕ ಮಾಡಿದೆ. ಯಾರೇ ಶಿಫಾರಸ್ಸಿಗೆ ಬರಲಿ, ನಾನು ಸ್ಪಷ್ಟವಾಗಿ ಹೇಳುತ್ತಿದ್ದೇನೆ. ಆ ಶಿಫಾರಸ್ಸಿಗೆ ನಾನು ಮಣಿಯತಕ್ಕಂತಹವನಲ್ಲ. ಅದಕ್ಕೆ ಏನು ಬೆಲೆಯನ್ನು ಕೂಡ ನಾನು ಕೊಡಲಿಕ್ಕೆ ತಯಾರಾಗಿದ್ದೇನೆ. ಆದರೆ, ಆ ಶಿಫಾರಸ್ಸುಗಳಿಗೆ ನಾನು ಮಣಿಯುವುದಿಲ್ಲ. ಇಂತಹ ಕಠಿಣವಾದ ನಿರ್ಧಾರಗಳನ್ನು ನಾವು ತೆಗೆದುಕೊಳ್ಳದೇ ಹೋದರೆ, ಸರ್ಕಾರ ಇದ್ದರೇನು, ಇಲ್ಲದೇ ಇದ್ದರೇನು? ಆದ್ದರಿಂದ, ಈ ದಿಸೆಯಲ್ಲಿ ನಾವು ತೆಗೆದುಕೊಳ್ಳತಕ್ಕ ಎಲ್ಲಾ ಕೆಲಸಕಾರ್ಯಗಳಿಗೂ ಕೂಡ ತಾವೂ ಸ್ಪಂದಿಸಬೇಕು. ಕಾರ್ಪೊರೇಟರುಗಳೂ ಸ್ಪಂದಿಸಬೇಕು ಮತ್ತು ಅಧಿಕಾರಿವರ್ಗದವರೂ ಸ್ಪಂದಿಸಬೇಕು. ನಮ್ಮದು ಮುಕ್ತವಾದಂಥ ಮನಸ್ಸು ಇದೆ. ಆದರೆ, ಕೆಲವು ಗೈಡ್‌ಲೈನ್ಸ್‌ನ್ನು ಹಾಕುತ್ತೇವೆ. ಯಾರು ಯಾರು 10 ವರ್ಷ 12 ವರ್ಷ ಒಂದೇ ಸ್ಥಾನದಲ್ಲಿ ಕುಳಿತಿರುತ್ತಾರೆ, ಅವರನ್ನು ಇನ್ನೊಬ್ಬರಿಗೆ ಅವಕಾಶ ಮಾಡಿಕೊಡಿ ಎಂದು ಹೇಳಿದರೆ, ಅದರಲ್ಲಿ ತಪ್ಪೇನೂ ಕಾಣುವುದಿಲ್ಲ.

ಶ್ರೀ ಜಗದೀಶ್ ಶೆಟ್ಟರ್: ಸಾಮಾನ್ಯ ಅಧ್ಯಕ್ಷರೆ, ಇವತ್ತು ಮಾನ್ಯ ಮುಖ್ಯಮಂತ್ರಿಗಳು ಈ ಮಹಾನಗರ ಸಭೆಗಳ ಬಗ್ಗೆ ಅದರಲ್ಲಿಯೂ ಬೆಂಗಳೂರಿನ ನಗರ ಸಭೆಯ ಬಗ್ಗೆ ಕಠಿಣ ನಿರ್ಧಾರಗಳನ್ನು ತೆಗೆದುಕೊಳ್ಳುವುದಕ್ಕೆ ಏನು ಧೃಡ ನಿರ್ಧಾರ ಮಾಡಿದ್ದಾರೆ ಅದು ಒಳ್ಳೆಯದು. ಈ ರೀತಿ ತೆಗೆದುಕೊಳ್ಳಬೇಕು. ಇದು ಯಾವರೀತಿ ಇದೆಯೆಂದರೆ, ಹುಬ್ಬಳ್ಳಿ ಧಾರವಾಡ ಮಹಾನಗರ ಸಭೆ ಇರಬಹುದು, ಬೆಳಗಾಂ ಇರಬಹುದು, ಮಂಗಳೂರು ಇರಬಹುದು, ಮೈಸೂರು ಇರಬಹುದು. ಇವತ್ತು ಎಲ್ಲಾ ಕಡೆ ಇದೇ ರೀತಿ ಇದೆ ಪಟ್ಟಭದ್ರ ಹಿತಾಸಕ್ತಿಗಳು 15-20 ವರ್ಷಗಳಿಂದ ಇವತ್ತು ಮಹಾನಗರ ಸಭೆಯಲ್ಲಿ ಇರಬಹುದು ಅಥವಾ ಇನ್ನಿತರ ಇಲಾಖೆಗಳಲ್ಲಿರಬಹುದು. 15-20 ವರ್ಷಗಳಿಂದ ಏನು ಅಲ್ಲಿ ಪಟ್ಟಭದ್ರವಾಗಿ ಕುಳಿತಿದ್ದಾರೆ, ಅವರನ್ನು ಎತ್ತಿ ಹಾಕುವಂಥ ಕೆಲಸ ಆಗಬೇಕಾಗಿದೆ. ಅವರನ್ನು ಎತ್ತಿ ಹಾಕಿದರೆ ಸಾಕು, ಎಷ್ಟೋ ಸುಧಾರಣೆಗಯಾಗುತ್ತದೆ. ಆದ್ದರಿಂದ, ಇದರ ಬಗ್ಗೆ ಕಠಿಣ ನಿರ್ಧಾರಗಳನ್ನು ಮಾನ್ಯ ಮುಖ್ಯಮಂತ್ರಿಗಳು ತೆಗೆದುಕೊಳ್ಳಬೇಕು. ಅದಕ್ಕೆ ನಮ್ಮ ಸಂಪೂರ್ಣವಾದ ಸಹಕಾರ ಇದೆ.

ಶ್ರೀ ಚಂದ್ರಕಾಂತ ಬೆಲ್ಲದ್: ಸನ್ಮಾನ್ಯ ಅಧ್ಯಕ್ಷರೆ, ಬೆಂಗಳೂರು ಮಹಾನಗರ ಒಂದೇ ಸೊರಗಿಲ್ಲ. ಕರ್ನಾಟಕ ರಾಜ್ಯದಲ್ಲಿರುವಂಥ ಎಲ್ಲಾ ಮಹಾನಗರಗಳೂ ಸೊರಗಿವೆ. ಅಲ್ಲಿದ್ದವರು ಬೆಳಗುತ್ತಾ ಇದ್ದಾರೆ. ಆ ದೃಷ್ಟಿಯಿಂದ ಅವೆಲ್ಲಕ್ಕೂ ಕಠಿಣ ಕ್ರಮ ತೆಗೆದುಕೊಂಡು, ಈ ನಗರಗಳು

ಸೂಕ್ತವಾದಂಥ ಬೆಳವಣಿಗೆಯಾಗುವುದಕ್ಕೆ ತಾವು ಕ್ರಮ ತೆಗೆದುಕೊಳ್ಳಬೇಕು. ಅದಕ್ಕೆ ಪೂರ್ಣ ಬೆಂಬಲ ಎಲ್ಲಾ ಜನರದ್ದೂ ಇದೆ. ಆಡಳಿತ ಸುಧಾರಣೆ ದೃಷ್ಟಿಯಿಂದ ಅಥವಾ ಮಹಾನಗರ ಪಾಲಿಕೆಗಳ ಬೆಳವಣಿಗೆ ದೃಷ್ಟಿಯಿಂದ ತಾವು ಸೂಕ್ತವಾದ ಕ್ರಮ ತೆಗೆದುಕೊಳ್ಳಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಎಸ್.ಎಂ.ಕೃಷ್ಣ : ಮಾನ್ಯ ವಿರೋಧ ಪಕ್ಷದವರು ಆಡಿದ ಮಾತಿನಿಂದ ಇವತ್ತು ನನಗೆ ಆನೆ ಬಲ ಬಂದಿದೆ. ಏಕೆಂದರೆ, ನಮ್ಮ ನಿರ್ಧಾರಗಳನ್ನು ನಿರ್ವಹಿಸಲಿಕ್ಕೆ ಮತ್ತು ಮಿಕ್ಕ ನಗರ ಪಾಲಿಕೆಗಳ ವಿಚಾರಗಳನ್ನೂ ಹೇಳಿದ್ದೇನೆ. ಬೆಂಗಳೂರಿಗೆ ಒಂದು ಧೋರಣೆ ಮಿಕ್ಕ ನಗರ ಪಾಲಿಕೆಗಳಿಗೆ ಮತ್ತೊಂದು ಧೋರಣೆ ಸಾಧ್ಯವಾಗುವುದಿಲ್ಲ. ಬೆಂಗಳೂರಿಗೆ ಯಾವ ಧೋರಣೆಗಳು ಮತ್ತು ನಿಲುವನ್ನು ಈ ಸರ್ಕಾರದ ಪರವಾಗಿ ಸಾದರಪಡಿಸುತ್ತಾ ಇದ್ದೇವೆ, ಇದೇ ಧೋರಣೆಗಳು ಮಿಕ್ಕ ನಗರ ಪಾಲಿಕೆಗಳಿಗೂ ಕೂಡ ಅನ್ವಯವಾಗುತ್ತವೆ ಎನ್ನುವ ಮಾತನ್ನು ನಾನು ಹೇಳುತ್ತಾ ಇದ್ದೇನೆ. ಮತ್ತು ಬೆಂಗಳೂರಿಗೆ ಒಂದು ಅಜೆಂಡಾವನ್ನು ಮಾಡುತ್ತಾ ಇದ್ದೇವೆ. It will be known as `Bangalore Agenda'. ಬೆಂಗಳೂರಿನ ಕಾರ್ಯಕ್ಷೇತ್ರ ಎಂದು. ಇದಕ್ಕೆ ನಾವು ಕೆಲವು ಫಂಡಿಂಗ್ ಏಜೆನ್ಸೀಸ್ ಜೊತೆಯಲ್ಲಿ ಮಾತುಕತೆಗಳನ್ನು ನಡೆಸುತ್ತಿದ್ದೇವೆ. ಈ ಮಾತುಕತೆಗಳು ಯಾವರೀತಿ ಮುಂದುವರಿಯುತ್ತವೆ, ಆ ಆಧಾರದ ಮೇಲೆ ನಮ್ಮ ನಿರ್ಧಾರಗಳನ್ನು ಪ್ರಕಟಪಡಿಸುತ್ತೇವೆ. ಬೆಂಗಳೂರು ನಗರಾಭಿವೃದ್ಧಿ ಪ್ರಾಧಿಕಾರ. ಕೆಲವರು ನನಗೂ ಬುದ್ಧಿವಾದ ಹೇಳಿದರು. ನೀವು ಇಷ್ಟು ಇಲಾಖೆಗಳನ್ನಿಟ್ಟುಕೊಂಡಿದ್ದೀರಿ, ಇವು ನಿಮಗೆ ಜಾಸ್ತಿಯಾಗಲಿಲ್ಲವೆ ಎಂದು ಕೇಳಿದರು. ಇವೆಲ್ಲಾ ಆಟಾನಮಸ್ ಬಾಡಿಗಳು. ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ಪೂಜ್ಯ ಮೇಯರ್‌ರವರು ಇರುತ್ತಾರೆ, ಡೆಪ್ಯೂಟಿ ಮೇಯರ್‌ರವರು ಇರುತ್ತಾರೆ. ನೂರು ಜನ ಪುರಪಿತೃಗಳು ಇರುತ್ತಾರೆ. ಆಮೇಲೆ ಅದು ರಾಜ್ಯಾಂಗದಿಂದ ಉದ್ಭವಿಸಿರತಕ್ಕ ಒಂದು ಸಂಸ್ಥೆ. ಈ ಸಂಸ್ಥೆಯ ಜೊತೆಯಲ್ಲಿ ನಾವು ಹೊಂದಾಣಿಕೆ ಮಾಡಿಕೊಂಡು ಕೆಲಸ ಮಾಡಬೇಕಾಗುತ್ತದೆ. ಬೆಂಗಳೂರು ನಗರಾಭಿವೃದ್ಧಿ ಪ್ರಾಧಿಕಾರ-ಇದೊಂದು ಡೆವಲಪ್‌ಮೆಂಟಲ್ ಏಜೆನ್ಸಿ. ಇದರ ಬಗ್ಗೆಯೂ ಕೂಡ ಹತ್ತಾರು ಮಾತುಗಳು ಕೇಳಿಬರುತ್ತಿವೆ. ಇದನ್ನೂ ಕೂಡ ನಾವು ಯೋಗ್ಯವಾದಂಥ ರೀತಿಯಲ್ಲಿ ಸುಧಾರಣೆ ಮಾಡಬೇಕಾಗಿದೆ. ಅದಕ್ಕೆ ಕೂಡ ನಾವು ಕಾರ್ಯಕ್ರಮಗಳನ್ನು ಹಾಕಿಕೊಳ್ಳುತ್ತಾ ಇದ್ದೇವೆ. ಒಂದು ಅಂಕಿಅಂಶವನ್ನು ಸದನದ ಜೊತೆಗೆ ಹಂಚಿಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತೇನೆ. ಕಳೆದ 10 ವರ್ಷಗಳಲ್ಲಿ ಸುಮಾರು 4,000 ನಿವೇಶನಗಳನ್ನು ಹಂಚಿದ್ದಾರೆಂದು ನನಗೆ ಸಿಕ್ಕಿರತಕ್ಕ ಮಾಹಿತಿ. ಆದರೆ ನಾನು ಅವರಿಗೆ ನಿನ್ನೆ ಒಂದು ನಿರ್ದೇಶನ ಕೊಟ್ಟಿದ್ದೇನೆ. ಮುಂದಿನ ಶತಮಾನದ ಜೂನ್ ವೇಳೆಗೆ ಸುಮಾರು 10 ಸಾವಿರ ನಿವೇಶನಗಳನ್ನು ಕೊಡಬೇಕೆಂಬ ನಿರ್ದೇಶನ ಕೊಟ್ಟಿದ್ದೇನೆ; ಮತ್ತು ದುರ್ಬಲವರ್ಗದವರಿಗೆ ಬೆಂಗಳೂರು ಮಹಾನಗರದಲ್ಲಿ ನಿವೇಶನ ಹಂಚುವ ಪ್ರಮಾಣ ಇದುವರೆವಿಗೆ ಶೇಕಡ 30 ಇತ್ತು. ಕಳೆದ 10 ವರ್ಷಗಳಲ್ಲಿ 4 ಸಾವಿರ ನಿವೇಶನಗಳನ್ನು ಹಂಚಿರುವಾಗ ಶೇಕಡ 30 ರಷ್ಟು ಮಾತ್ರ ದುರ್ಬಲ ವರ್ಗದವರಿಗೆ ಹೋಗಿದೆ. ನಿನ್ನೆಯಿಂದ ಈ ದುರ್ಬಲ ವರ್ಗದವರಿಗೆ ಹೋಗತಕ್ಕ ಪ್ರಮಾಣವನ್ನು ಶೇಕಡ 50ಕ್ಕೆ ಹೆಚ್ಚಿಸುತ್ತಿದ್ದೇನೆ. ಆದ್ದರಿಂದ ಮುಂದೆ ಕೊಡತಕ್ಕ 10 ಸಾವಿರ ನಿವೇಶನಗಳಲ್ಲಿ 5 ಸಾವಿರ ನಿವೇಶನಗಳು ದುರ್ಬಲವರ್ಗದವರಿಗೆ ಸಿಗುತ್ತವೆ ಎನ್ನುವುದು ನಾವು ತರತಕ್ಕ ಒಂದು ಸುಧಾರಣೆಯಾಗಿದೆ. ಮತ್ತು ಇನ್ಮೇಲೆ ಬೆಂಗಳೂರು

ನಗರದಲ್ಲಿ ಸಾಮೂಹಿಕ ವಸತಿ ಯೋಜನೆಗಳಿಗೆ ಹೆಚ್ಚು ಒತ್ತು ಕೊಡಬೇಕಾಗುತ್ತದೆ. ನಾವು '30-40', '40-60' ಆಳತೆಯ ನಿವೇಶನಗಳನ್ನು ಹೆಚ್ಚು ಹಂಚುವುದಕ್ಕೆ ಪ್ರಾರಂಭ ಮಾಡಿದರೆ ಎಲ್ಲಿಗೆ ಮುಟ್ಟುತ್ತೇವೆಯೋ ಗೊತ್ತಿಲ್ಲ. ಆದ್ದರಿಂದ, ನಾವು ಮೇಲೆ ಹೋಗಬೇಕಾಗಿರತಕ್ಕಂಥಾದ್ದು ಅನಿವಾರ್ಯವಾಗುತ್ತದೆ. ಅದಕ್ಕಾಗಿ ನಾವು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಬಗ್ಗೆಯೂ ಗಮನ ಕೊಡುತ್ತೇವೆ. ಇನ್ನು ವರ್ತುಲ ರಸ್ತೆಗಳನ್ನು 2 ಸಾವಿರ ಇಸವಿ ವೇಳೆಗೆ ಪೂರ್ಣಗೊಳಿಸಬೇಕು ಎಂದು ತೀರ್ಮಾನ ಮಾಡಿದ್ದೇವೆ. ಲಿಟಿಗೇಷನ್‌ನಲ್ಲಿರತಕ್ಕ ಕೆಲವು ಪ್ಯಾಚಸ್‌ಗಳನ್ನು ಬಿಟ್ಟರೆ ಮಿಕ್ಕ ವರ್ತುಲ ರಸ್ತೆಗಳು 2 ಸಾವಿರ ಇಸವಿ ಜೂನ್ ಹೊತ್ತಿಗೆ ಕಮೀಷನ್ ಮಾಡಬೇಕೆಂದು ಇದರ ಬಗ್ಗೆ ಮಾನ್ಯ ಸೋಮಣ್ಣನವರು ಮತ್ತು ಇತರರು ಮಾತನಾಡಿದ್ದಾರೆ. ಈ ಬೆಂಗಳೂರಿನ ಅಭಿವೃದ್ಧಿಯ ವಿಚಾರದಲ್ಲಿ ತಾವು ಏನಾದರೂ ಸಲಹೆಗಳನ್ನು ಕೊಡಬೇಕೆಂದಿದ್ದರೆ, ಅದನ್ನು ನಾನು ಸ್ವಾಗತಿಸುತ್ತೇನೆ. ದಯಮಾಡಿ, ಮಾನ್ಯ ಸದಸ್ಯರುಗಳು ನಾನು ಹೇಳಿರತಕ್ಕ ಹಲವಾರು ವಿಚಾರಗಳಲ್ಲಿ ನಿಮ್ಮದ್ದೇ ಆದಂಥ ಅನಿಸಿಕೆಗಳು ಇದ್ದರೆ, ಅವುಗಳನ್ನು ನನ್ನ ಗಮನಕ್ಕೆ ತರಬೇಕೆಂದು ಹೇಳುತ್ತೇನೆ. ಈಗಾಗಲೇ ಒಂದು ವಾಟರ್ ಸಪ್ಲೈ ಸ್ಯಾನಿಟೇಷನ್ ಟೆಕ್ನಾಲಜಿಯನ್ನು ಮಾಡಿದ್ದೇವೆ. ಹಾಗೆಯೇ ವಿದ್ಯಾಕ್ಷೇತ್ರದಲ್ಲಿಯೂ ಕೂಡ ಒಂದು ಟಾಸ್ಕ್‌ಫೋರ್ಸ್ ರಚನೆ ಮಾಡುತ್ತಾ ಇದ್ದೇವೆ. ಈ ಟಾಸ್ಕ್ ಫೋರ್ಸಿನ ನೇತೃತ್ವವನ್ನು ಶ್ರೀಮಾನ್ ಗಿರೀಶ್ ಕಾರ್ನಾಡ್‌ರವರು ವಹಿಸಿಕೊಳ್ಳುವಂತೆ ಕೇಳಬೇಕೆಂದು ತೀರ್ಮಾನ ಮಾಡಿದ್ದೇವೆ. ಇವತ್ತು ಅವರಿಗೆ ಕಾಗದವನ್ನು ಬರೆಯುತ್ತಿದ್ದೇವೆ. ಹಾಗೆಯೇ ಇನ್‌ಫೋಸಿಸ್ ಮ್ಯಾನೇಜಿಂಗ್ ಡೈರಕ್ಟರಾದಂಥ ಶ್ರೀಮಾನ್ ನಂದನ್ ನೀಲ್ಕೇಣಿಯವರು ಮೆಟ್ರೋಪಾಲಿಟನ್ ಬೆಂಗಳೂರು ವಿಚಾರದಲ್ಲಿ ಟಾಸ್ಕ್ ಫೋರ್ಸಿನ ನೇತೃತ್ವವನ್ನು ವಹಿಸಬೇಕೆಂದು ಕೇಳಿಕೊಳ್ಳುತ್ತಿದ್ದೇವೆ. ಹಾಗೆಯೇ ಹೆಲ್ತ್ ಸರ್ವೀಸಸ್‌ಗೆ, ರೂರಲ್ ಮತ್ತು ಅರ್ಬನ್ ಹೆಲ್ತ್ ಸರ್ವೀಸಸ್‌ಗೆ ಡಾ|| ಸುದರ್ಶನ್ ಕರುಣಾ ಟ್ರಸ್ಟ್ B.R.Hills ಅವರ ನೇತೃತ್ವದಲ್ಲಿ ಒಂದು ಟಾಸ್ಕ್ ಫೋರ್ಸನ್ನು ರಚನೆ ಮಾಡಬೇಕೆಂದು ನಿರ್ಧಾರ ಮಾಡಿದ್ದೇವೆ. ಈ ಟಾಸ್ಕ್ ಫೋರ್ಸಿನ ಅಪ್ರೋಚ್ ಅಥವಾ ಮಿಷನ್ಸ್ ಅಪ್ರೋಚ್ ಏನೆಂದರೆ, ನಾವು ಕೇವಲ ಸರ್ಕಾರಿ ಪರಿಣತಿಯ ಮೇಲೆ,- whatever expertise we are getting is only from Government senior officers. ಆದರೆ ಇವೆರಡಕ್ಕೂ ನಾವು ಪ್ರೈವೇಟ್ ಎಂಟರ್‌ಪ್ರೈಸಸ್‌ನವರು ಒಳ್ಳೆಯ ಕೆಲಸವನ್ನು ಮಾಡಿ ತಮ್ಮದ್ದೇ ಆದ ದೊಡ್ಡ ಹೆಸರನ್ನು ಗಳಿಸಿರತಕ್ಕಂಥವರು, ಅವರ ಜೊತೆಯಲ್ಲಿ ಇಂಟರ್‍ಯಾಕ್ಷನ್ ಮಾಡುವುದರಿಂದ, ಇನ್ನೂ ಒಳ್ಳೆಯ ಯೋಚನೆಗಳು ಸರ್ಕಾರಕ್ಕೆ ಸಿಗಬಹುದು;

ಒಳ್ಳೆಯ ಕಲ್ಪನೆಗಳು ಸರ್ಕಾರಕ್ಕೆ ಸಿಗಬಹುದು, ಆ ಕಲ್ಪನೆಗಳಿಂದ ನಾವು ಜನರ ಹಿತವನ್ನು ಸುಧಾರಣೆ ಮಾಡುವುದಕ್ಕೆ ಸಾಧ್ಯವಾಗಬಹುದು ಎನ್ನುವ ದೃಷ್ಟಿಯಿಂದ ಈ ಟಾಸ್ಕ್-ಫೋರ್ಸ್‌ಗಳಲ್ಲಿ ಪ್ರೈವೇಟ್ ಮೆರಿಟೋರಿಯಸ್, ಇಂಡಿವಿಜುಯಲ್ಸ್ ತಮ್ಮದ್ದೇ ಆದಂಥ ಛಾಪನ್ನು ಸಾರ್ವಜನಿಕ ಜೀವನದಲ್ಲಿ ಮತ್ತು ತಮ್ಮ ಕ್ಷೇತ್ರಗಳಲ್ಲಿ ಮಾಡಿರುವುದನ್ನು ಗಮನಿಸಿ, ನಾವು ಅವರಿಗೆ ಅವಕಾಶವನ್ನು ಕಲ್ಪಿಸಿಕೊಡಬೇಕೆಂದು ತೀರ್ಮಾನಿಸಿದ್ದೇವೆ.

ಶ್ರೀ ಎಸ್.ಸುರೇಶ್ ಕುಮಾರ್: ತಾವು ಮಾನ್ಯ ಗಿರೀಶ್ ಕಾರ್ನಾಡ್‌ರವರನ್ನು ಎಜುಕೇಷನ್ ಟಾಸ್ಕ್-ಫೋರ್ಸ್‌ಗೆ ಮಾಡಿರುವುದಕ್ಕೂ, ಗಿರೀಶ್ ಕಾರ್ನಾಡ್‌ರವರು ತೊಗಲಕ್ ಡ್ರಾಮಾವನ್ನು ನಿರ್ದೇಶನ ಮಾಡಿರುವುದಕ್ಕೂ ಏನಾದರೂ ಸಂಬಂಧ ಇದೆಯೇ? ಇದು ಶಿಕ್ಷಣ

ಕ್ಷೇತ್ರ. ಇದೇನಾದರೂ ತೊಗಲಕ್ ದರ್ಬಾರು ಆಗಿದೆ ಎಂದು ಅನಿಸುತ್ತಾ ಇದೆಯೇ?

ಶ್ರೀ ಎಸ್.ಎಂ.ಕೃಷ್ಣ: ಹುಚ್ಚು ಮನಸ್ಸಿನ ಹತ್ತುಮುಖಗಳು, ಅದು ತಮಗೆ ಏಕೆ ಬಂತೋ ನನಗೆ ಗೊತ್ತಾಗಲಿಲ್ಲ.

ಶ್ರೀ ಎಸ್.ಸುರೇಶ್ ಕುಮಾರ್: ಗಿರೀಶ್ ಕಾರ್ನಾಡ್‌ರವರು ಕಲೆ, ಸಂಸ್ಕೃತಿ ವಿಚಾರದಲ್ಲಿ ಸರಿ....

ಶ್ರೀ ಎಸ್.ಎಂ.ಕೃಷ್ಣ: ಜ್ಞಾನಪೀಠ ಪ್ರಶಸ್ತಿ ಪುರಸ್ಕೃತರಾದವರನ್ನು ನೀವು ಕೇವಲ ನಾಟಕ ಕ್ಷೇತ್ರ ಒಂದಕ್ಕೇ ಸೀಮಿತವಾಗಿಟ್ಟುಕೊಂಡು ನೋಡುತ್ತೀರಾ? ಆ ಕ್ಷೇತ್ರಕ್ಕೇ ಅವರನ್ನು ಸೀಮಿತವಾಗಿ ನೋಡುತ್ತೀರಾ? ಅವರು ಜ್ಞಾನಪೀಠ ಪ್ರಶಸ್ತಿ ವಿಜೇತರು.

ಅಧ್ಯಕ್ಷರು: ಸನ್ಮಾನ್ಯ ಮುಖ್ಯಮಂತ್ರಿಯವರಿಗೆ ಅಭಿನಂದನೆಗಳು. ಈಗಾಗಲೇ ನಾನು ಪ್ರಥಮ ಭಾರಿಗೆ ಚುನಾಯಿತರಾದ ಮಾನ್ಯ ಶಾಸಕರುಗಳ ಒಂದು ಸಭೆಯನ್ನು ಕರೆದಿದ್ದೇನೆ. ಆ ಸಭೆಯಲ್ಲಿ ಪ್ರತಿಯೊಬ್ಬರು ತಮಗೆ ಒಂದು ಕಂಪ್ಯೂಟರ್ ಸೌಲಭ್ಯವನ್ನು ಕಲ್ಪಿಸಿಕೊಡಬೇಕು ಎಂದು ಕೇಳಿಕೊಂಡಿದ್ದರು. ಆ ಕುರಿತು ತಮ್ಮ ಭಾಷಣದಲ್ಲಿ ತಾವಾಗಿಯೇ ಹೇಳಿರುವುದರಿಂದ ಎಲ್ಲಾ ಶಾಸಕರ ಪರವಾಗಿ ಮುಖ್ಯಮಂತ್ರಿಯವರಿಗೆ ನಾನು ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಶಾಸಕರುಗಳಿಗೆ ಕಂಪ್ಯೂಟರ್ ಕೊಟ್ಟ ಮಾತ್ರಕ್ಕೆ ಆಗುವುದಿಲ್ಲ. ಅವರು ಆ ಕುರಿತು ತರಬೇತಿಯನ್ನು ಪಡೆಯಬೇಕಾಗುತ್ತದೆ. ಅದರ ಬಗ್ಗೆ ಶಾಸಕರುಗಳು ದೂರ ಹೋಗಿ ಕಲಿಯ ಬೇಕಾಗಿಲ್ಲ. ಶಾಸಕರ ಭವನದಲ್ಲಿಯೇ ಅಲ್ಪಾವಧಿ ಕಂಪ್ಯೂಟರ್ ತರಬೇತಿಯನ್ನು ಕೊಡಿಸಲು ಏರ್ಪಾಡು ಮಾಡುತ್ತೇವೆ. ಇದರಿಂದ ಶಾಸಕರುಗಳು ತಮ್ಮ ಕ್ಷೇತ್ರದಲ್ಲಿ ಅದನ್ನು ಅಳವಡಿಸಿಕೊಂಡಾಗ ಸ್ವತಃ ಅದನ್ನು ಉಪಯೋಗಿಸುವ ಶಕ್ತಿ ಬರಬೇಕು. ಆದ್ದರಿಂದ ನೀವು ಇಲ್ಲಿಗೆ ಬಂದಾಗ, ನಿಮಗೆ ಯಾವಾಗ ಬಿಡುವು ದೊರೆಯುತ್ತದೋ ಆಗ, ನಿಮ್ಮ ಅನುಕೂಲಕ್ಕೆ ಸರಿಹೊಂದುವಂತೆ ಶಾಸಕರ ಭವನದಲ್ಲಿ ತರಬೇತಿ ನೀಡುವ ಕಾರ್ಯಕ್ರಮವನ್ನು ನಾವು ಏರ್ಪಾಡು ಮಾಡುತ್ತೇವೆ ಎಂದು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಅಂತೆಯೇ ಇನ್ನೊಂದು ಪ್ರಾಮುಖ್ಯವಾದ ವಿಚಾರವು ಸಭೆಯಲ್ಲೆ ಪ್ರಸ್ತಾಪ ಆಯಿತು. ನಮ್ಮ ಶಾಸಕರುಗಳಿಗೆ ಈಗ ಅಷ್ಟು ಅಧಿಕಾರ ಇಲ್ಲ. ಆದುದರಿಂದ ಮುಂದಿನ ಬಜೆಟ್‌ನಲ್ಲಾದರೂ ಶಾಸಕರುಗಳ ಕ್ಷೇತ್ರಕ್ಕೆ ಇಷ್ಟು ಮೊತ್ತದ ಹಣ ಎಂದು ನಿಗದಿ ಮಾಡಿದರೆ ಅವರಿಗೆ ಅನುಕೂಲವಾಗುತ್ತದೆ. ನಾವು ಒಂದು ಕೋಟಿ, ಎರಡು ಕೋಟಿ ಕೊಡಿ ಎಂದು ಒಮ್ಮೆಗೆ ಒತ್ತಾಯಿಸುವುದಿಲ್ಲ. ಕನಿಷ್ಟ 50 ಲಕ್ಷ ರೂಪಾಯಿಗಳಿಂದ ಪ್ರಾರಂಭ ಮಾಡಿ ಶಾಸಕರು ಯಾವ ಕೆಲಸವನ್ನು ಸೂಚಿಸುತ್ತಾರೋ ಅದರ ಬಗ್ಗೆ ಹೆಚ್ಚು ಒತ್ತು ಕೊಟ್ಟು ಹಣದ ಮೊತ್ತವನ್ನು ನಿಗದಿ ಮಾಡಬೇಕೆಂದು ಸೂಚಿಸುತ್ತೇನೆ. ಮೊತ್ತ ಇಷ್ಟೇ ಎಂದು ನಮಗೆ ಹೇಳುವುದಕ್ಕೆ ಆಗುವುದಿಲ್ಲ. ಈ ಕುರಿತು ಸರಕಾರದವರು ಗಮನಿಸಬೇಕೆಂದು ಎಲ್ಲಾ ಶಾಸಕರುಗಳ ಪರವಾಗಿ ತಮ್ಮನ್ನು ನಾನು ಕೇಳಿಕೊಳ್ಳುತ್ತೇನೆ.

ಶ್ರೀ ಪಿ.ಜಿ.ಆರ್.ಸಿಂಧ್ಯಾ : ಮಾನ್ಯ ಅಧ್ಯಕ್ಷರೇ, ಮಾನ್ಯ ರಾಜ್ಯಪಾಲರ ಭಾಷಣದ ವಂದನಾ ನಿರ್ಣಯದ ಮೇಲೆ ಎಲ್ಲ ಮಾನ್ಯ ಸದಸ್ಯರಿಗೂ ಮಾತನಾಡಲು ಆಗಲಿಲ್ಲ. ಕ್ಲಾರಿಫಿಕೇಶನ್‌ಗಳಿಗೆ ತಾವುಗಳು ಎಲ್ಲಾ ಸೇರಿ ಒಂದೇ ಸಾರಿ ಉತ್ತರ ಕೊಡುತ್ತೀರೋ ಅಥವಾ

ಬೇರೆ ಬೇರೆಯಾಗಿ ಕೊಡುತ್ತೀರೋ ಎಂದು ಕೇಳಿಕೊಳ್ಳುತ್ತೇನೆ.

ಶ್ರೀ ಜಗದೀಶ್ ಶೆಟ್ಟರ್ (ವಿರೋಧ ಪಕ್ಷದ ನಾಯಕರು): ಸನ್ಮಾನ್ಯ ಅಧ್ಯಕ್ಷರೇ, ಸನ್ಮಾನ್ಯ ಮುಖ್ಯಮಂತ್ರಿಗಳು ಉತ್ತರ ನೀಡುವಂಥ ಸಂದರ್ಭದಲ್ಲಿ ಹಲವಾರು ನಿರೀಕ್ಷೆಗಳನ್ನು ನಾವು ಇಟ್ಟುಕೊಂಡಿದ್ದೆವು. ಆದರೆ ಕಳೆದ ಐದು ವರ್ಷಗಳ ಹಿಂದೆ ಪರಂಪರೆ ಪ್ರಕಾರ ಯಾವ ರೀತಿಯಲ್ಲಿ ಅದೇ ವಿಷಯಗಳು ಪುನರಾವರ್ತನೆಗೊಳ್ಳುತ್ತಿದ್ದವೋ ಅದೇ ರೀತಿಯಲ್ಲಿ ಈ ಭಾಷಣವೂ ಇದೆ. ರಾಜ್ಯಪಾಲರ ಭಾಷಣಕ್ಕೆ ವಂದನಾ ನಿರ್ಣಯದ ಮೇಲಿನ ಚರ್ಚೆಗೆ ಮಾನ್ಯ ಮುಖ್ಯಮುಂತ್ರಿಗಳು ನೀಡಿದ ಉತ್ತರವೂ ಕೂಡ ಅದೇ ರೀತಿಯಲ್ಲಿ ಒಂದೇ ಧಾಟಿಯಲ್ಲಿತ್ತು ಎಂಬ ಭಾವನೆಯನ್ನು ನಾನು ವ್ಯಕ್ತ ಮಾಡಬಯಸುತ್ತೇನೆ. ಮಾನ್ಯ ಮುಖ್ಯಮಂತ್ರಿಗಳು ರಾಜ್ಯದ ಜನತೆಗೆ ಒಂದು ಹೊಸ ರೀತಿಯ ಆಡಳಿತವನ್ನು ಒದಗಿಸಿಕೊಡುತ್ತೇನೆ- ಎಂದು ಹೇಳಿದುದನ್ನು ಸ್ವಾಗತಿಸುತ್ತಾ ಜನಸಾಮಾನ್ಯರ ಬಗ್ಗೆ ಅವರು ವ್ಯಕ್ತಪಡಿಸಿದ ಕಳಕಳಿಯ ಬಗ್ಗೆ ನನ್ನ ಸಂತೋಷವನ್ನು ವ್ಯಕ್ತಪಡಿಸುತ್ತೇನೆ. ಆದರೆ ಅವರ ಜನಪರವಾದ ಕಳಕಳಿಗೆ ಪೂರಕವಾಗಿ ರಾಜ್ಯದ ಜನತೆಗೆ ಏನಾದರೂ ಹೊಸತನ್ನು ಕೊಡುತ್ತಾರೆಂದು ನಾನು ನಿರೀಕ್ಷೆ ಮಾಡಿದ್ದೆ. ಅಂಥ ಯಾವ ಮಾತುಗಳು ಬರಲಿಲ್ಲವಲ್ಲ ಎಂಬ ಬೇಸರವೂ ನನಗೆ ಇದೆ. ಕೆಲವೊಂದು ಪ್ರಾಮುಖ್ಯವಾದ ವಿಷಯಗಳ ಬಗ್ಗೆ ವಿರೋಧಪಕ್ಷದ ನಾಯಕನಾಗಿ ನಾನಾಗಲೀ, ಇನ್ನಿತರ ಹಿರಿಯ ಹಾಗೂ ಅನುಭವಿ ಸದಸ್ಯರುಗಳು ಪ್ರಸ್ತಾಪ ಮಾಡಿದ ವಿಚಾರಗಳ ಬಗ್ಗೆಯಾಗಲೀ, ಸರಕಾರದ ವತಿಯಿಂದ ಸ್ಪಷ್ಟವಾದ ಉತ್ತರಗಳು ಬಂದಿಲ್ಲ ಎಂಬ ವಿಚಾರವನ್ನು ಮತ್ತು ಯಾವುದೇ ಆ ಕುರಿತ ನೀತಿಗಳನ್ನು ಪ್ರಕಟಪಡಿಸಿಲ್ಲ ಎಂಬುದನ್ನು ಹೇಳಬಯಸುತ್ತೇನೆ. ಪ್ರಮುಖವಾಗಿ ಮಾನ್ಯ ಮುಖ್ಯಮಂತ್ರಿಗಳು ಗ್ರಾಮೀಣಾಭಿವೃದ್ಧಿ ಬಗ್ಗೆ ಮತ್ತು ರೈತರ ಬಗ್ಗೆ ತಮ್ಮ ಕಳಕಳಿಯನ್ನು ವ್ಯಕ್ತಪಡಿಸಿದ್ದಾರೆ. ನಾವುಗಳು ಪ್ರಸ್ತಾಪ ಮಾಡಿದಂತೆ ಅತಿವೃಷ್ಟಿ, ಅನಾವೃಷ್ಟಿಗಳಾದಂಥ ಸಂದರ್ಭದಲ್ಲಿ, ರೈತರು ಬೆಳೆದ ಬೆಳೆಗಳಿಗೆ ಸೂಕ್ತ ಬೆಲೆ ಬಾರದಿದ್ದ ಸಂದರ್ಭಗಳಲ್ಲಿ ಸರಕಾರದವರು ಪರಿಹಾರ ರೂಪದಲ್ಲಿ ಕೊಡುವ ಧನಸಹಾಯದ ಬಗ್ಗೆ ಸರಕಾರದ ನೀತಿಯನ್ನು ಕೇಳಿದ್ದೆವು. ಮಾನ್ಯ ಮುಖ್ಯಮಂತ್ರಿಯವರು ಮೊನ್ನೆ ಧಾರವಾಡ ಜಿಲ್ಲೆಗೆ ಬಂದಾಗ ಒಂದು ಹೇಳಿಕೆಯನ್ನು ಕೊಟ್ಟಿದ್ದರು. ಸಚಿವ ಸಂಪುಟದ ಮೂರು ಸದಸ್ಯರ ಒಂದು ಸಮಿತಿಯನ್ನು ಮಾಡುತ್ತೇವೆ. ಪರಿಹಾರಧನವನ್ನು ಯಾವರೀತಿಯಲ್ಲಿ ಕೊಡಬೇಕೆಂಬ ಬಗ್ಗೆ, ಪರಿಹಾರ ಹಂಚಿಕೆಯು ಯಾವ ರೀತಿಯಲ್ಲಿ ಇರಬೇಕು, ಅದಕ್ಕೆ ಅನುಸರಿಸಬೇಕಾದ ಅಳತೆಗೋಲು ಏನು ಎಂಬ ಬಗ್ಗೆ ಸಮಿತಿಯು ನಿರ್ಣಯ ಮಾಡುತ್ತದೆ ಎಂದು ಹೇಳಿದ್ದರು. ಹಿಂದೆ ಕೂಡ ಒಂದು ಜಂಟಿ ಸದನ ಸಲಹಾ ಸಮಿತಿಯನ್ನು ನೇಮಿಸಲಾಗಿತ್ತು. ರೈತರುಗಳು ಆತ್ಮಹತ್ಯೆ ಮಾಡಿಕೊಂಡಿದ್ದ ಸಂದರ್ಭದಲ್ಲಿ ನೇಮಕವಾಗಿದ್ದ ಸಮಿತಿಯು ತನ್ನ ವರದಿಯನ್ನು ಸರಕಾರಕ್ಕೆ ಕೊಟ್ಟಿತ್ತು. ಆ ವರದಿಯನ್ನು ಅಭ್ಯಾಸಿಸಿದಾಗ, ಅದರಲ್ಲಿರುವ ವಿಷಯಗಳನ್ನು ಅನುಷ್ಠಾನಗೊಳಿಸಿದ್ದಲ್ಲಿ ರೈತರಿಗೆ ಸಾಕಷ್ಟು ಅನುಕೂಲಗಳು ಒದಗುತ್ತಾ ಇದ್ದುವು ಎಂದು ತಿಳಿದು ಬರುತ್ತದೆ. ರೈತರುಗಳ ಬೆಳೆ ನಾಶವಾದಂಥ ಸಂದರ್ಭಗಳಲ್ಲಿ, ಅನಾವೃಷ್ಟಿಯಾದಂಥ ಸಂದರ್ಭಗಳಲ್ಲಿ ಅವರಿಗೆ ಪರಿಹಾರಧನವನ್ನು ಒದಗಿಸಿಕೊಡಲು ಒಂದು ಅಳತೆಗೋಲು ಇರಬೇಕಾಗುತ್ತದೆ. ಆ ಕುರಿತು ಸರಕಾರದ ಸ್ಪಷ್ಟನೀತಿ ಏನೆಂಬುದನ್ನು ಮಾನ್ಯ ಮುಖ್ಯಮಂತ್ರಿಗಳು ಹೇಳುತ್ತಾರೆಂದು ಭಾವಿಸಿದ್ದೆನು...

(ಮಾನ್ಯ ಸದಸ್ಯರು ತಮ್ಮ ಸ್ಥಾನ ಬಿಟ್ಟು ಹೋಗುತ್ತಿದ್ದುದನ್ನು ಗಮನಿಸಲಾಯಿತು)

ಅಧ್ಯಕ್ಷರು: ಮಾನ್ಯ ಸದಸ್ಯರುಗಳು ತಮ್ಮ ಸ್ಥಾನದಲ್ಲಿ ಕುಳಿತುಕೊಳ್ಳಬೇಕು. ಪಕ್ಷದ ಸಭೆಯ ನಾಯಕರು ಮಾತನಾಡುವಾಗ ಯಾವರೀತಿಯಲ್ಲಿ ಗೌರವಕೊಟ್ಟು ಆಸೀನರಾಗಿರುತ್ತೀರೋ, ಅದೇ ರೀತಿಯಲ್ಲಿ ವಿರೋಧಪಕ್ಷದ ನಾಯಕರು ಮಾತನಾಡುವಾಗ ಅಷ್ಟೇ ಗೌರವವನ್ನು ಕೊಡಬೇಕಾಗುತ್ತದೆ. ಅರ್ಧ ಗಂಟೆಯ ಕಾಲ ತಾವುಗಳು ಎಲ್ಲರೂ ದಯವಿಟ್ಟು ತಮ್ಮ ತಮ್ಮ ಸ್ಥಾನದಲ್ಲಿ ಆಸೀನರಾಗಿರಬೇಕು.

ಶ್ರೀ ಜಗದೀಶ್ ಶೆಟ್ಟರ್: ಗ್ರಾಮೀಣಾಭಿವೃದ್ಧಿ ಮತ್ತು ರೈತರ ಬಗ್ಗೆ ಕಳಕಳಿ ವ್ಯಕ್ತಪಡಿಸಿದ ಮಾನ್ಯ ಮುಖ್ಯಮಂತ್ರಿಯವರು ಪರಿಹಾರದ ವಿಚಾರದಲ್ಲಿ ತಮ್ಮ ಸ್ಪಷ್ಟವಾದ ನೀತಿಯ ಕುರಿತಾಗಿ ಹೇಳಿಲ್ಲ ಎಂಬ ವಿಚಾರವನ್ನು ತಮ್ಮ ಗಮನಕ್ಕೆ ತರಬಯಸುತ್ತೇನೆ. ಸನ್ಮಾನ್ಯ ಮುಖ್ಯಮಂತ್ರಿಯವರು ಈ ಬಗ್ಗೆ ಒಂದು ಸ್ಪಷ್ಟೀಕರಣವನ್ನು ನೀಡಬೇಕೆಂದು ಕೇಳಿಕೊಳ್ಳುತ್ತೇನೆ. ಸನ್ಮಾನ್ಯ ಸಭಾಧ್ಯಕ್ಷರು ಹೊಸ ಸದಸ್ಯರುಗಳನ್ನು ಪರಿಚಯ ಮಾಡಿಕೊಡುವ ಸಂದರ್ಭದಲ್ಲಿ ಅವರ ಭಾವನೆಗಳನ್ನು ಅರ್ಥಮಾಡಿಕೊಂಡಿದ್ದೀರಿ. ಆ ಭಾವನೆಗಳನ್ನು ತಾವುಗಳು ಸಭೆಯ ಮೂಲಕ ಮಾನ್ಯ ಮುಖ್ಯಮಂತ್ರಿಗಳಿಗೆ ವ್ಯಕ್ತಪಡಿಸಿದ್ದೀರಿ. ಅದಕ್ಕಾಗಿ ನಾವು ತಮ್ಮನ್ನು ಅಭಿನಂದಿಸುತ್ತೇವೆ. ಮಾನ್ಯ ರಾಜ್ಯಪಾಲರ ಭಾಷಣದ ಮೇಲೆ ನಾನು ಪ್ರಸ್ತಾಪ ಮಾಡುವಂಥ ಸಂದರ್ಭದಲ್ಲಿ ಶಾಸಕರುಗಳಿಗೆ ಅಭಿವೃದ್ಧಿ ಕಾರ್ಯಗಳಿಗಾಗಿ ಅನುದಾನ ಕೊಡುವ ವಿಚಾರವನ್ನು ಪ್ರಸ್ತಾಪಿಸಿದ್ದೆನು. ಲೋಕಸಭಾ ಸದಸ್ಯರಿಗೆ ಎರಡು ಕೋಟಿ ರೂಪಾಯಿಗಳಷ್ಟು ಅನುದಾನವನ್ನು ಕೇಂದ್ರದವರು ಕೊಡುತ್ತಾರೆ, ಅದೇ ರೀತಿಯಲ್ಲಿ ನಮ್ಮ ಶಾಸಕರಿಗೆ ಒಂದು ಕೋಟಿ ರೂಪಾಯಿಗಳನ್ನಾದರೂ ಅಭಿವೃದ್ಧಿ ಕೆಲಸಕಾರ್ಯಗಳಿಗಾಗಿ ಕೊಡಬೇಕೆಂದು ಪ್ರಸ್ತಾಪ ಮಾಡಿದ್ದೆನು. ಮಹಾರಾಷ್ಟ್ರ ರಾಜ್ಯದಲ್ಲಿ ಶಾಸಕರುಗಳಿಗೆ ಅಭಿವೃದ್ಧಿ ಅನುದಾನ ಎಂದು 60ಲಕ್ಷ ರೂಪಾಯಿಗಳನ್ನು ಕೊಡುತ್ತಿದ್ದಾರೆ. ನಮ್ಮಲ್ಲಿಯೂ ಕನಿಷ್ಠ 50ಲಕ್ಷ ರೂಪಾಯಿಗಳ ಅನುದಾನವನ್ನಾದರೂ ಕೊಡುವಂಥ ಯೋಜನೆಯನ್ನು ಮಾನ್ಯ ಮುಖ್ಯಮಂತ್ರಿಯವರು ಜಾರಿಗೆ ತರಬೇಕೆಂದು ತಮ್ಮ ಮೂಲಕ ಕೇಳಿಕೊಳ್ಳುತ್ತೇನೆ. ಆ ಬಗ್ಗೆ ಅವರು ಇವೊತ್ತು ಘೋಷಣೆ ಮಾಡುತ್ತಾರೆ ಎಂಬ ನಂಬಿಕೆಯನ್ನು ನಾನು ಹೊಂದಿದ್ದೆನು. ಆದರೆ ಅಂಥ ಘೋಷಣೆಯನ್ನು ಅವರು ಮಾಡಲಿಲ್ಲ. ಅದರ ಬಗ್ಗೆ ಮಾನ್ಯ ಮುಖ್ಯಮಂತ್ರಿಯವರು ಬೆಳಕನ್ನು ಚೆಲ್ಲಬೇಕೆಂದು ಕೇಳಿಕೊಳ್ಳುತ್ತೇನೆ. ಪ್ರಾದೇಶಿಕ ತಾರತಮ್ಯದ ಬಗ್ಗೆ ಮಾನ್ಯ ನಂಜಯ್ಯನಮಠ್‌ರವರು ಸಾಕಷ್ಟು ಹೇಳಿದ್ದಾರೆ. ಮಾನ್ಯ ಮುಖ್ಯಮಂತ್ರಿಗಳು ತಮ್ಮ ಉತ್ತರದಲ್ಲಿ ಆ ಬಗ್ಗೆ ಒಂದು ಶಬ್ಧವನ್ನೂ ಕೂಡ ಹೇಳಲಿಲ್ಲ. ಹುಬ್ಬಳ್ಳಿಯಲ್ಲಿ ಉತ್ತರ ಕರ್ನಾಟಕ ಭಾಗಕ್ಕೆ ಹೈಕೋರ್ಟ್ ಪೀಠವು ಸ್ಥಾಪನೆಯಾಗಬೇಕಾಗಿತ್ತು. ಅದರ ಬಗ್ಗೆ ಸರಕಾರದ ನಿಲುವು ಏನು? ಎಂಬ ಬಗ್ಗೆಯೂ ಯಾವ ಮಾತನ್ನೂ ಹೇಳಲಿಲ್ಲ. ಇವೊತ್ತು ರಾಜ್ಯದ ಕೆಲವೊಂದು ಕೇಂದ್ರಗಳಲ್ಲಿ ಬೆಂಗಳೂರನ್ನು ಬಿಟ್ಟು ಸೈಬರ್‌ಪಾರ್ಕ್ ಸ್ಥಾಪಿಸುವ ಬಗ್ಗೆ ಪ್ರಸ್ತಾಪವಿದೆ. ಹುಬ್ಬಳ್ಳಿಯಲ್ಲಿ ಸಾಫ್ಟ್‌ವೇರ್ ಟೆಕ್ನಾಲಜಿಪಾರ್ಕ್ ಮಾಡಲು ನಿರ್ಣಯ ಮಾಡಲಾಗಿದೆ. ಹಿಂದಿನ ಸರಕಾರದವರು ಮಾಡಿದ ನಿರ್ಣಯಕ್ಕೆ ಇವರ ಮಂಜೂರಾತಿ ಬಗ್ಗೆ ಯಾವ ವಿಚಾರವನ್ನು ಹೇಳಲಿಲ್ಲ. ಹೈದ್ರಾಬಾದ್ ಕರ್ನಾಟಕ ಅಭಿವೃದ್ಧಿ ಮಂಡಳಿ, ಬಯಲುಸೀಮೆ ಅಭಿವೃದ್ಧಿ ಮಂಡಳಿ, ಮುಂತಾದವುಗಳಿಗೆ ಹೆಚ್ಚಿನ ಹಣ ಕೊಡುವಂತಾದ್ದರ ಬಗ್ಗೆ, ಕೊಳಚೆ ಪ್ರದೇಶಗಳ ಸುಧಾರಣೆ ಸಲುವಾಗಿ ಒಂದೊಂದು

ಕ್ಷೇತ್ರಕ್ಕೆ 3-4ಲಕ್ಷ ರೂಪಾಯಿಗಳು ಸಿಗುತ್ತದೆ. ಅದನ್ನು ಕನಿಷ್ಟ 25 ಲಕ್ಷ ರೂಪಾಯಿಗಳಿಗೆ ಏರಿಸಬೇಕು. ಹೀಗೆ ಈ ಎಲ್ಲಾ ಮಂಡಳಿಗೆ ಕೊಡುವ ಹೆಚ್ಚಿನ ಅನುದಾನದ ಬಗ್ಗೆ ಮುಖ್ಯಮಂತ್ರಿಯವರು ಪ್ರಸ್ತಾಪ ಮಾಡುತ್ತಾರೆ ಎಂದು ನಾನು ಅಂದುಕೊಂಡಿದ್ದೆನು. ಆದರೆ ಅವರು ಯಾವ ಪ್ರಸ್ತಾಪವನ್ನೂ ಮಾಡಿಲ್ಲ. ಮಲಪ್ರಭಾ ಮತ್ತು ಮಹದಾಯಿ ನದಿ ನೀರಿನ ಬಗ್ಗೆ ನಮ್ಮ ಮಾನ್ಯ ಸದಸ್ಯರುಗಳು ಕೆಲವರು ತಮ್ಮ ಅನಿಸಿಕೆಗಳನ್ನು ವ್ಯಕ್ತಪಡಿಸಿದ್ದಾರೆ. ಈ ನದಿಗಳನ್ನು ಜೋಡಣೆ ಮಾಡುವುದರಿಂದ ಉತ್ತರ ಕರ್ನಾಟಕದ ರೈತರುಗಳಿಗೆ ಹೆಚ್ಚಿನ ಅನುಕೂಲವಾಗುತ್ತದೆ. ಇಂಥ ನೀರಾವರಿ ಯೋಜನೆಯ ಕುರಿತು ಗೋವಾದ ಮುಖ್ಯಮಂತ್ರಿಯವರನ್ನು ಸಂಪರ್ಕಿಸಿ ಆ ಯೋಜನೆಯನ್ನು ಅನುಷ್ಠಾನಗೊಳಿಸಲು ಕಾರ್ಯಕ್ರಮವನ್ನು ಹಾಕಿಕೊಳ್ಳುವುದು ಆಗಬೇಕಾಗಿದೆ. ಈ ವಿದ್ಯುತ್ ಅದಾಲತ್‌ನ್ನು ಮಾಡುತ್ತೇವೆಂದು ಹೇಳಿದ್ದಾರೆ. ಅದನ್ನು ನಾನು ಸ್ವಾಗತಿಸುತ್ತೇನೆ. ಹಿಂದೆ ಮಾನ್ಯ ಸಿಂಧ್ಯಾರವರು ಸಾರಿಗೆ ಅದಾಲತ್‌ನ್ನು ಮಾಡಿದ್ದರು. ಅದು ಸ್ತುತ್ಯ ಕಾರ್ಯಕ್ರಮ. ಅದನ್ನು ಮುಂದುವರಿಸಬೇಕು. ಏಕೆಂದರೆ ನಮ್ಮ ಭಾಗದಲ್ಲಿ ಕೇವಲ ಒಂದು ಸಾರಿ ಮಾತ್ರ ಆಯಿತು, ಅದು ಮುಂದೆ ಆಗಲಿಲ್ಲ. ವಿದ್ಯುತ್ ಅದಾಲತ್ ಪ್ರತಿ ಒಂದು ತಿಂಗಳಿಗೊಮ್ಮೆ ಸೇರುವಂತೆ ಆಗಬೇಕು. ಅವರು ಕೃಷ್ಣ ಯೋಜನೆ ಬಗ್ಗೆ ಹೇಳಿದ್ದಾರೆ. ಮುಖ್ಯಮಂತ್ರಿಗಳಿಗೆ ಆ ಬಗ್ಗೆ ಕಳಕಳಿ ಇದೆ. 31ಮೇ, 2000ದನೇ ಇಸವಿಯೊಳಗಾಗಿ ನಮ್ಮ ಪಾಲಿನ ಪೂರ್ಣ ನೀರನ್ನು ಬಳಕೆ ಮಾಡಿಕೊಳ್ಳಲು ಎಲ್ಲಾ ಕೆಲಸಕಾರ್ಯಗಳನ್ನು ನಾವು ಮಾಡುತ್ತೇವೆಂದು ಹೇಳಿದ್ದಾರೆ. ಅವರ ಕಳಕಳಿಯನ್ನು ಒಪ್ಪಿಕೊಂಡು ಆ ಯೋಜನೆಗೆ ಹೆಚ್ಚಿನ ಹಣವನ್ನು ಒದಗಿಸಿ ಕಾರ್ಯನಿರ್ವಹಣೆಯನ್ನು ಮಾಡಬೇಕು. 2000ದನೇ ಇಸವಿಯೊಳಗೆ ಪೂರ್ಣ ನೀರಿನ ಬಳಕೆಗೆ ಬೇಕಾದ ಯೋಜನೆಯನ್ನು ಪೂರ್ಣಗೊಳಿಸಿ ಬಚಾವತ್ ಆಯೋಗದ ತೀರ್ಪಿನ ಪ್ರಕಾರ ಎಲ್ಲಾ ಕೆಲಸಕಾರ್ಯಗಳು ಆಗಬೇಕೆಂದು ಮಾನ್ಯ ಮುಖ್ಯಮಂತ್ರಿಯವರನ್ನು ಒತ್ತಾಯ ಮಾಡುತ್ತೇನೆ. ಆಡಳಿತ ಸುಧಾರಣೆಯ ಕುರಿತು ಮಾನ್ಯ ಮುಖ್ಯಮಂತ್ರಿಯವರು ಮಾತನಾಡುವಾಗ ರಾಜ್ಯದ ಮಹಾನಗರ ಸಭೆಗಳ ಕುರಿತು ಹೇಳಿದ್ದಾರೆ.

ಅದು ಪಿಡಬ್ಲ್ಯೂಡಿ ಇರಬಹುದು, ಪೊಲೀಸ್ ಇಲಾಖೆ ಇರಬಹುದು, ಹುಬ್ಬಳ್ಳಿ ಧಾರವಾಡ ನಗರಸಭೆ ಇರಬಹುದು ಅಂತಹ ಎಲ್ಲಾ ಅಧಿಕಾರಿಗಳು ಎಲ್ಲೆಲ್ಲಿ ಯಾರ್‍ಯಾರು 15-20 ವರ್ಷಗಳಿಂದ ತಳವೂರಿದ್ದಾರೆ ಅವರನ್ನು ತಕ್ಷಣ ಅಲ್ಲಿಂದ ವರ್ಗಾವಣೆ ಮಾಡುವಂತಹ ಕೆಲಸ ಏನು ಆಗಬೇಕಾಗಿದೆ ಆ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಕಠಿಣ ನಿರ್ಧಾರ ಕೈಗೊಳ್ಳಬೇಕಾಗುತ್ತದೆ. ಇದಕ್ಕೆ ಯಾವುದೇ ಪ್ರಭಾವಕ್ಕೆ ಒಳಗಾಗಬಾರದು ಮತ್ತು ಇಂತಹ ಸಂದರ್ಭದಲ್ಲಿ ನಮ್ಮ ಸಂಪೂರ್ಣ ಸಹಕಾರ ಇದೆ. ಇವತ್ತು ಮಾನ್ಯ ಮುಖ್ಯಮಂತ್ರಿಗಳು ಇಲ್ಲಿ ಏನು ವಿಚಾರ ಪ್ರಸ್ತಾಪಿಸಿದ್ದಾರೆ ಅದರ ಬಗ್ಗೆ ಇನ್ನೂ ನಮಗೆ ಬಹಳ ನಿರೀಕ್ಷೆ ಇತ್ತು, ಆದರಂತೆ ಅವರು ನಡೆಯಲಿಲ್ಲ. ಆದರೆ ಅವರಿಗೇನು ಕಳಕಳಿ ಇದೆ ಅದಕ್ಕೆ ನಾವು ಸ್ಪಂದಿಸುತ್ತೇವೆ, ಮುಂಬರುವ ದಿನಗಳಲ್ಲಿ ಆಡಳಿತ ಸುಧಾರಣೆ ಇರಬಹುದು, ಜನಕಲ್ಯಾಣ ಇರಬಹುದು ಅವರಿಂದ ಹೆಚ್ಚಿನದನ್ನು ನಿರೀಕ್ಷೆ ಮಾಡುತ್ತಿದ್ದೇವೆ. ಅದಕ್ಕೆ ತಕ್ಕಂತೆ ಅವರು ನಡೆಯಲಿ. ಅಲ್ಲದೆ ಮುಂದಿನ ದಿನಗಳಲ್ಲಿ ವರ್ಗಾವಣೆ ಏನು ಆಗಬೇಕಾಗಿದೆ ಅದಕ್ಕೆ ಯಾವರೀತಿ ಅವರು ನೀತಿನಿರೂಪಣೆ ಮಾಡುತ್ತಾರೆ? ಏಕೆಂದರೆ ಅಧಿಕಾರಿವರ್ಗಕ್ಕೆ ಮೂರು ತಿಂಗಳು ಕೆಲಸವೇ ಇರುವುದಿಲ್ಲ. ಆದ್ದರಿಂದ ಸರಿಯಾದ ದಿಕ್ಕಿನಲ್ಲಿ ಈ ಕೆಲಸ ನಡೆಯಲಿ, ಅದಕ್ಕೆ

ತಕ್ಕಂತೆ ಮಾನ್ಯ ಮುಖ್ಯಮಂತ್ರಿಗಳೂ, ಇತರ ಸಚಿವರೂ ನಡೆಯಲಿ ಎಂದು ಹೇಳುತ್ತಾ ಇನ್ನು ಹಲವಾರು ವಿಷಯಗಳ ಬಗ್ಗೆ ಅವರು ಸ್ಪಷ್ಟೀಕರಣ ನೀಡಲಿ ಎಂದು ಹೇಳಿ ನನ್ನ ಮಾತು ಮುಗಿಸುತ್ತೇನೆ.

ಶ್ರೀ ಪಿ.ಜಿ.ಆರ್.ಸಿಂಧ್ಯಾ: ಮಾನ್ಯ ಅಧ್ಯಕ್ಷರೇ, ಈ ಸದನದ ನಾಯಕರು ಹೊರಗಡೆ 'ಸಾಧನೆ ಶೂನ್ಯ ಸರ್ಕಾರ' ಎಂದು ಹೇಳಿ, ಐದು ವರ್ಷಗಳ ಅವಧಿಯಲ್ಲಿ ಹಿಂದಿನ ಸರ್ಕಾರದಿಂದ ನಾಲ್ಕೂವರೆ ಸಾವಿರ ಕೋಟಿ ರೂಪಾಯಿಗಳು ಕೃಷ್ಣ ಮೇಲ್ದಂಡೆ ಯೋಜನೆಗೆ ಖರ್ಚಾಗಿರುವುದು, ವಿದ್ಯುದುತ್ಪಾದನೆ ಬಗ್ಗೆ ಮಾಡಿರುವ ಕೆಲಸ, ಶಿಕ್ಷಕರನ್ನು ನೇಮಿಸಿಕೊಂಡಿರುವುದರಲ್ಲಿ ಸರ್ಕಾರ ಹಿಂದೆ ಮಾಡಿರುವುದಕ್ಕೆ ಒಪ್ಪಿಗೆ ಕೊಟ್ಟಿರುವುದಕ್ಕೆ ನಾನು ಅವರನ್ನು ಅಭಿನಂದಿಸುತ್ತೇನೆ. ಇನ್ನು ಎರಡು ಮೂರು ವಿಚಾರಗಳಲ್ಲಿ ಮಾತ್ರ ವಿವರಣೆ ರೂಪದಲ್ಲಿ ಸ್ಪೆಸಿಫಿಕಾಗಿ ಮಾನ್ಯ ಮುಖ್ಯಮಂತ್ರಿಗಳಿಂದ ಉತ್ತರ ನಿರೀಕ್ಷೆ ಮಾಡುತ್ತಿದ್ದೇನೆ. ಒಂದು, ಬಳ್ಳಾರಿ ಜಿಲ್ಲೆಗೆ 3,300 ಕೋಟಿ ರೂಪಾಯಿಗಳ ಯೋಜನೆ ಏನಿದೆ ಅದನ್ನು ಎಷ್ಟು ವರ್ಷಗಳಲ್ಲಿ ಖರ್ಚು ಮಾಡುತ್ತೀರಿ? ಬಜೆಟ್‌ನಲ್ಲಿ ಅದಕ್ಕೆ ಅವಕಾಶ ಮಾಡಿಕೊಂಡಿದ್ದೀರಾ? ಅದರ ವಿವರಗಳನ್ನೆಲ್ಲ ಇಲ್ಲಿ ಇವತ್ತು ಹೇಳುವುದಕ್ಕೆ ನಿಮಗೆ ಸಾಧ್ಯವಾಗದೇಹೋದರೆ ಇನ್ನೂ 15 ದಿವಸಗಳೊಳಗೆ ಆ ವಿವರಗಳನ್ನು ರಾಜ್ಯದ ಜನತೆಗೆ ತಿಳಿಸಬೇಕು. ಬಳ್ಳಾರಿಯ ವಿದ್ಯುದುತ್ಪಾದನೆಗೆ ನಾವೇ ಹಾಕಿರುವ ಅಸ್ತಿಭಾರದಿಂದ ಕನಕಪುರಕ್ಕೆ ಕರೆಂಟ್ ಬರುವುದಿಲ್ಲ ಅಥವಾ ಸೋಮನಹಳ್ಳಿಗೆ ಕರೆಂಟ್ ಹೋಗುವುದಿಲ್ಲ ಎಂದು ಹೇಳುವುದಿಲ್ಲ, ಆದರೆ ಬಳ್ಳಾರಿಗಾಗಿ ಪತ್ರಿಕಾ ಹೇಳಿಕೆ ಮೂಲಕ ನೀವು 3300 ಕೋಟಿ ರೂಪಾಯಿಗಳ ಯೋಜನೆ ಬಗ್ಗೆ ಏನು ಹೇಳಿದ್ದೀರಿ ಅದರ ವಿವರಗಳನ್ನು ಎಷ್ಟು ದಿವಸದೊಳಗೆ ರಾಜ್ಯದ ಜನತೆಗೆ ಕೊಡುತ್ತೀರಾ ಎಂದು ಸ್ಪೆಸಿಫಿಕಾಗಿ ಕೇಳಲಿಕ್ಕೆ ಬಯಸುತ್ತೇನೆ. ಇನ್ನು ಪ್ರಣಾಳಿಕೆ ಬಗ್ಗೆ ನಮ್ಮ ಹಿರಿಯ ಮುಖಂಡರು, ಅತಿರಥ ಮಹಾರಥರೆಲ್ಲ, ಇಲ್ಲಿ ಪ್ರಸ್ತಾಪಿಸಿದೆವು. ತಾವೆಲ್ಲ ಸೇರಿ ಬರೆದ ಪ್ರಣಾಳಿಕೆ ಬಗ್ಗೆ ತಾವೇನೂ ಹೇಳಲೂ ಹೋಗಿಲ್ಲ. ಪ್ರಣಾಳಿಕೆಯ ಒಂದು ಅಂಶದ ಬಗ್ಗೆ ನಾನು ಸವಾಲು ಹಾಕಿದೆ; 'ಅಲ್ರೀ, ಒಂದು ಲಕ್ಷ ಮನೆಯನ್ನು ಹಿಂದಿನ ಸರ್ಕಾರ ಕಟ್ಟಲಿಲ್ಲ' ಎಂದು ನೀವು ಹೇಳಿದ್ದೀರಿ, ನಾವು ನಾಲ್ಕು ಲಕ್ಷ ಮನೆಗಳನ್ನು ಕಟ್ಟಿದ್ದೇವೆ, ಇಲ್ಲದೇ ಹೋದರೆ ನಾವು 18 ಜನ ಯಾರೂ ಇಲ್ಲಿರುವುದಿಲ್ಲ ಎಂದು ಅದಕ್ಕೇನೂ ಉತ್ತರ ಬರಲಿಲ್ಲ. ಅದನ್ನು ನಾನು ನಿರೀಕ್ಷೆ ಮಾಡುವುದಿಲ್ಲ. ಏಕೆಂದರೆ ಪ್ರಣಾಳಿಕೆ ಬರೆಯುವಾಗ ನೀವು ಗಮನಿಸದೆ ಇರಬಹುದು. ಆದ್ದರಿಂದ ಅದರ ವಿವರಣೆ ನಾನು ಈಗ ಕೇಳುತ್ತಿಲ್ಲ. ಮಾನ್ಯ ಶ್ರೀಕಂಠಯ್ಯನವರು, ರೆವಿನ್ಯೂ ಸಚಿವರು ಹೊರಟು ಹೋದರು, ಇಲ್ಲಿ ಮಾನ್ಯ ಮುಖ್ಯಮಂತ್ರಿಗಳ ಉತ್ತರ ಆದಮೇಲೆ ಅವರು ಇರಬೇಕಾಗಿತ್ತು. ಮಳೆಯ ಹಾನಿಯಿಂದ ಆದ ನಷ್ಟವನ್ನು ತುಂಬಿಕೊಡಲು ವಾಸ್ತವವಾಗಿ ಎಷ್ಟು ದುಡ್ಡು ಬಿಡುಗಡೆ ಮಾಡಿದ್ದೀರಿ? ಕೇಂದ್ರದಿಂದ ಏನಾದರೂ ಸಹಾಯ ಸಹಕಾರ ಕೇಳಿದ್ದೀರೋ? ಅದರ ಮಾಹಿತಿಯನ್ನು ದಯವಿಟ್ಟು ಇಲ್ಲಿ ಕೊಡಬೇಕೆಂಬುದು ನನ್ನ ಎರಡನೇ ಕ್ಲಾರಿಫಿಕೇಶನ್, ಇದು ಬಹಳ ಮುಖ್ಯವಾಗಿರುವುದು; ಎಷ್ಟು ದುಡ್ಡು ನೀವು ಜಿಲ್ಲಾವಾರು ರಿಲೀಸ್ ಮಾಡಿದ್ದೀರಿ ತಿಳಿಸಿ. ಕೊನೆಯದಾಗಿ ಈ ಗ್ರಾಮ ಪಂಚಾಯಿತಿ ಚುನಾವಣೆಗಳನ್ನು ಜನವರಿ ಮೊದಲ ವಾರದಲ್ಲಿ ನಡೆಸುತ್ತೇವೆ ಎಂದು ಮಾನ್ಯ ಸಂಸದೀಯ ವ್ಯವಹಾರಗಳ ಸಚಿವರು ಹೇಳಿದ್ದಾರೆ. ಅನೇಕ ಪತ್ರಿಕೆಗಳಲ್ಲಿ ಅದು ವರದಿಯಾಗಿದೆ; ಸಂತೋಷ, ಅದನ್ನು ನಡೆಸಬೇಕು. ಆದರೆ ತಾವು

ಕಾನೂನಿನಲ್ಲಿ ಬದಲಾವಣೆ ಮಾಡಿ ಹಿಂದೆ ಇದ್ದ ಹೆಚ್ಚಿನ ಪಂಚಾಯಿತ್ತಿಗಳನ್ನು ಮುಂದುವರೆಸಿಕೊಂಡು ಹೋಗಬೇಕೆಂದಿದ್ದೀರಿ. ಸ್ವಾಮಿ, ಅತ್ಯಂತ ಪ್ರಾಮಾಣಿಕವಾಗಿ ಈ ಸರ್ಕಾರಕ್ಕೆ ನಾನು ಒಂದು ಮಾತು ಹೇಳಲಿಕ್ಕೆ ಬಯಸುತ್ತೇನೆ: ಅದು ಕಠೋರ ಎಂದು ನಿಮಗನ್ನಿಸಬಹುದು, ಆದರೆ ನಾನು ಅದನ್ನು ಹೇಳಲೇಬೇಕಾಗಿದೆ. ಯಾವುದೇ ಕಾರಣದಿಂದಲೂ ನೀವು ಮಾಡುತ್ತಿರುವುದು ಸರಿಯಲ್ಲ. ಇದರಿಂದ ಈ ವ್ಯವಸ್ಥೆಯಲ್ಲಿ ಜನಗಳಿಗೆ ನಂಬಿಕೆ ಹೋಗುತ್ತದೆ. ನಾವು ಮಾಡಿರುವುದೆಲ್ಲ ಸರಿ ಎಂದು ಹೇಳುವುದಿಲ್ಲ, ನಾವೂ ತಪ್ಪು ಮಾಡಿರಬಹುದು. ಆದರೆ ನೀವು ಸುಗ್ರೀವಾಜ್ಞೆ ಮೂಲಕ ಅದನ್ನು ಯಾಕೆ ಮಾಡಲು ಹೊರಟಿದ್ದೀರಾ? ಇನ್ನೂ ಮೂರು ದಿವಸಗಳ ಕಾಲ ವಿಧಾನಸಭೆಯನ್ನು ಇಟ್ಟುಕೊಳ್ಳಿ, ನಾವು ಆ ಬಗ್ಗೆ ಚರ್ಚೆ ಮಾಡೋಣ. ನಾವು ಮಾಡಿರುವ ಕಾನೂನಿನಲ್ಲಿ ಏನಾದರೂ ನ್ಯೂನತೆ ಇದ್ದರೆ ನೀವು ನಮಗೆ ಕನ್ವಿನ್ಸ್ ಮಾಡಿ, ಅದರಲ್ಲೂ ಮಾನ್ಯ ಘೋರ್ಪಡೆಯವರು ಯಾವುದೇ ಮುಲಾಜಿಲ್ಲದೆ, ಚುನಾವಣೆಗಳಾಗದೆ ಇರುವಾಗ ನೀವು ಹೇಳಿದಂತೆ ರಾಜೀನಾಮೆ ಕೊಟ್ಟು ಅಧಿಕಾರಾನ ಬಿಟ್ಟುಹೋಗಿರುವ ಉದಾಹರಣೆಗಳು ಈ ದೇಶದಲ್ಲಿ ಕೆಲವೇ ಕೆಲವು ಇರುವುದು, ಆದ್ದರಿಂದ ನಮ್ಮನ್ನೆಲ್ಲ ಸ್ವಲ್ಪ ವಿಶ್ವಾಸಕ್ಕೆ ತೆಗೆದುಕೊಳ್ಳಬೇಕು. ನೀವು ತರಬೇಕೆಂದಿರುವ ಬದಲಾವಣೆಗಳನ್ನು ಚರ್ಚೆ ಮಾಡಿ, ಸುಗ್ರೀವಾಜ್ಞೆ ಮೂಲಕ ಮಾಡಲು ಹೋಗಬೇಡಿ. ಇದನ್ನು ನಾವು ವಿರೋಧ ಮಾಡುತ್ತೇವೆ. ಇದರ ಬಗ್ಗೆ ನಿಮ್ಮ ಉತ್ತರವೇನು? ಈ ಮೂರಕ್ಕೂ ತಾವು ಉತ್ತರ ಕೊಡಬೇಕು ಎಂದು ಮಾನ್ಯ ಸಭಾನಾಯಕರನ್ನು ನಾನು ಕೇಳುತ್ತಿದ್ದೇನೆ.

ಶ್ರೀ ಮಾಲೀಕಯ್ಯ ವಿ. ಗುತ್ತೇದಾರ್: ಮಾನ್ಯ ಅಧ್ಯಕ್ಷರೇ, ಮಾನ್ಯ ಸಭಾನಾಯಕರು ಬಹಳ ದೀರ್ಘವಾಗಿ ತಮಗಿರುವ ಅನುಭವದ ಹಿನ್ನೆಲೆಯಲ್ಲಿ ಕೆಲವು ಮಾತುಗಳನ್ನು ಇಲ್ಲಿ ಆಡಿದ್ದಾರೆ. ಅಧಿಕಾರ ವಿಕೇಂದ್ರೀಕರಣ ಮತ್ತು ಕಂಪ್ಯೂಟರ್‌ಗೆ ಹೆಚ್ಚಿನ ಒತ್ತು ಕೊಟ್ಟರು. ಆಡಳಿತ ಸುಧಾರಣೆ ಬಗ್ಗೆ ಕೆಲವು ಮಾತುಗಳನ್ನು ಚೆನ್ನಾಗಿ, ಖಾರವಾಗಿ ನುಡಿದಿದ್ದಾರೆ, ಅದನ್ನು ನಾನು ಸ್ವಾಗತ ಮಾಡುತ್ತೇನೆ. ಅದು ಬರಲೇಬೇಕು. ನಮ್ಮ ನೆರೆರಾಜ್ಯವಾದ ಆಂಧ್ರಪ್ರದೇಶದಲ್ಲಿ ಮಾನ್ಯ ಚಂದ್ರಬಾಬುನಾಯ್ಡು ಅದನ್ನು ಸದುಪಯೋಗಪಡಿಸಿಕೊಂಡು ಅಭಿವೃದ್ಧಿ ಪಥದಲ್ಲಿ ಆ ರಾಜ್ಯವನ್ನು ತೆಗೆದುಕೊಂಡುಹೋಗುತ್ತಿದ್ದಾರೆ, ಅದೇರೀತಿ ಮಾನ್ಯ ಮುಖ್ಯಮಂತ್ರಿಯವರು ಕರ್ನಾಟಕವನ್ನೂ ಕೊಂಡೊಯ್ಯುತ್ತಾರೆಂಬ ವಿಶ್ವಾಸ ನಾವು ವ್ಯಕ್ತಪಡಿಸುತ್ತಿದ್ದೇವೆ. ಅವರ ಭಾವನೆ ನಮಗೆ ಅರ್ಥವಾಗುತ್ತದೆ, ಆದರೆ ಅವರು ಯಾವರೀತಿ ಪರಿಣಾಮಕಾರಿಯಾಗಿ ಮಾಡುತ್ತಾರೆಂಬುದನ್ನು ನಾವು ಕಾದು ನೋಡುತ್ತೇವೆ. ಅದರ ಜೊತೆಗೆ ಪ್ರಾದೇಶಿಕ ಅಸಮಾನತೆ ಬಗ್ಗೆ ಆ ತಾರತಮ್ಯ ಸರಿಪಡಿಸುತ್ತೇವೆಂದು ಮಾನ್ಯ ರಾಜ್ಯಪಾಲರ ಭಾಷಣದಲ್ಲಿ ಏನು ಹೇಳಿದ್ದಾರೆ ಅದರ ಬಗ್ಗೆ ಅವರ ಉತ್ತರದಲ್ಲಿ ಹೆಚ್ಚಿನ ವಿಚಾರ ಹೇಳುತ್ತಾರೆಂದು ನಾವು ನಿರೀಕ್ಷೆ ಮಾಡಿದ್ದೆವು, ಅದು ಬರಲಿಲ್ಲ; ಅದರ ಬಗ್ಗೆ ಮಾನ್ಯ ಜಗದೀಶ್ ಶೆಟ್ಟರ್ ಕೆಲವು ಮಾತುಗಳನ್ನು ಆಡಿದ್ದಾರೆ. ಅಲ್ಲಿನ ತಾರತಮ್ಯ ಹೋಗಲಾಡಿಸಬೇಕಾದರೆ ಆ ಭಾಗ ಕೈಗಾರಿಕೆಯಲ್ಲಿ ಹಿಂದುಳಿದಿದೆಯೋ, ಶಿಕ್ಷಣದಲ್ಲಿ ಹಿಂದುಳಿದಿದೆಯೋ ಎಂಬ ಬಗ್ಗೆ ಗಮನ ಹರಿಸಿ ತಕ್ಕ ಕಾರ್ಯಕ್ರಮಗಳನ್ನು ರೂಪಿಸಬೇಕಾದ್ದು ಸರ್ಕಾರದ ಕರ್ತವ್ಯ ಇದೆ. ನಮ್ಮ ಸರ್ಕಾರ ಅಧಿಕಾರದಲ್ಲಿದ್ದಾಗ ಮುಖ್ಯ ಕಾರ್ಯದರ್ಶಿಗಳ ನಾಯಕತ್ವದಲ್ಲಿ ಆ ಬಗ್ಗೆ ಒಂದು ಸರ್ವೆ ಕೂಡ ಮಾಡಿಸಿ, ಒಂದು ವರದಿ ಕೂಡ ಸರ್ಕಾರದಲ್ಲಿದೆ.

ಅದರ ಬಗ್ಗೆ ಯಾವರೀತಿ ಕಾರ್ಯಕ್ರಮ ರೂಪಿಸುತ್ತೀರೆಂದು ಉತ್ತರದಲ್ಲಿ ನೀವು ಹೇಳುತ್ತೀರೆಂದು ನಂಬುತ್ತಿದ್ದೇನೆ. ಮತ್ತು ನಮ್ಮ ಭಾಗದಲ್ಲಿ ಪಿಯುಸಿ ಬೋರ್ಡ್ಆಗಬೇಕೆಂಬುದು ನಮ್ಮ ಬಹಳ ದಿನಗಳ ಬೇಡಿಕೆ ಇದೆ. ಸಿ.ಇ.ಟಿ. ಸೆಲೆಕ್ಷನ್ ಕೂಡ ವಿಭಾಗ ಮಟ್ಟದಲ್ಲಿ ಆಗಬೇಕು, ಇದರಿಂದ ನಮ್ಮ ಭಾಗದ ಯುವಕರಿಗೆ ಉದ್ಯೋಗ ಸಿಗಲು ಅನುಕೂಲವಾಗುವುದು, ಇದಕ್ಕೆ ಹೆಚ್ಚಿನ ಒತ್ತು ಕೊಡಬೇಕೆಂದು ನಾನು ಒತ್ತಾಯ ಮಾಡುತ್ತಿದ್ದೇನೆ. ಜೊತೆಗೆ ಅತಿವೃಷ್ಟಿ ಹಾನಿ ಬಗ್ಗೆ ನಮ್ಮ ಪಕ್ಷದ ನಾಯಕ ಶ್ರೀ ಕೆ.ಎಚ್.ಶ್ರೀನಿವಾಸರು ಆಗಲೇ ಆ ಪ್ರದೇಶಗಳಿಗೆ ಭೇಟಿ ಕೊಟ್ಟು ಅವರು ತಂದಿರುವ ಮಾಹಿತಿ ಪ್ರಕಾರ ಸುಮಾರು 64 ಕೋಟಿ ರೂಪಾಯಿಗಳಷ್ಟು ಹಾನಿಯಾಗಿದೆ, ಆದರೆ ಹಣ ಬಿಡುಗಡೆಯಾಗಿರುವುದು ಕೇವಲ 3 ಕೋಟಿ ರೂಪಾಯಿಗಳು ಮಾತ್ರ ಅಂದಾಗ ಯಾವರೀತಿ ಕೆಲಸ ನಡೆಯುತ್ತಿದೆ ಎಂಬುದನ್ನು ತಮ್ಮ ಉತ್ತರದಲ್ಲಿ ತಿಳಿಸುತ್ತೀರೆಂದು ಭಾವಿಸುತ್ತೇನೆ. ಇನ್ನು ವಿಶೇಷವಾಗಿ ನಮ್ಮ ಹೈದರಾಬಾದ್ ಕರ್ನಾಟಕದಲ್ಲಿ ಗುಲ್ಬರ್ಗದಲ್ಲಿ ಸಿಮೆಂಟ್ ಕಾರ್ಖಾನೆಗಳು ಜಾಸ್ತಿ ಇರುವುದರಿಂದ ಲಾರಿಗಳಲ್ಲಿ ಹೆಚ್ಚಿಗೆ ಲೋಡ್ ಹೋಗಿ ರಸ್ತೆಗಳು ತುಂಬ ಹದಗೆಟ್ಟಿವೆ. ಮಹಾರಾಷ್ಟ್ರದ ಬಾರ್ಡರ್‌ನಲ್ಲಿ ಬರುವ ರಸ್ತೆಗಳು ಉಮ್ಮರ್‌ಗಾವ್‌ನಿಂದ ಬರತಕ್ಕಂಥ ರಸ್ತೆ ಇರಬಹುದು, ಹಾಗೂ ಗಡಿಯ ಪ್ರದೇಶದಲ್ಲಿರತಕ್ಕಂಥ ರಸ್ತೆಗಳಿಗೆ ತಾವು ಹೆಚ್ಚಿನ ಮಹತ್ವ ಕೊಡಬೇಕು. ಏಕೆಂದರೆ ಅಲ್ಲಿ ಬ್ಲಾಕ್ ಗಾರ್ಡನ್ ಸಾಯಿಲ್ ಇರುವುದರಿಂದ, ಆ ವಿಚಾರ ಮಾನ್ಯ ಖರ್ಗೆ ಹಾಗೂ ಧರ್ಮಸಿಂಗ್ ಅವರಿಗೆ ಗೊತ್ತು; ಆ ಭಾಗದಲ್ಲಿ ಗುಣಮಟ್ಟ ಬಹಳ ಕಡಿಮೆ. ಅದು ಕರಿ ಮಣ್ಣಿನ ಒಂದು ಪ್ರದೇಶ ಇರುವುದರಿಂದ ಅಲ್ಲಿ ಒಂದು ಹೆಚ್ಚಿನ ಟ್ರೀಟ್‌ಮೆಂಟ್ ಕೊಡಬೇಕಾಗುತ್ತದೆ. ತಾವು ವಿಶೇಷವಾದಂತಹ ಕಾರ್ಯಕ್ರಮವನ್ನು ಅಲ್ಲಿ ರೂಪಿಸಿದಾಗ ಮಾತ್ರ ಅಲ್ಲಿ ಪಕ್ಕಾ ರಸ್ತೆಗಳು ಆಗಲು ಸಾಧ್ಯ. ಆದ್ದರಿಂದ ವಿಶೇಷವಾಗಿ ತಾವು ಈ ಒಂದು ರಸ್ತೆ ಬಗ್ಗೆ ಚಿಂತನೆ ಮಾಡಿದ್ದೀರಿ, ಅದರ ಬಗ್ಗೆ ಕಾಳಜಿ ವಹಿಸುತ್ತೀರಾ ಎಂದು ಈ ಸಂದರ್ಭದಲ್ಲಿ ನಾನು ವಿಶ್ವಾಸವನ್ನು ವ್ಯಕ್ತಪಡಿಸುತ್ತೇನೆ. ಇವತ್ತಿನ ತಮ್ಮ ಪ್ರತಿಯೊಂದು ಭಾವನೆಗೆ ನಾವು ಸಂಪೂರ್ಣ ಸಹಕಾರ ಕೊಡುತ್ತೇವೆ. ತಮ್ಮ ಒಳ್ಳೆಯತನಕ್ಕೆ ನಾವು ಸಹಕಾರ ಕೊಡುತ್ತೇವೆ. ಏಕೆಂದರೆ ಒಳ್ಳೆಯ ಭಾವನೆಯಲ್ಲಿ ಅಭಿಪ್ರಾಯವನ್ನು ಈ ಸದನದಲ್ಲಿ ತಾವು ವ್ಯಕ್ತಪಡಿಸಿರುವುದರಿಂದ ತಮ್ಮ ಒಂದು ನಾಯಕತ್ವದಲ್ಲಿ ಐದು ವರ್ಷ ಅಧಿಕಾರ ಮಾಡಿ. ನಮ್ಮದೇನೂ ಅಭ್ಯಂತರ ಇಲ್ಲ. ನಮ್ಮ ಸಹಕಾರದ ಬಗ್ಗೆ ವಿಶ್ವಾಸ ಇರಲಿ. ನಿಮ್ಮ ಭಿನ್ನಮತದ ಬಗ್ಗೆ ನಾವು ಮಾತನಾಡುತ್ತಿಲ್ಲ. ಈಗ ಪ್ರಾರಂಭ ಆಗಿದೆ. ಮೊನ್ನೆ ತಾನೇ ಹೋಟೆಲ್‌ನಲ್ಲಿ ಸೇರಿರುವ ಬಗ್ಗೆ ಪತ್ರಿಕೆಯಲ್ಲಿ ಬಂದಿದೆ. ಅದು ನಿಮ್ಮ ಪಕ್ಷದ ವಿಚಾರ, ಆ ಬಗ್ಗೆ ನಾನು ಇಲ್ಲಿ ಮಾತನಾಡುವುದಕ್ಕೆ ಹೋಗುವುದಿಲ್ಲ. ಜನ ತಮಗೆ ಆಶೀರ್ವಾದವನ್ನು ಕೊಟ್ಟಿದ್ದಾರೆ. ತಾವು ಒಳ್ಳೆಯ ರೀತಿಯಿಂದ ಆಡಳಿತವನ್ನು ನಡೆಸಿ. ಈ ಒಂದು ರಾಜ್ಯ 21ನೇ ಶತಮಾನದ ಹೊಸ ಶಕೆಗೆ ನಾವೇನು ಕಾಲಿಡುತ್ತಿದ್ದೇವೆ, ಈ ಸಂದರ್ಭದಲ್ಲಿ ಒಳ್ಳೆಯ ರೀತಿಯ 'ಸಾಧನೆ ಸರ್ಕಾರ' ಎನ್ನುವ ರೀತಿಯಲ್ಲಿ ತಾವು ತೆಗೆದುಕೊಂಡು ಹೋಗುತ್ತೀರಿ ಎನ್ನುವ ವಿಶ್ವಾಸವನ್ನು ಕೂಡ ಈ ಸಂದರ್ಭದಲ್ಲಿ ವ್ಯಕ್ತಪಡಿಸಿ ಮಾನ್ಯ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಸಿ.ಭೈರೇಗೌಡ: ಮಾನ್ಯ ಅಧ್ಯಕ್ಷರೆ, ಮಾನ್ಯ ಮುಖ್ಯಮಂತ್ರಿಗಳ ಉತ್ತರ ನಿಸ್ಸಾರವಾಗಿದೆ.

ಅಧ್ಯಕ್ಷರು: ತಾವು ಸಂಕ್ಷಿಪ್ತವಾಗಿ ಹೇಳಿ; ಬರೇ ಕ್ಲಾರಿಫಿಕೇಶನ್ ಕೇಳಿ.

ಶ್ರೀ ಸಿ.ಬೈರೇಗೌಡ: ಮಾನ್ಯ ಮುಖ್ಯಮಂತ್ರಿಗಳ ಉತ್ತರ ಹೇಗಿದೆ ಎಂದರೆ ರಾಜ್ಯಪಾಲರ ಭಾಷಣ ಎಷ್ಟು ನಿಸ್ಸಾರವಾಗಿತ್ತೋ ಅದರ ಪ್ರತಿರೂಪವನ್ನು ನಾನು ಅವರ ಉತ್ತರದಲ್ಲಿ ಕಂಡುಕೊಂಡಿದ್ದೇನೆ. ನಾನು ಕೆಲವು ಮೂಲಭೂತವಾದಂತಹ ಪ್ರಶ್ನೆ ಕೇಳಿದ್ದೆ. ಉದಾಹರಣೆಗೆ ನಮ್ಮ ಕರಾವಳಿಯ ಪಶ್ಚಿಮ-ವಾಹಿನಿ ಎಂದು ಕರೆಯುತ್ತಿರತಕ್ಕ ನದಿಗಳನ್ನು ಈ ಕಡೆಗೆ ತಿರುಗಿಸತಕ್ಕ ವಿಚಾರದ ಬಗ್ಗೆ ತಾವು ಚುನಾವಣಾ ಪ್ರಣಾಳಿಕೆಯಲ್ಲಿ ಹೇಳಿದ್ದೀರಿ. ಅದರ ಬಗ್ಗೆ ನಾನು ಇಲ್ಲಿ ಪ್ರಸ್ತಾವವನ್ನೂ ಸಹ ಮಾಡಿದ್ದೆ. ಅದರ ಬಗ್ಗೆ ತಾವೇನೂ ಹೇಳಲಿಲ್ಲ. ರಾಜ್ಯದ ಆಡಳಿತದ ಸಮಸ್ಯೆಗಳು ಏನು ಎದುರಾಗುತ್ತವೆ ಎನ್ನತಕ್ಕ ಮಾತನ್ನು ಸಹ ತಮ್ಮ ಪ್ರಣಾಳಿಕೆಯಲ್ಲಿ ಹೇಳಿದ್ದೀರಿ. ಆ ಸಮಸ್ಯೆಗಳು ಯಾವುದು ಎಂದು ಗುರುತಿಸಿದ್ದೀರಾ? ಹಾಗೆ ಗುರುತಿಸಿರತಕ್ಕ ಸಮಸ್ಯೆಗಳಿಗೆ ನೀವೇನು ಪರಿಹಾರ ಕೊಡುತ್ತೀರಿ? ಎನ್ನತಕ್ಕ ಬಗ್ಗೆ ನಾನು ಕೇಳಿದ್ದೆ. ಅದಕ್ಕೂ ಸಹ ಉತ್ತರ ಇಲ್ಲ. ಮತ್ತೆ ಬಚಾವತ್‌ನ 'ಬಿ' ಸ್ಕೀಮಿನ ಪ್ರಕಾರ ತಾವು ಹೇಳಿದ್ದೀರಿ, ಯಾವಾಗಲೂ ಕೂಡ ಮಳೆ ಆಧಾರಿತ ಪ್ರದೇಶವಾಗಿ ಇರತಕ್ಕ ಒಣ ಪ್ರದೇಶಗಳು; ಅದರಲ್ಲಿ ಕೋಲಾರ ಜಿಲ್ಲೆ ಇರಬಹುದು, ತುಮಕೂರು, ಚಿತ್ರದುರ್ಗ, ಬಳ್ಳಾರಿ ಈ ಜಿಲ್ಲೆಗಳಿಗೆ ಅನುಕೂಲವಾಗತಕ್ಕ ವಿಚಾರ ಬಚಾವತ್‌ನ 'ಬಿ' ಸ್ಕೀಮಿನಲ್ಲಿರತಕ್ಕದ್ದು. ಅದರ ಬಗ್ಗೆ ಏನು ಮಾಡುತ್ತೀರಿ ಎನ್ನತಕ್ಕ ವಿಚಾರವನ್ನೂ ನಾನು ಕೇಳಿದ್ದೆ. ಅದಕ್ಕೂ ಸಹ ಉತ್ತರ ಇಲ್ಲ. ತಾವು ತಮ್ಮ ಟಿವಿ ಸಂದರ್ಶನದಲ್ಲಿ ಕೈಗಾರಿಕೆಗಳ ವಿಚಾರದಲ್ಲಿ ಕೆಲವು ಉದ್ಯಮಿಗಳ ಹೆಸರನ್ನು ಹೇಳಿ, 'ನಾನೇ ಅವರನ್ನು ಭೇಟಿ ಮಾಡುತ್ತೇನೆ' ಎನ್ನುವ ಮಾತನ್ನು ಹೇಳಿದ್ದೀರಿ. ಆದರೆ ನಾನು ಹೇಳಿದ್ದು, ತಮ್ಮ ಹಿನ್ನೆಲೆ ಏನು ಇದೆ? ನೀವು ಕೈಗಾರಿಕೆಗಳಿಗೆ ಒತ್ತನ್ನು ಕೊಡಲು ಪ್ರಯತ್ನ ಪಡುತ್ತಿದ್ದೀರೇ ವಿನಹ ಕೃಷಿಗೆ ಯಾವ ರೀತಿಯಾಗಿ ಒತ್ತನ್ನು ಕೊಡುತ್ತೀರಿ ಎಂದು ಹೇಳಿ. ನಿಮ್ಮ ರಾಜ್ಯಪಾಲರ ಭಾಷಣದಲ್ಲಿರತಕ್ಕ ಮಾಮೂಲಿ ಪದಗಳನ್ನೇ ಬಳಸಿ ಉತ್ತರ ಕೊಟ್ಟಿದ್ದೀರಿ. ನೀವು ಕೈಗಾರಿಕೋದ್ಯಮಿಗಳನ್ನು ಭೇಟಿ ಆಗಲು ತಯಾರಿದ್ದೀರಿ. ಆದರೆ ರೈತರನ್ನು ಭೇಟಿ ಆಗಲು ತಯಾರಿಲ್ಲ ಎನ್ನತಕ್ಕದ್ದನ್ನು ಕೂಡ ನಾನು ಹೇಳಿದ್ದೆ. ಅದಕ್ಕೂ ಸಹ ಉತ್ತರ ಇಲ್ಲ. ಮತ್ತೆ ರೈತರ ತಲೆಯ ಮೇಲೆ ಇವತ್ತಿನ ದಿವಸ ತೂಗುಗತ್ತಿ ಇರತಕ್ಕದ್ದು ಈ ಡಬ್ಲ್ಯೂಟಿಓ, ವಿಶ್ವ ವಾಣಿಜ್ಯ ವ್ಯವಸ್ಥೆಯಿಂದ ಭಾರತದ ರೈತರ ತಲೆಯ ಮೇಲೆ ತೂಗಾಡುತ್ತಿರುವಂತಹ ಕತ್ತಿ; ಈ ಕತ್ತಿ ಯಾವಾಗ ಎಷ್ಟು ಜನ ರೈತರನ್ನು ಬಲಿ ತೆಗೆದುಕೊಳ್ಳುತ್ತದೋ ಗೊತ್ತಿಲ್ಲ. ಇದಕ್ಕೂ ಸಹ ತಾವೇನೂ ಉತ್ತರ ಹೇಳಿಲ್ಲ. ಅದಕ್ಕೆ ನಾನು ತಮ್ಮ ಉತ್ತರ ಕೂಡ ನಿಸ್ಸಾರವಾಗಿದೆ, ರಾಜ್ಯಪಾಲರ ಭಾಷಣದಷ್ಟೇ ನಿಸ್ಸಾರವಾಗಿದೆ ಎಂದು ಹೇಳಬೇಕಾಗಿತ್ತು, ಎಂದು ತಮ್ಮ ಮುಖಾಂತರ ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ತರಬಯಸುತ್ತೇನೆ.

ಅಧ್ಯಕ್ಷರು: ಮಾನ್ಯ ಸದಾನಂದ ಗೌಡರು, ತಾವು ಒಂದು ನಿಮಿಷದಲ್ಲಿ ಮುಗಿಸಿ. ಏಕೆಂದರೆ ಇನ್ನೂ ಕ್ಲಾರಿಫಿಕೇಶನ್ ಕೇಳುವವರೇ ಸುಮಾರು ಜನ ಇದ್ದಾರೆ. ಉತ್ತರ-ಹತ್ತು-ಹದಿನೈದು ನಿಮಿಷದಲ್ಲಿ ಕೊಡಬೇಕು.

ಶ್ರೀ ಡಿ.ವಿ.ಸದಾನಂದ ಗೌಡ: ಮಾನ್ಯ ಅಧ್ಯಕ್ಷರೆ, ನಾನು ಬೇರೆ ಯಾವ ವಿಚಾರವನ್ನೂ ಅವರು ಹೇಳಿದ ಹಾಗೆ ಮಾತನಾಡುತ್ತಿಲ್ಲ. ನನ್ನನ್ನು ಅಂತೂ ಮಾನ್ಯ ಮುಖ್ಯಮಂತ್ರಿಯವರು

ಮುಟ್ಟಿಲೇ ಇಲ್ಲ ಎಂದು ಹೇಳುವಂತಹ ಬೇಸರ ನನ್ನಲ್ಲಿದೆ. ಕರಾವಳಿ ಬೆಲ್ಟ್‌ನ ಬಗ್ಗೆ ಪದೇ ಪದೇ ತಮ್ಮನ್ನು ಕೇಳುತ್ತಿದ್ದೆವು. 400 ಮೀಟರ್ ಉದ್ದದ ಕರಾವಳಿ ಬೆಲ್ಟ್ ಮತ್ತು ಮೀನುಗಾರರ ಬಗ್ಗೆ ಯಾವುದೇ ಪ್ರಸ್ತಾಪಗಳನ್ನು ತಾವು ಮಾಡಲಿಲ್ಲ. ಬಹುಶಃ ನಮ್ಮನ್ನೆಲ್ಲಾ ಮುಂದಿನ ಐದು ವರ್ಷಗಳಲ್ಲಿ ನೆಗ್ಲೆಕ್ಟ್ ಮಾಡಿ ಬಿಡುತ್ತೀರಾ ಎಂಬ ಸಂಶಯ ಇದೆ. ಇದಕ್ಕೆ ತಮ್ಮ ಯೋಜನೆಗಳೇನು ಎಂಬ ಬಗ್ಗೆ ಸ್ಪಷ್ಟೀಕರಣ ಮಾಡಬೇಕು ಎಂದು ಹೇಳುವಂತಹದ್ದು ಒಂದು. ಇನ್ನೊಂದು ತಮ್ಮ ಪಕ್ಕದಲ್ಲಿ ಮಾನ್ಯ ಖರ್ಗೆಯವರು ಇದ್ದಾರೆ. ಲಾ ಅಂಡ್ ಆರ್ಡರ್ ಬಗ್ಗೆ ನಿಮ್ಮ ಸರ್ಕಾರದ ನಿಲುವು ಏನು? ಮುಂದಿನ ಐದು ವರ್ಷಗಳಲ್ಲಿ ಹಿಂದೆ ಆದಂತಹ ರೀತಿಯಲ್ಲಿಯೇ ಈ ರಾಜ್ಯದಲ್ಲಿ ಬೇಕಾದಂತಹ ಗಲಾಟೆಗಳು ಮತ್ತೊಂದು ನಡೆಯುವುದಕ್ಕೆ ತಾವು ಆಸ್ಪದ ಕೊಡತ್ತೀರಾ? ಹೊಸ ಯಾವುದಾದರೂ ನೀತಿಯನ್ನು ಈ ಲಾ ಅಂಡ್ ಆರ್ಡರ್ ಬಗ್ಗೆ ಮಾಡುತ್ತೀರಾ? ಏಕೆ ಯಾವುದೇ ಸ್ಪಷ್ಟ ಕಾರ್ಯಕ್ರಮಗಳು ಇಲ್ಲ? ಏಕೆಂದರೆ ಸಾಮಾನ್ಯ ಜನರಿಗೆ ಗೌರವ ಯುತವಾಗಿ ಬದುಕುವಂತಹ ವ್ಯವಸ್ಥೆಗಳು ಸಮಾಜದಲ್ಲಿ ಆಗುವುದು ಮುಖ್ಯ. ಅದರ ಬಗ್ಗೆ ತಾವು ಅಥವಾ ತಮ್ಮ ಸರ್ಕಾರ ಪ್ರಸ್ತಾಪ ಮಾಡಲಿಲ್ಲ. ರೈತರ ಬಗ್ಗೆ ಭಾರೀ ಮಾತನಾಡಿದ್ದೀರಿ. ರೈತರ ಬಗ್ಗೆ ಭಾರೀ ಕಾಳಜಿ ಇದೆ ಎಂದು ಹೇಳಿದ್ದೀರಿ. ಅದರ ಜೊತೆಯಲ್ಲಿಯೇ ಇನ್ನೊಂದು ಮಾತು ಹೇಳಿದ್ದೀರಿ; ಫೆಬ್ರವರಿ, ಮಾರ್ಚ್ ಮತ್ತು ಏಪ್ರಿಲ್ ತಿಂಗಳಲ್ಲಿ ಕೆಇಬಿ ಸ್ವಲ್ಪಮಟ್ಟಿನ ಕಷ್ಟಕರ ಪರಿಸ್ಥಿತಿಯಲ್ಲಿರಬಹುದು ಎಂದು ಹೇಳಿದ್ದೀರಿ. ಬಹುಶಃ ಎಲ್ಲಾ ಪ್ಲಾಂಟೇಷನ್ ಕ್ರಾಪ್ಸ್‌ನವರು ಮತ್ತು ಬಾಕಿಯವರಿಗೆ ಫೆಬ್ರವರಿ, ಮಾರ್ಚ್ ಮತ್ತು ಏಪ್ರಿಲ್ ಈ ಮೂರು ತಿಂಗಳು, ರೈತರ ಪಂಪುಸೆಟ್ಟುಗಳಿಗೆ ಹೆಚ್ಚು ವಿದ್ಯುತ್ ಪೂರೈಕೆ ಮಾಡಬೇಕಾದ್ದು ಇದೆ. ಇದರ ಬಗ್ಗೆ ತಮ್ಮ ನಿಲುವು ಏನು? ರೈತರಿಗೆ ನಿಗದಿತ ರೀತಿಯಲ್ಲಿ ತಾವು ವಿದ್ಯುತ್ ಪೂರೈಕೆ ಮಾಡತ್ತೀರೋ ಇಲ್ಲವೋ? ಆ ತಿಂಗಳುಗಳಲ್ಲಿ ತಮ್ಮ ವಿದ್ಯುತ್ ಕಡಿತ ಮತ್ತಷ್ಟು ಜಾಸ್ತಿ ಆಗಿ ಹೋಗಿ ಇಡೀ ವರ್ಷ ದುಡಿದಂತಹ ರೈತ ಮತ್ತೆ ಕಣ್ಣೀರಿನಲ್ಲಿ ಕೈ ತೊಳೆಯುವಂತಹ ಪ್ರಯತ್ನಗಳು ಆಗಬಹುದಾ? ಇದರ ಬಗ್ಗೆ ತಮ್ಮ ಸರ್ಕಾರದ ನೀತಿಯನ್ನು ಕೂಡ ಹೇಳಲಿಲ್ಲ. ಇನ್ನೊಂದು ವಿಚಾರ, ಡಾಕ್ಟರ್‌ಗಳ ಅಪಾಯಿಂಟ್-ಮೆಂಟ್ ಬಗ್ಗೆ-ಹೇಳಿದ್ದೀರಿ ಈಗಾಗಲೇ ಸುಮಾರು 750 ಜನ ಕಾಂಟ್ರಾಕ್ಟ್ ಬೇಸ್ಡ್ ಡಾಕ್ಟರ್ಸ್ ಅನ್ನು ಈಗಾಗಲೇ ಅಪಾಯಿಂಟ್‌ಮೆಂಟ್ ಮಾಡಿದ್ದೀರಿ. ಅವರನ್ನು ಆದ್ಯತೆಯಲ್ಲಿ ಇದರಲ್ಲಿ ಪರಿಗಣನೆ ಮಾಡಿ ಅವರಿಗೆ ಅಪಾಯಿಂಟ್‌ಮೆಂಟ್ ಕೊಡಿಸುತ್ತೀರಾ? ಈ ಬಗ್ಗೆ ಕ್ಲಾರಿಫಿಕೇಶನ್ ಕೊಡಬೇಕೆಂದು ತಮ್ಮಲ್ಲಿ ಕೇಳುತ್ತಿದ್ದೇನೆ.

ಶ್ರೀ ಬಿ.ಸೋಮಶೇಖರ್: ಮಾನ್ಯ ಅಧ್ಯಕ್ಷರೇ, ಮಾನ್ಯ ಮುಖ್ಯಮಂತ್ರಿಗಳು ಅವರು ಅಧಿಕಾರವನ್ನು ವಹಿಸಿಕೊಂಡ ಪ್ರಥಮ ಭಾಷಣ ಇದು. ಅವರು ಬಹಳ ಉತ್ಸಾಹದಿಂದ ಉತ್ತರ ಕೊಡುವಾಗ ಕೆಲವು ಹೊಸ ಹೊಸ ಯೋಜನೆಗಳನ್ನು, ಚಿಂತನೆಗಳನ್ನು ಅಳವಡಿಸಿದ್ದಾರೆ ಎಂದು ನಾನು ತಿಳಿದು ಕೊಂಡಿದ್ದೇನೆ. ಆದರೆ ಹೊಸದೇನೂ ಕಾಣುತ್ತಿಲ್ಲ ಎಂದು ನಾನು ಬಹಳ ನೋವಿನಿಂದ ಹೇಳುತ್ತಿದ್ದೇನೆ. ಅವರೇ ಪ್ರಾಮಾಣಿಕವಾಗಿ ಒಪ್ಪಿಕೊಂಡ ರೀತಿಯಲ್ಲಿ ನಾವೇನು ಹೋದ ವರ್ಷ ಆಯವ್ಯಯದಲ್ಲಿ ಸೇರಿಸಿರತಕ್ಕ ಕಾರ್ಯಕ್ರಮಗಳನ್ನು ಮುಂದುವರಿಸಿಕೊಂಡು ಹೋಗತಕ್ಕಂಥ ಕೆಲಸವನ್ನು ನಾನು ಮಾಡುತ್ತಿದ್ದೇನೆ ಎಂದು ಹೇಳಿದ್ದಾರೆ; ಅದು ಬಹಳ ಸಂತೋಷದ ವಿಚಾರ. ಮತ್ತು 30 ದಿವಸಗಳ ಒಳಗಾಗಿ ಇಡೀ ಆಕಾಶವನ್ನು ತಂದು ನಾನು ಒಡ್ಡುವುದಕ್ಕೆ

ಆಗುವುದಿಲ್ಲ ಎಂದು ಕೂಡ ಬಹಳ ಪ್ರಾಮಾಣಿಕವಾಗಿ ಹೇಳಿದ್ದಾರೆ. ಅದು ಬಹಳ ಮೆಚ್ಚತಕ್ಕ ವಿಚಾರ. ಇವತ್ತು ಅವರು ಅತಿ ಹೆಚ್ಚಿನ ಮಹತ್ವ ಕೊಡುತ್ತಿರತಕ್ಕದ್ದು ತಂತ್ರಜ್ಞಾನಕ್ಕೆ ಮತ್ತು ಆಡಳಿತದಲ್ಲಿ ಗಣಕೀಕರಣವನ್ನು ಅಳವಡಿಸಿ ಆಡಳಿತವನ್ನು ಮಾಡತಕ್ಕದ್ದು; ಮಾಹಿತಿಯನ್ನು ತಂತ್ರಜ್ಞಾನದ ಮುಖಾಂತರ ಪಡೆದುಕೊಳ್ಳತಕ್ಕದ್ದು; ಇಂತಹ ವಿಚಾರವೆಲ್ಲ ನಾವು ಬಹಳ ಸ್ವಾಗತ ಮಾಡತಕ್ಕಂಥ ವಿಚಾರ. ನಾನು ಭಾಷಣ ಮಾಡುವಾಗ ಕೆಲವು ವಿಚಾರಗಳನ್ನು ತಮ್ಮ ಮುಂದೆ ಇಟ್ಟಿದ್ದೆ. ಅದರ ಬಗ್ಗೆ ಏನಾಗಿದೆ? ಏನು ಮಾಡುತ್ತಿದ್ದೇವೆ? ನಾವು ಹಾಕಿಕೊಂಡಿರತಕ್ಕ ಕಾರ್ಯಕ್ರಮಗಳು ಯಾವ ಹಂತದಲ್ಲಿ ಇದೆ? ಎನ್ನುವುದನ್ನು ಹೇಳುತ್ತಾರೆ ಎಂದು ತಿಳಿದುಕೊಂಡಿದ್ದೆ. ಇವತ್ತು ಅವರು ಹೇಳಲಿಲ್ಲ. ಇವತ್ತೇನು ಹೇಳುತ್ತಿದ್ದಾರೆ, ಪ್ರತಿ ತಾಲ್ಲೂಕು ಮಟ್ಟದಿಂದ, ಜಿಲ್ಲಾ ಮಟ್ಟದಿಂದ ಮಾಹಿತಿಯನ್ನು ತರಿಸಿಕೊಳ್ಳಬೇಕಾದರೆ ನೆಟ್ ವರ್ಕಿಂಗ್ ಇರಬೇಕು, ರಾಜ್ಯಕ್ಕೂ ಮತ್ತು ಜಿಲ್ಲೆಗಳಿಗೂ ಎಂದು ತಾವೇನು ಹೇಳಿದ್ದೀರಿ, ಅದನ್ನು ನಾವು ಕ್ಯಾಬಿನೆಟ್‌ನಲ್ಲಿ ತೀರ್ಮಾನ ಮಾಡಿದ್ದೆವು. ಏಕೆಂದರೆ ಜಿಲ್ಲಾ ಆಡಳಿತ ಬಹಳ ಮಹತ್ತರವಾದಂತಹ ಪಾತ್ರವನ್ನು ರಾಜ್ಯದ ಆಡಳಿತದಲ್ಲಿ ವಹಿಸುತ್ತದೆ. ಆ ಜಿಲ್ಲಾ ಆಡಳಿತದಿಂದ ಮತ್ತು ರಾಜ್ಯಕ್ಕೂ ಏನು ಮಾಹಿತಿ ತಂತ್ರಜ್ಞಾನದ ಮುಖಾಂತರ ನೆಟ್‌ವರ್ಕಿಂಗ್ ಮಾಡಬೇಕು ಎಂದು ಮಾಡಿದ್ದೆವು, ಆ ಆದೇಶವನ್ನು ನಾವು ಹೊರಡಿಸಿ ಒಂದು ತಿಂಗಳ ಮೇಲೆ ಆಗಿದೆ. ಕ್ಯಾಬಿನೆಟ್ ತೀರ್ಮಾನ ಆಗಿದೆ. ಅದರ ಹಣದ ಬಿಡುಗಡೆ ಇನ್ನೂ ಆಗಿಲ್ಲ. ತಾವು ಆರ್ಥಿಕ ಇಲಾಖೆಯ ಜವಾಬ್ದಾರಿಯನ್ನು ವಹಿಸಿಕೊಂಡಿದ್ದೀರಿ. ನಾನು ಆ ವಿಚಾರವನ್ನು ಎತ್ತಿದ್ದೆ. ಅದು ಕೇವಲ ಎರಡೂವರೆ ಕೋಟಿ ರೂಪಾಯಿಗಳ ಯೋಜನೆ. ಅದಕ್ಕೆ ನಾವು ಮಂಜೂರಾತಿ ಕೊಟ್ಟಿದ್ದೇವೆ. ಅದನ್ನು ಇನ್ನೂ ರಿಲೀಸ್ ಮಾಡಿಲ್ಲ. ಅದು ಯಾವ ಹಂತದಲ್ಲಿದೆ ಎನ್ನತಕ್ಕದ್ದನ್ನು ತಾವು ಹೇಳಬೇಕು. ಇದೊಂದು ಬಹಳ ಅತಿ ಹೆಚ್ಚಿನ ಮಹತ್ವಾಕಾಂಕ್ಷೆ ಏನು ಇದೆ; ಪೇಪರ್‌ಲೆಸ್ ಆಫೀಸ್ ಮಾಡಬೇಕೆಂಬ ವಿಚಾರ ಏನು ಇದೆ ಬಹುಶಃ ನಮ್ಮ ಭಾರತ ದೇಶದಲ್ಲಿ ಈ ಪೇಪರ್‌ಲೆಸ್ ಆಫೀಸ್ ಮಾಡತಕ್ಕ ಹಂತಕ್ಕೂ ಇನ್ನೂ ತಲುಪಿಲ್ಲ. ಕೆಲವು ಹೊರದೇಶದಲ್ಲಿ ದೊಡ್ಡ ದೊಡ್ಡ ಕಂಪನಿಗಳಲ್ಲಿ ಅದನ್ನು ಪ್ರಾಯೋಗಿಕವಾಗಿ ಮಾಡಿದ್ದಾರೆ. ನಾನು ಅದನ್ನು ಮಾಡಬೇಕೆಂದು ಹೇಳಿ ಒಂದು ಪ್ರಯೋಗವನ್ನು ಮಾಡಿ, ಒಂದು ಸಾಫ್ಟ್ ವೇರ್ ತಯಾರು ಮಾಡಿದೆವು; ನಮ್ಮ ಎರಡು ಸೆಕ್ಷನ್‌ಗಳಲ್ಲಿ ಮಾಡಿದೆವು. ಕಂದಾಯ ಇಲಾಖೆಯ ಎರಡು ಸೆಕ್ಷನ್‌ಗಳಲ್ಲಿ ಅದನ್ನು ಪ್ರಾಯೋಗಿಕವಾಗಿ ಮಾಡಿದ್ದೇವೆ. ಅದು ಯಾವ ಹಂತದಲ್ಲಿದೆ? ಅದಕ್ಕೆ ಎಷ್ಟು ಹಣ ರಿಲೀಸ್ ಮಾಡಿದ್ದಾರೆ? ಅದು ತಮ್ಮ ಭಾಷಣದಲ್ಲಿ ಪ್ರಸ್ತಾಪ ಇಲ್ಲ. ಇದೊಂದು, ಇದು ನಾವು ಮಾಡಿರತಕ್ಕ ವಿಚಾರ. ಇನ್ನು ಕಂಪ್ಯೂಟರ್‌ಗಳನ್ನು ಕೊಡತಕ್ಕ ವಿಚಾರ. ನಾವು ಈಗಾಗಲೇ ಎಲ್ಲ ತಾಲ್ಲೂಕುಗಳಿಗೆ ಸಪ್ಲೈ ಮಾಡಿದ್ದೇವೆ. ಸಬ್-ರಿಜಿಸ್ಟ್ರಾರ್ ಆಫೀಸ್‌ಗಳಿಗೆ ಸಪ್ಲೈ ಮಾಡಿದ್ದೇವೆ. ಪ್ರತಿ ಒಂದು ಸೆಕ್ಷನ್ ಆಫೀಸರ್‌ಗಳ ಟೇಬಲ್ ಮೇಲೆ ಕಂಪ್ಯೂಟರ್ಸ್ ಇದೆ. ಸುಮಾರು 12 ಸಾವಿರ ಕಡತಗಳನ್ನು ನಮ್ಮ ಒಂದೇ ಕಂದಾಯ ಇಲಾಖೆ ಕಂಪ್ಯೂಟರೀಕರಣ ಮಾಡಿದೆ. ಆದರೆ ಹಣ ಕೇಂದ್ರದಿಂದ ಬಂದಿರತಕ್ಕದ್ದು ಮತ್ತು ಈ ಲ್ಯಾಂಡ್ ರೆಕಾರ್ಡ್ಸ್‌ಗಳನ್ನು ಡಿಜಿಟೈಸೇಷನ್ ಮಾಡತಕ್ಕ ಒಂದು ಯೋಜನೆ ತಯಾರು ಮಾಡಿ ಕೇಂದ್ರ ಸರ್ಕಾರದಿಂದ ಒಪ್ಪಿಗೆ ಪಡೆದುಕೊಂಡಿದ್ದೇವೆ. ಆದರ ಹಣ ಕೇಂದ್ರ ಸರ್ಕಾರದಿಂದ ಬಂದಿದೆ. ಒಂದು ತಿಂಗಳಾಗಿದೆ ಕರ್ನಾಟಕ ಸರ್ಕಾರಕ್ಕೆ ಬಂದು; ನೀವು ಅದಕ್ಕೆ ಒಂದು ರೂಪಾಯಿಯನ್ನು ಬಿಡುಗಡೆ ಮಾಡಬೇಕಾಗಿಲ್ಲ. ಕೇಂದ್ರದಿಂದ ಬಂದಿರತಕ್ಕ ಹಣದಲ್ಲಿ ಇನ್ನೂ

ಒಂದು ರೂಪಾಯಿ ಬಿಡುಗಡೆ ಮಾಡಿಲ್ಲ. ನೂರಕ್ಕೆ ನೂರರಷ್ಟು ಹಣ ಕಂಪ್ಯೂಟರ್‌ಗೆ ಕೊಟ್ಟಿರತಕ್ಕದ್ದು ಬಂದಿದೆ; ನೆಟ್‌ವರ್ಕಿಂಗ್ ಇರತಕ್ಕದ್ದು. ಅನೇಕ ತೀರ್ಮಾನಗಳನ್ನು ಮಾಡಿರುವ ಬಗ್ಗೆ ಹಣ ಇನ್ನೂ ಬಿಡುಗಡೆ ಆಗಿಲ್ಲ. ಮೊದಲು ಆ ಒಂದು ತಿಂಗಳಲ್ಲಿ ಏನು ಕಮಿಟ್‌ಮೆಂಟ್ ಆಗಿದೆ ಅದನ್ನು ಮಾಡಿದ್ದೀರೋ ಇಲ್ಲವೋ ಎನ್ನತಕ್ಕದ್ದು ಒಂದು ವಿಚಾರ.

ಗ್ರಾಮೀಣ ಪ್ರದೇಶದಲ್ಲಿ ಕುಡಿಯುವ ನೀರಿನ 1600 ಯೋಜನೆಗಳಿಗೆ ವಿದ್ಯುತ್ ಕಲ್ಪಿಸುವ ಕೆಲಸ ಏನು ಬಾಕಿ ಇದೆ, ಅದನ್ನು ಕೊಡುತ್ತೇವೆಂದು ಘೋಷಣೆಯನ್ನು ಮಾಡಿದ್ದಾರೆ, ಬಹಳ ಸಂತೋಷ. ಅದರ ಜೊತೆಗೆ ನಾನು ಇನ್ನೊಂದನ್ನು ನಿರೀಕ್ಷೆ ಮಾಡಿದ್ದೆ; ಈ ಪರಿಶಿಷ್ಟ ಜಾತಿ ಪರಿಶಿಷ್ಟ ಪಂಗಡದವರಿಗೆ ಈ ಗಂಗಾ ಕಲ್ಯಾಣ ಯೋಜನೆಯಡಿಯಲ್ಲಿ ವಿದ್ಯುತ್ ಕೊಡುವಲ್ಲಿ ಸುಮಾರು ನಾಲ್ಕೈದು ಸಾವಿರ ಯೋಜನೆಗಳು ಬಾಕಿ ಇವೆ. ಅದನ್ನು ಆದ್ಯತೆಯ ಮೇರೆಗೆ ನಿರ್ದಿಷ್ಟ ಅವಧಿಯೊಳಗೆ ಮಾಡಿಸುತ್ತೇವೆಂದು ಹೇಳುತ್ತಾರೆಂದು ನಿರೀಕ್ಷೆ ಮಾಡಿದ್ದೆ. ಈ ಬಗ್ಗೆ ನಾನು ಇನ್ನೊಂದು ಸಲಹೆಯನ್ನು ಕೊಡಲು ಇಷ್ಟಪಡುತ್ತೇನೆ. ಕೇವಲ ಮಾನ್ಯ ಬೈರೇಗೌಡರು ಹೇಳಿದ್ದನ್ನು ತಿಳಿದುಕೊಳ್ಳದೆ ನಮ್ಮ ವಿರೋಧಪಕ್ಷದವರು ಹೇಳಿದ್ದನ್ನು ಒಪ್ಪಿಕೊಳ್ಳುತ್ತಾರೆಂದು ನಾನು ತಿಳಿದು ಕೊಂಡಿದ್ದೇನೆ. ಈ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡದವರಿಗೆ ಭಾಗ್ಯಜ್ಯೋತಿ ಯೋಜನೆಯಡಿ 500 ರೂಪಾಯಿಗಳನ್ನು ಸರ್ಕಾರ ಕೊಡುವುದು ಉಳಿದದ್ದನ್ನು ಗ್ರಾಮಪಂಚಾಯಿತಿಯವರು ಭರಿಸಬೇಕೆನ್ನುವ ಯೋಜನೆ ಇದೆ. ಈಗಾಗಲೇ ನಮಗೆಲ್ಲಾ ಗೊತ್ತಿರುವಂತೆ ಗ್ರಾಮ ಪಂಚಾಯಿತಿಯಲ್ಲಿ ಹಣವಿಲ್ಲ. ಹೀಗಾಗಿ ಆ ಯೋಜನೆ ಯೋಜನೆಯಾಗಿಯೇ ಉಳಿದಿದೆಯೇ ಹೊರತು ಸರಿಯಾಗಿ ಕಾರ್ಯಗತವಾಗುತ್ತಿಲ್ಲ. ಆ ಯೋಜನೆಗಾಗುವ ಹಣವನ್ನು ಗ್ರಾಮಪಂಚಾಯಿತಿ, ಜಿಲ್ಲಾ ಪಂಚಾಯಿತಿ ಅಥವಾ ಸರ್ಕಾರದಿಂದ ಭರಿಸುತ್ತೇವೆ, ಈ ಯೋಜನೆಯನ್ನು ಅನುಷ್ಠಾನಕ್ಕೆ ತರುತ್ತೇವೆನ್ನುವುದನ್ನು ತಾವು ಹೇಳಬೇಕು.

ಶ್ರೀ.ಎ.ಮಂಜು (ಅರಕಲಗೂಡು) :ಮಾನ್ಯ ಸಭಾಧ್ಯಕ್ಷರೆ, ಮಾನ್ಯ ಮುಖ್ಯಮಂತ್ರಿಗಳು ಎಲ್ಲಾ ವರ್ಗದವರಿಗೂ ಕೂಡ, ಅದು ಆರೋಗ್ಯ ಇರಬಹುದು, ರೈತರ ಸಮಸ್ಯೆಗಳಿರಬಹುದು ಎಲ್ಲದರ ಬಗ್ಗೆ ಮಾತನಾಡುತ್ತಾ ಅದರಲ್ಲಿ ಒಂದು ಅಂಶವನ್ನು ಬಿಟ್ಟಿದ್ದಾರೆಂದು ನನ್ನ ಅನಿಸಿಕೆ. ಈ ಏತ ನೀರಾವರಿಯ ಬಗ್ಗೆ ಬಹುಶಃ 1981 ರಲ್ಲಿ ನಮ್ಮ ಅರಕಲಗೂಡು ತಾಲ್ಲೂಕಿನಲ್ಲಿನ ಅಡಕೆಬೊಮ್ಮನಹಳ್ಳಿ ಎನ್ನುವ ಒಂದು ಗ್ರಾಮವಿದೆ; ಅದು ಹೇಮಾವತಿ ಜಲಾಶಯಕ್ಕೆ ಸೇರಿದ ಬಲದಂಡೆ ನಾಲೆ ಹೋದ ಮೇಲೆ ಏತನೀರಾವರಿ ಯೋಜನೆ ಮಂಜೂರಾಗಿತ್ತು ಶೇಕಡ 70 ರಷ್ಟು ಕೆಲಸಕಾರ್ಯಗಳು ಕೂಡ ಆಗಿದೆ.

ಅಧ್ಯಕ್ಷರು: ಪ್ರತಿಯೊಬ್ಬರು ತಮ್ಮ ತಮ್ಮ ಕ್ಷೇತ್ರಕ್ಕೆ ಹೋದರೆ ಅದಕ್ಕೆ ಸಂಬಂಧಿಸಿದಂತೆ ಅವರವರು ತಮ್ಮ ಅವಶ್ಯಕತೆಗಳನ್ನು ಹೇಳಿಕೊಳ್ಳುತ್ತಾರೆ. ಅವರು ಮಾನ್ಯ ರಾಜ್ಯಪಾಲರ ಭಾಷಣದಲ್ಲಿ ಏನು ಹೇಳಿದ್ದಾರೆ ಅದಕ್ಕೆ ಮುಖ್ಯಮಂತ್ರಿಗಳು ಏನು ಉತ್ತರ ಕೊಟ್ಟಿದ್ದಾರೆ, ಅದರ ಬಗ್ಗೆ ಏನಾದರೂ ಸ್ಪಷ್ಟೀಕರಣವಿದ್ದರೆ, ಕೇಳಿ ಅಷ್ಟೆ.

ಶ್ರೀ.ಎ.ಮಂಜು: ಅಲ್ಲಿ ಮಂಜೂರಾಗಿರುವ ಯೋಜನೆಯನ್ನು ಗಮನದಲ್ಲಿಟ್ಟುಕೊಂಡು ನಮ್ಮ ಮಾನ್ಯ ಮುಖ್ಯಮಂತ್ರಿಗಳು ಹೇಳಬೇಕಾಗಿತ್ತು, ಅದನ್ನು ಹೇಳಲಿಲ್ಲವೆನ್ನುವುದು ನನ್ನ ಅನಿಸಿಕೆ.

ಶ್ರೀ.ಆರಗ ಜ್ಞಾನೇಂದ್ರ (ತೀರ್ಥಹಳ್ಳಿ): ಮಾನ್ಯ ಸಭಾಧ್ಯಕ್ಷರೆ, ಮಾನ್ಯ ಮುಖ್ಯಮಂತ್ರಿಗಳು ಮಾತನಾಡುವಾಗ ಸಣ್ಣ ನೀರಾವರಿಗೆ ಆದ್ಯತೆಯನ್ನು ಕೊಡುತ್ತೇನೆಂದು ಹೇಳಿದರು. ಈ ಸಾಲಿನ ಆಯವ್ಯಯದಲ್ಲಿ ಇಲ್ಲದಿರುವ ಎಷ್ಟು ಹೆಚ್ಚುವರಿ ಹಣವನ್ನು ಕೊಡುತ್ತೇವೆನ್ನುವುದನ್ನು ಹೇಳಲಿಲ್ಲ. ಗ್ರಾಮೀಣ ವಿದ್ಯುದೀಕರಣದ ಬಗ್ಗೆ ಹೆಚ್ಚು ಒತ್ತನ್ನು ಕೊಟ್ಟು ಮಾತನಾಡಿದ್ದಾರೆ. ಆದರೆ ನಮ್ಮ ತಾಲ್ಲೂಕಿನಲ್ಲಿ ಆ ರೀತಿ ಮಂಜೂರಾಗಿ ಕಾರ್ಯಕ್ರಮವಾಗುತ್ತಿದೆ. ಆದರೆ ನಿಮ್ಮ ರೆಗ್ಯುಲರ್ ಇಲಾಖೆಯ ವತಿಯಿಂದ ಆಗುವುದಕ್ಕೆ ಸಾಧ್ಯವಿಲ್ಲ. ಸಬ್ ಡಿವಿಷನ್‌ಗಳನ್ನು ಹೆಚ್ಚುವರಿಯಾಗಿ ಇದಕ್ಕೆ ಕೊಟ್ಟರೆ ಮಾತ್ರ ಸಾಧ್ಯವಾಗುತ್ತದೆನ್ನುವ ಅಂಶವನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ನೀವು ಎಷ್ಟು ಹಣವನ್ನು ಖರ್ಚು ಮಾಡುತ್ತಿರೋ ಅಷ್ಟು ಹಣವನ್ನು ಕೇಂದ್ರ ಸರ್ಕಾರ ರೀಇಂಬರ್ಸ್ ಮಾಡುತ್ತದೆ. ನಾವು ನಾಲ್ಕೈದು ಸಲ ಇದೇ ಸದನದಲ್ಲಿ ಕುಳಿತು ಬೊಬ್ಬೆ ಹಾಕುತ್ತಿದ್ದೇವೆ, ಅಲ್ಲಿ ಸಿಬ್ಬಂದಿ ಇಲ್ಲದೆ ಕಾರ್ಯಗತವಾಗುತ್ತಿಲ್ಲ. ಆ ಯೋಜನೆಯನ್ನು ಜಾರಿಗೊಳಿಸಲು ಆ ರೀತಿ ಹೆಚ್ಚುವರಿ ಸಬ್‌ಡಿವಿಷನ್‌ಗಳನ್ನು ಏನಾದರೂ ನಿರ್ಮಾಣ ಮಾಡುತ್ತೀರಾ? ಇನ್ನು ಶಿಕ್ಷಣ ಇಲಾಖೆಯ ಬಗ್ಗೆ ಸಿಬ್ಬಂದಿ, ಅಧ್ಯಾಪಕರ ನೇಮಕಾತಿಯ ಬಗ್ಗೆ ಹೇಳಿದ್ದೀರಿ, ಅದಕ್ಕಾಗಿ ಧನ್ಯವಾದಗಳು. ಆದರೆ ಉಳಿದಿರುವ ಅನೇಕ ಇಲಾಖೆಗಳಲ್ಲಿ ತುಂಬಬೇಕಾದ ಖಾಲಿ ಹುದ್ದೆಗಳು ಸಾಕಷ್ಟು ಇವೆ. ಹುದ್ದೆ ತುಂಬುವ ಬಗ್ಗೆ ನಿಮ್ಮ ಕಾರ್ಯಕ್ರಮಗಳೇನು ಎನ್ನುವುದನ್ನು ಹೇಳಬೇಕು.

ಶ್ರೀ.ಬಿ.ಹೆಚ್. ಬನ್ನಿಕೋಡ್ (ಹಿರೆಕೇರೂರು): ಮಾನ್ಯ ಅಧ್ಯಕ್ಷರೆ, ನೀರಾವರಿ, ಬಗ್ಗೆ, ವಿದ್ಯುತ್ ಬಗ್ಗೆ, ರಸ್ತೆಗಳ ಬಗ್ಗೆ-ಹೀಗೆ ಎಲ್ಲಾ ವಿಚಾರಗಳನ್ನು ಇಲ್ಲಿ ಎತ್ತಿದ್ದಾರೆ. ಅವರು ಈ ವಿಷಯಗಳನ್ನು ಪ್ರಸ್ತಾಪ ಮಾಡಿದ್ದು ನೋಡಿದರೆ, ಅವರಲ್ಲಿ ಬಹುಶಃ ಅಭಿವೃದ್ಧಿಯ ಬಗ್ಗೆ, ಕಲ್ಯಾಣ ಕಾರ್ಯಕ್ರಮಗಳ ಬಗ್ಗೆ ಒಳ್ಳೆಯ ವಿಚಾರವಿದೆ ಅನಿಸಿತು. ಆದರೆ ಇಲ್ಲಿ ನಮ್ಮ ಮುಂದಿರುವುದು ಈ ಒಳ್ಳೆಯ ವಿಚಾರಗಳನ್ನು ಬಗೆಹರಿಸಿಕೊಳ್ಳುವುದಕ್ಕೆ ಸರ್ಕಾರ ಹಾಕಿಕೊಂಡ ಕಾರ್ಯಕ್ರಮಗಳೇನು, ಅದಕ್ಕೆ ಹಣಕಾಸಿನ ವ್ಯವಸ್ಥೆ ಏನೆಂಬುದನ್ನು ಮಾನ್ಯ ಮುಖ್ಯಮಂತ್ರಿಗಳು ಹೇಳಲಿಲ್ಲ. ಈ ವಿಚಾರದಲ್ಲಿ ಉತ್ತರ ಕರ್ನಾಟಕಕ್ಕೆ ತಾರತಮ್ಯವಾಗಿದೆ, ಈ ಅಸಮಾನತೆಯನ್ನು ಬಗೆಹರಿಸುತ್ತೇವೆಂದು ಮಾನ್ಯ ರಾಜ್ಯಪಾಲರ ಭಾಷಣದ ಮೂಲಕ ಸರ್ಕಾರ ಹೇಳಿದೆ. ಈ ಅಸಮಾನತೆಯನ್ನು ಸರಿಪಡಿಸುವುದಕ್ಕೆ ಏನೊಂದು ಕಾರ್ಯಕ್ರಮವನ್ನು ಹಾಕಿಕೊಂಡಿದ್ದಾರೆನ್ನುವ ಬಗ್ಗೆ ಒಂದು ಮಾತನ್ನು ಕೂಡ ಮುಖ್ಯಮಂತ್ರಿಗಳು ತಮ್ಮ ಭಾಷಣದಲ್ಲಿ ಹೇಳಲಿಲ್ಲ. ನೀರಾವರಿಯಲ್ಲಿ, ಶಿಕ್ಷಣದಲ್ಲಿ, ಆರೋಗ್ಯ ಇಲಾಖೆಯಲ್ಲಿ ಹೀಗೆ ಎಲ್ಲಾ ವಿಚಾರಗಳನ್ನು ಮಾನ್ಯ ರಾಜ್ಯಪಾಲರ ಭಾಷಣದ ಮೇಲಿನ ಚರ್ಚೆಯ ಸಮಯದಲ್ಲಿ ಆಡಳಿತ ಪಕ್ಷದ ಶಾಸಕ ಸ್ನೇಹಿತರು ಹೇಳಿದಾಗ ಆ ತಾರತಮ್ಯ ಸರಿಪಡಿಸುವ ಕುರಿತು ಮಾನ್ಯ ಮುಖ್ಯಮಂತ್ರಿಗಳು ಒಂದು ಮಾತನ್ನು ಕೂಡ ಹೇಳಲಿಲ್ಲ. ಚುನಾವಣೆಯಲ್ಲಿ ಉತ್ತರ ಕರ್ನಾಟಕಕ್ಕೆ ಆಗಿರುವ ತಾರತಮ್ಯವನ್ನು ಸರಿಪಡಿಸುತ್ತೇವೆಂದು ಹೇಳಿ ಮತಗಳನ್ನು ಪಡೆದು ಅಧಿಕಾರಕ್ಕೆ ಬಂದ ಸರ್ಕಾರ ಈ ಉತ್ತರ ಕರ್ನಾಟಕದ ಅಭಿವೃದ್ಧಿಯ ಬಗ್ಗೆ ಇರುವ ಕಳಕಳಿ, ಅದರ ಯೋಜನೆಗಳ ಕುರಿತು ಏನನ್ನು ಹೇಳಲಿಲ್ಲ. ದಯವಿಟ್ಟು ತಮ್ಮ ಮೂಲಕ ಆ ಅಭಿವೃದ್ಧಿಯ ಬಗ್ಗೆ ಇರುವ ಕಾರ್ಯಕ್ರಮವೇನೆಂದು ಕೇಳುತ್ತಿದ್ದೇನೆ. ಇನ್ನೊಂದು ವಿಚಾರ, ರೈತರ ಬಗ್ಗೆ ಹೇಳುವಾಗ ಬೀಜ, ಗೊಬ್ಬರ, ಸಾಲದ ಕುರಿತು ಹೇಳಿದರು. ರೈತ ಬೆಳೆದ ಬೆಳೆಗೆ ಯೋಗ್ಯ ಬೆಲೆಯನ್ನು ಕೊಡುವುದಕ್ಕೆ ಒಂದು ಹಣಕಾಸಿನ ವ್ಯವಸ್ಥೆಯನ್ನು ರಾಜ್ಯ ಹಾಗೂ

ರಾಷ್ಟ್ರ ಮಟ್ಟದಲ್ಲಿ ಮಾಡಿ ರೈತ ತನ್ನ ಬೆಳೆಯನ್ನು ಮಾರಟ ಮಾಡುವಾಗ ಅವನು ಕೂಡ ಅದರಲ್ಲಿ ಹಣ ಕೊಡುವುದಕ್ಕೆ ತಯಾರಾಗುತ್ತಿದ್ದಾನೆ. ನಾಲ್ಕಾರು ವರ್ಷಗಳ ಒಂದು ಕಾರ್ಯಕ್ರಮ ಹಾಕಿಕೊಂಡು ಒಂದು ನಿಧಿಯನ್ನು ವ್ಯವಸ್ಥೆ ಮಾಡಿದರೆ ರೈತರು ಅದರಲ್ಲಿ ಭಾಗಿಗಳಾಗುತ್ತಾರೆ, ಅಷ್ಟೇ ಹಣವನ್ನು ಸರ್ಕಾರವು ಅದರಲ್ಲಿ ಸೇರಿಸಿ ರೈತರಿಗೆ ಕನಿಷ್ಟ ಬೆಲೆಯನ್ನು ಒದಗಿಸಿಕೊಡುವುದಕ್ಕೆ ಒಂದು ಯೋಜನೆಯನ್ನು ಹಾಕಿಕೊಳ್ಳಲಿ ಎಂದು ಹೇಳಿದ ಮಾತನ್ನು ಮಾನ್ಯ ಮುಖ್ಯಮಂತ್ರಿಗಳು ಕೇಳಲಿಲ್ಲ. ಮಾನ್ಯ ಮುಖ್ಯಮಂತ್ರಿಗಳು ನೀರಾವರಿ ಮಂತ್ರಿಗಳಾಗಿದ್ದಾಗ ತುಂಗಾ ಮೇಲ್ದಂಡೆ ಯೋಜನೆಯ ಬಗ್ಗೆ ಪದೇ ಪದೇ ನಾನು ನೀರಾವರಿ ಮಂತ್ರಿಯಲ್ಲ, ಮುಖ್ಯಮಂತ್ರಿಯೂ ಅಲ್ಲ, ಹಣ ಕೊಟ್ಟರೆ ಅದನ್ನು ಮಾಡುತ್ತೇನೆಂದು ಹೇಳುತ್ತಿದ್ದರು. ಈಗ ಮುಖ್ಯಮಂತ್ರಿಗಳು ಅವರೇ ಹಣಕಾಸು ಮಂತ್ರಿಗಳಾಗಿದ್ದಾರೆ, ನೀರಾವರಿ ಇಲಾಖೆಯನ್ನು ಉತ್ತರ ಕರ್ನಾಟಕದ ಮಂತ್ರಿಗಳಿಗೆ ಕೊಟ್ಟಿದ್ದಾರೆ; ತುಂಗಾ ಮೇಲ್ದಂಡೆ ಯೋಜನೆಯಿಂದ 2 ಲಕ್ಷ 34 ಸಾವಿರ ಹೆಕ್ಟೇರ್ ಜಮೀನಿಗೆ ಉಪಯೋಗವಾಗುತ್ತದೆ; ಆ ಯೋಜನೆಯನ್ನು ಕಾರ್ಯಗತ ಮಾಡುವುದಕ್ಕೆ ಸರ್ಕಾರ ನಿರ್ದಿಷ್ಟ ಕಾರ್ಯಕ್ರಮವನ್ನು ಹಾಕಿಕೊಳ್ಳಲಿ ಎನ್ನುವ ಮಾತನ್ನು ಸರ್ಕಾರಕ್ಕೆ ತಮ್ಮ ಮೂಲಕ ಹೇಳುವುದಕ್ಕೆ ಇಚ್ಛಿಪಡುತ್ತೇನೆ.

ಶ್ರೀ.ಕೆ.ಬಿ. ಮಲ್ಲಿಕಾರ್ಜುನ (ಬೀರೂರು): ಮಾನ್ಯ ಸಭಾಧ್ಯಕ್ಷರೆ, ಮಾನ್ಯ ಮುಖ್ಯಮಂತ್ರಿಗಳು ಅವರ ಉತ್ತರದಲ್ಲಿ ಈ ಗ್ರಾಮ ಪಂಚಾಯಿತಿಗೆ ಹೆಚ್ಚಿಗೆ ಹಣವನ್ನು ಕೊಡುವುದರ ಬಗ್ಗೆ ಹಾಗೂ ಮಹಾನಗರಪಾಲಿಕೆಗೆ ಹಣವನ್ನು ಕೊಡುವುದರ ಕುರಿತು ಮಾತನಾಡಿದರು. ಆದರೆ ಪುರಸಭೆಗಳ ಪರಿಸ್ಥಿತಿ ಬಹಳ ಹೀನಾಯವಾಗಿದೆ; ವಿದ್ಯುತ್ ಬಿಲ್ಲನ್ನು ಕಟ್ಟಲಾಗದಂತಹ ಪರಿಸ್ಥಿತಿ ಪುರಸಭೆಗಳಲ್ಲಿದೆ, ಆದುದರಿಂದ ಪುರಸಭೆಗಳಿಗೆ ಹೆಚ್ಚಿಗೆ ಹಣವನ್ನು ಕೊಡುವಲ್ಲಿ ವಿಶೇಷ ಕಾರ್ಯಕ್ರಮವನ್ನು ರೂಪಿಸಿಕೊಳ್ಳಬೇಕು ಎನ್ನುವ ನನ್ನ ಮನವಿಗೆ ಅವರು ಅದಕ್ಕೆ ಪುರಸ್ಕಾರ ಮಾಡಬೇಕು. ಪುರಸಭೆಗಳು ಇವತ್ತಿನದಿವಸ ಕಸ ಗುಡಿಸಲು ಸಿಬ್ಬಂದಿ ನೇಮಕಾತಿ ಮಾಡಿಕೊಳ್ಳಲಾಗದಂತಹ ಪರಿಸ್ಥಿತಿಯಲ್ಲಿವೆ. ಪುರಸಭೆಗಳಿಗೆ ಹೆಚ್ಚಿನ ಅನುದಾನವನ್ನು ಕೊಡಬೇಕು. ಇನ್ನು ಚಿಕ್ಕಮಗಳೂರು ಜಿಲ್ಲೆಯಿಂದ ಸ್ವಾತಂತ್ರ್ಯ ಬಂದಾಗಿನಿಂದಲೂ ಸಾಕಷ್ಟು ಆದಾಯವನ್ನು ಕೊಡುತ್ತಿದ್ದೇವೆ. ಆ ಚಿಕ್ಕಮಂಗಳೂರು ಜಿಲ್ಲೆಗೆ ಯಾವುದೇ ಸರ್ಕಾರ ಒಂದು ಕಾರ್ಯಕ್ರಮವನ್ನು ರೂಪಿಸಿಕೊಂಡಿಲ್ಲ. ಸಾಂಬಾರು ಪದಾರ್ಥಗಳ ಮೂಲಕ ಎಷ್ಟು ಆದಾಯವನ್ನು ಕೊಟ್ಟರೂ ಕೂಡ ನಮ್ಮ ಜಿಲ್ಲೆ ಅಭಿವೃದ್ಧಿಯಾಗಿಲ್ಲ, ದಯಮಾಡಿ ನಮ್ಮ ಚಿಕ್ಕಮಂಗಳೂರು ಜಿಲ್ಲೆಯ ಕುರಿತು ವಿಶೇಷವಾದ ಅಭಿಮಾನವನ್ನಿಟ್ಟು, ಯಾವುದಾದರೂ ಕೈಗಾರಿಕೆ ಆರಂಭಿಸುವುದರ ಮೂಲಕ ಅಭಿವೃದ್ಧಿ ಕಾರ್ಯಕ್ರಮವನ್ನು ನಮ್ಮ ಜಿಲ್ಲೆಗೆ ಹಮ್ಮಿಕೊಳ್ಳಬೇಕು ಎಂದು ಮನವಿ ಮಾಡಿಕೊಂಡು ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ.ವಿ. ಪಾಪಣ್ಣ (ಹುಣಸೂರು): ನೀರಾವರಿಯ ಆದ್ಯತೆಯಲ್ಲಿ ಮಲಪ್ರಭಾ, ಘಟಪ್ರಭಾ 2001ನೇ ಇಸವಿಯಲ್ಲಿ ಒಂದು ಲಕ್ಷ ತ್ತೊಂಬತ್ತು ಸಾವಿರ ಹೆಕ್ಟೇರ್ ಪ್ರದೇಶವನ್ನು ನೀರಾವರಿಗೆ ಅಳವಡಿಸುತ್ತೇವೆಂದು ಹೇಳಿದರು. ನಮ್ಮ ಕಾವೇರಿ, ಹಾರಂಗಿ ಹಾಗೂ ಕಪಿಲ ಯೋಜನೆಗಳ ವಿಷಯವನ್ನು ಇಲ್ಲಿ ಹೇಳಲಿಲ್ಲ. ಪ್ರತಿ ಗ್ರಾಮೀಣ ಪ್ರದೇಶ ಜನರಿಗೆ 55 ಲೀಟರ್ ಕುಡಿಯುವ ನೀರನ್ನು ಇನ್ನು ಐದು ವರ್ಷದಲ್ಲಿ ಕೊಡುತ್ತೇವೆಂದು ಮಾನ್ಯ ಸಭಾನಾಯಕರು ಹೇಳಿದ್ದಾರೆ.

ನಮ್ಮ ಕ್ಷೇತ್ರದಲ್ಲಿ ಈಗಾಗಲೇ ಎನ್‌ಆರ್‌ಡಬ್ಲ್ಯೂಎಸ್ ಯೋಜನೆ ನಡೆಯುತ್ತಿದೆ.

11,17 ಲಕ್ಷ ರೂಪಾಯಿಯ ಒಂದು ಯೋಜನೆಗೆ 9,000 ರೂಪಾಯಿಗಳ ಅನುದಾನವನ್ನು ಈ ಸರ್ಕಾರ ಬಿಡುಗಡೆ ಮಾಡಿದೆ. ಯೋಜನೆ ಮುಗಿಯುವುದಕ್ಕೆ 122 ವರ್ಷಗಳು ಬೇಕು. ಬೆಂಜಳ್ಳಿ ಕಾವಲ್ ಎಂದು ಒಂದು ಊರು ಇದೆ. ಈ ವರ್ಷ ಬರೀ 9,000 ರೂಪಾಯಿಗಳನ್ನು ಈ ಸರ್ಕಾರ ಅನುದಾನ ಕೊಟ್ಟಿದೆ. ಈ ರೀತಿ ಅನುದಾನ ಕೊಟ್ಟರೆ 122 ವರ್ಷ ಬೇಕೆಂದು ಮಾನ್ಯ ಸಭಾನಾಯಕರ ಗಮನಕ್ಕೆ ತರುತ್ತಿದ್ದೇನೆ.

ಶ್ರೀ ಜೆ.ಟಿ. ಪಾಟೀಲ್ (ಬೀಳಗಿ): ಸನ್ಮಾನ್ಯ ಅಧ್ಯಕ್ಷರೆ, ಸನ್ಮಾನ್ಯ ಮುಖ್ಯಮಂತ್ರಿಗಳು ಕೆಇಬಿ ವಿಚಾರದಲ್ಲಿ ಕರ್ನಾಟಕ ರಾಜ್ಯದಲ್ಲಿ ಅತಿ ಕಡಿಮೆ ವಿದ್ಯುತ್ ಸರಬರಾಜು ಇರುವ ಮಾಲಿಪುರ ಲೈನನ್ನು ಅಭಿವೃದ್ಧಿ ಪಡಿಸಬೇಕಾಗಿದೆ. ಜೊತೆಗೆ ಈ ರಾಜ್ಯದಲ್ಲಿ 24 ಗಂಟೆ ವಿದ್ಯುತ್ ಸರಬರಾಜು ಮಾಡುವಂತಹ ಸಮಯದಲ್ಲಿ ಕೇವಲ ಆರು ಗಂಟೆ ಜಮಖಂಡಿ ಮತ್ತು ಬೀಳಗಿ ಮತ್ತು ಸವದತ್ತಿ ತಾಲ್ಲೂಕುಗಳಿಗೆ ಸರಬರಾಜಾಗುತ್ತಿದೆ. ಇವತ್ತು ರೈತರ ಟ್ರಾನ್ಸ್‌ಫಾರ್ಮರ್ ಸುಟ್ಟಾಗ ಒಂದು ತಿಂಗಳಿಂದ ಎರಡು ತಿಂಗಳವರೆಗೆ ಟ್ರಾನ್ಸ್‌ಫಾರ್ಮರ್ ಸರಿಯಾಗುವುದಿಲ್ಲ. 10 ರಿಂದ 15,000 ರೂಪಾಯಿ ಸೆಕ್ಷನ್ ಆಫೀಸರ್‌ಗೆ ಲಂಚ ಕೊಟ್ಟಾಗ 24 ಗಂಟೆಗಳಲ್ಲಿ ಸರಿ ಆಗುತ್ತಿದೆ. ಈ ವಿಷಯದಲ್ಲಿ ದಯಮಾಡಿ ವಿದ್ಯುತ್ ಟ್ರಾನ್ಸ್‌ಫಾರ್ಮರ್‌ಗಳು ನಿಗದಿತ ಅವಧಿಯಲ್ಲಿ ದೊರೆಯುವ ಹಾಗೆ ಸನ್ಮಾನ್ಯ ಮುಖ್ಯಮಂತ್ರಿಗಳು ಕ್ರಮ ಕೈಗೊಳ್ಳಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ಹುಬ್ಬಳ್ಳಿಯಲ್ಲಿಯ ಕಿಮ್ಸ್ ಸಂಸ್ಥೆಯನ್ನು ಬಲಪಡಿಸಬೇಕೆಂದು ಮಾನ್ಯ ಮುಖ್ಯಮಂತ್ರಿಗಳಿಗೆ ನಾನು ಕೇಳಿಕೊಳ್ಳುತ್ತೇನೆ.

ಶ್ರೀ ಕೆ. ಶ್ರೀನಿವಾಸಗೌಡ(ಕೋಲಾರ): ಸನ್ಮಾನ್ಯ ಅಧ್ಯಕ್ಷರೆ, ಮಾನ್ಯ ಸಭಾನಾಯಕರು ಮಾನ್ಯ ರಾಜ್ಯಪಾಲರ ಭಾಷಣದ ಮೇಲೆ ಮಾತನಾಡುವಾಗ ನಾನು ಇಲ್ಲದೆ ಇದ್ದರೂ ಕೂಡ ಹೂಳೆತ್ತುವ ಕಾರ್ಯಕ್ರಮ ಏನು ಮಾಡಿದ್ದೀರಿ, ಎಂದು ಕೇಳಿದ್ದೆ. ಅವರ ರಿಪ್ಲೈಯಲ್ಲಿ ಹೇಳುವಾಗ ಹೂಳೆತ್ತುತ್ತಿದ್ದೇವೆ ಎಂದು ಹೇಳಿದ್ದಾರೆ. ಇದಕ್ಕೆ ಎಷ್ಟು ಹಣ ಇಟ್ಟಿದ್ದೀರಿ? ಅದಕ್ಕೆ ಏನಾದರೂ ಟ್ಯಾಂಕ್ ಡೆವಲಪ್‌ಮೆಂಟ್ ಅಥಾರಿಟಿ ಅಥವಾ ಟ್ಯಾಂಕ್ ಡೆವಲಪ್‌ಮೆಂಟ್ ಬೋರ್ಡ್ ಎಂದು ಏನಾದರೂ ಮಾಡಿದ್ದೀರಾ? ನಿರ್ದಿಷ್ಟವಾಗಿ ಹಣ ಎಷ್ಟು ಎಂದು ಹೇಳಬೇಕು. ಚುನಾವಣೆ ಇದ್ದಾಗ ನೀವು ಜನತಾದಳದವರು ಮೀಟರ್ ಹಾಕುತ್ತಾರೆಂದು ಎಲ್ಲಾ ಕಡೆ ಪ್ರಚಾರ ಇತ್ತು, ಈಗ ನೀವು ಪ್ರಸ್ತಾಪ ಮಾಡುವಾಗ ನಾವು ಮತ್ತೆ ಮೀಟರ್ ಹಾಕಬೇಕು, ಎಷ್ಟು ಕರೆಂಟ್ ಉಪಯೋಗ ಮಾಡಬೇಕು ಎನ್ನುವ ಮಾತನ್ನು ಹೇಳಿದ್ದೀರಿ. ಅದರ ಬಗ್ಗೆ ಸ್ಪಷ್ಟೀಕರಣ ಮಾಡಿ; ಮೀಟರ್ ಹಾಕುತ್ತೀರಾ, ಬಿಡುತ್ತೀರಾ ಎನ್ನುವುದನ್ನು ಸ್ಪಷ್ಟೀಕರಿಸಬೇಕು. ಮೂರನೆಯದು ತಾಲ್ಲೂಕು ಪಂಚಾಯಿತಿ ಮಟ್ಟದವರೆಗೆ ನಮ್ಮ ಆಸ್ಪತ್ರೆಗಳನ್ನು ಹೆಲ್ತ್ ಸಿಸ್ಟಮ್‌ಗೆ ಸೇರಿಸಿದ್ದೀರಿ, ಪಿಹೆಚ್‌ಇಗೆ ಕೂಡ ಹೆಲ್ತ್ ಸಿಸ್ಟಮ್‌ಗೆ ಸೇರಿಸಬೇಕೆಂದು ಹೇಳುತ್ತೇನೆ. ನಾಲ್ಕನೆಯದು ಬೆಂಗಳೂರಿನಲ್ಲಿ ಪಟ್ಟಣದ ಅಭಿವೃದ್ಧಿ ಮಾತ್ರ ತೆಗೆದುಕೊಂಡಿದ್ದೀರಿ. ಇತರ ಜಿಲ್ಲಾ ಕೇಂದ್ರಗಳಲ್ಲೂ ಕೂಡ ಅಭಿವೃದ್ಧಿಗೆ ಒತ್ತು ಕೊಡಬೇಕೆಂದು ಹೇಳುತ್ತೇನೆ. ಇನ್ನು ಸಹಕಾರದ ವಿಷಯ ಎತ್ತಲೇ ಇಲ್ಲ. ಸಹಕಾರ ನಿಮಗೆ ಜ್ಞಾಪಕ ಇದ್ದ ಹಾಗೆ ಇಲ್ಲ. ಈ ವಿಷಯದಲ್ಲಿ ಒತ್ತು ಕೊಡಬೇಕೆಂದು ತಮ್ಮಲ್ಲಿ ಪ್ರಾರ್ಥನೆ ಮಾಡುತ್ತೇನೆ. ಕಂಪ್ಯೂಟರ್ ಕೊಡುವ ವಿಚಾರದಲ್ಲಿ ಬಹಳ ಚೆನ್ನಾಗಿ ಹೇಳಿದ್ದೀರಿ.

ಹಿಂದೆ ಕಂಪ್ಯೂಟರ್ ಕೊಂಡ ಇಬ್ಬರು, ಒಬ್ಬ ಮುಖ್ಯ ಮಂತ್ರಿ ಮತ್ತು ಒಬ್ಬ ಮುಖ್ಯ ಕಾರ್ಯದರ್ಶಿಯವರನ್ನು ತೆಗೆದಿದ್ದಾರೆ. ಅದನ್ನು ಕೊಳ್ಳುವಾಗ ಸ್ವಲ್ಪ ಯೋಚನೆ ಮಾಡಿ ಸರಿಯಾಗಿ ತೆಗೆದುಕೊಳ್ಳಲಿ ಎಂದು ಹೇಳಿ ನನಗೆ ಮಾತನಾಡಲು ಅವಕಾಶ ಮಾಡಿಕೊಟ್ಟ ಮಾನ್ಯ ಅಧ್ಯಕ್ಷರಿಗೆ ವಂದಿಸುತ್ತೇನೆ.

ಡಾ: ಭಾರತೀ ಶಂಕರ್ (ಟಿ.ನರಸೀಪುರ): ಮಾನ್ಯ ಅಧ್ಯಕ್ಷರೆ, ಮಾನ್ಯ ಮುಖ್ಯಮಂತ್ರಿಗಳು ಉತ್ತರ ಕೊಡುವಾಗ ಆರೋಗ್ಯ ಇಲಾಖೆ ಸಮಸ್ಯೆ ಬಗ್ಗೆ, ಬಹಳ ಸ್ವಾಗತಾರ್ಹವಾದ ವಿಷಯಗಳಾದ ಗ್ರಾಮಾಂತರ ಪ್ರಾಥಮಿಕ ಆರೋಗ್ಯ ಕೇಂದ್ರ ಘಟಕಗಳ ಬಗ್ಗೆ ಗಮನ ಹರಿಸುತ್ತೇವೆಂದು ಹೇಳಿದ್ದಾರೆ. ಆದರೆ ಆರೋಗ್ಯ ಕ್ಷೇತ್ರದಲ್ಲಿ ಗಮನ ಹರಿಸಿದಾಗ ಎರಡು ಮುಖ ಇದೆ ಎನ್ನುವುದನ್ನು ಯಾವುದೇ ಸರ್ಕಾರ ಇದುವರೆಗೆ ಮನಗಾಣುತ್ತಿಲ್ಲ. ಒಂದು ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಸಿಬ್ಬಂದಿ ವೆಚ್ಚ ಒಂದು ವರ್ಷಕ್ಕೆ 50 ಲಕ್ಷ ರೂಪಾಯಿಯಾಗುತ್ತದೆ, ಅದು ಅವರಿಗೆ ವೇತನ ಮತ್ತು ಭತ್ಯೆ ಇತರ ರೂಪದಲ್ಲಿ ಖರ್ಚಾಗುತ್ತದೆ. ಆದರೆ ಔಷಧಿ ರೂಪದಲ್ಲಿ ಒಂದು ಆರೋಗ್ಯ ಕೇಂದ್ರಕ್ಕೆ ಕೊಡುತ್ತಿರತಕ್ಕಂಥದ್ದು ಇದುವರೆಗೆ ವರ್ಷಕ್ಕೆ 50,000 ರೂಪಾಯಿಗಳು. 50,000 ರೂಪಾಯಿಗಳ ಔಷಧಿ ಹಂಚುವುದಕ್ಕೆ 50 ಲಕ್ಷ ರೂಪಾಯಿಗಳ ವೆಚ್ಚ ಮಾಡಿ ನಾವು ಸಿಬ್ಬಂದಿಯನ್ನು ಒದಗಿಸುತ್ತಿದ್ದೇವೆ. ಇದರಲ್ಲಿ ಎರಡನೇ ಮುಖ ಏನಿದೆ ಎಂದರೆ ಔಷಧಿ ರೂಪದಲ್ಲಿ ನಾವು ಯಾವ ರೀತಿಯಾಗಿ ಕೊಡುತ್ತೇವೆ ಎನ್ನುವುದನ್ನು ನೋಡಬೇಕು. ಗ್ರಾಮಾಂತರ ಪ್ರದೇಶಗಳಲ್ಲಿ ಒಬ್ಬ ಪೇಷೆಂಟ್‌ಗೆ ಒಂದು ರೂಪಾಯಿ ಔಷಧಿಯಲ್ಲಿ ಏನು ಸಿಗುತ್ತದೆ ಎಂಬ ಪ್ರಶ್ನೆ ಇದೆ. ಆ ವಿಚಾರದಲ್ಲಿ ಮಾನ್ಯ ಮುಖ್ಯಮಂತ್ರಿಗಳು ಒಂದು ಸಮಜಾಯಿಷಿ ಕೊಡಬೇಕು.

ಶ್ರೀ ಪಾಟೀಲ್ ಶಿವಾನಂದ ಸಿದ್ರಾಮಪ್ಪ (ಮುಂಡರಗಿ): ಮಾನ್ಯ ಅಧ್ಯಕ್ಷರೆ, ಮಾನ್ಯ ಸಭಾನಾಯಕರು ತಮ್ಮ ಭಾಷಣದಲ್ಲಿ 17,000 ಟೀಚರ್ಸ್ ನೇಮಕ ಮಾಡುತ್ತೇವೆಂದು ಹೇಳಿದರು. ನಮ್ಮ ಬೀದರ್ ಜಿಲ್ಲೆಯಲ್ಲಿ ಒಂದು ಸಾವಿರ ಟೀಚರ್ ನೇಮಕಾತಿ ಆಗಿದೆ. ಗ್ರ್ಯಾಂಟ್ ಇನ್ ಎಡ್‌ಗೆ ಅಡ್ಮಿಟ್ ಆದ ಸ್ಕೂಲ್ಸ್ ಅಲ್ಲಿರತಕ್ಕಂತಹ ಟೀಚರ್ಸ್‌ಗೆ ಆರು ತಿಂಗಳಿನಿಂದ ಪರ್ಮಿಟ್ ಮಾಡಿ ಹಾಗೆಯೇ ಕೂರಿಸಿದ್ದಾರೆ. ಅವರನ್ನು ಸರ್ಕಾರಿ ನೇಮಕಾತಿ ಎಂದು ಹೇಳಿ ರೆಗ್ಯುಲರೈಸ್ ಮಾಡುತ್ತೀರಾ ಅಥವಾ ಹಾಗೆ ಇಲ್ಲದೆ ಅವರಿಗೆ ಹಾಗೆಯೇ ಮುಂದು ವರೆಸುತ್ತೀರಾ? ನೆನ್ನೆ ಮೇಲ್ಮನೆಯಲ್ಲಿ ಕೂಡ ಇಡೀ ದಿವಸ ಇದೇ ಚರ್ಚೆಯಾಗಿದೆ. ಇದು ಮಾನ್ಯ ಪ್ರಾಥಮಿಕ ಶಿಕ್ಷಣ ಸಚಿವರ ಗಮನಕ್ಕೂ ಬಂದಿದೆ. ಅವರ ಬಗ್ಗೆ ಏನಾದರೂ ಕಾಳಜಿ ತೆಗೆದುಕೊಂಡು 1,100 ಟೀಚರ್ಸ್ ಇದ್ದಾರೆ, ಆರು ತಿಂಗಳಿನಿಂದ ಸ್ಯಾಲರಿ ಕೊಟ್ಟಿಲ್ಲ; ಅಲ್ಲಿ ಸ್ಟೂಡೆಂಟ್ಸ್ ಇರಲಿಲ್ಲ ಎಂದು ಪ್ರೈಮರಿ ಸ್ಕೂಲ್‌ಗಳಿಗೆ ರೆಕಗ್ನಿಷನ್ ಕ್ಯಾನ್ಸಲ್ ಮಾಡಬೇಕೆಂದು ದೃಷ್ಟಿಕೋನ ಇಟ್ಟುಕೊಂಡು ಇದರ ಬಗ್ಗೆ ವಿಚಾರ ಮಾಡಿ.

ಶ್ರೀ ಎನ್. ಯೋಗೀಶ್ ಭಟ್(ಮಂಗಳೂರು): ನಾನು ಸನಾಮ್ಯ ಅಧ್ಯಕ್ಷರೆ ಮೂಲಕ ಸರ್ಕಾರಕ್ಕೆ ಒಂದು ಮನವಿಯನ್ನು ಕೊಡುತ್ತಿದ್ದೇನೆ. ವಿಶೇಷವಾಗಿ ದಕ್ಷಿಣ ಕನ್ನಡ ಜಿಲ್ಲೆ, ಕರಾವಳಿ ಜಿಲ್ಲೆಗಳಲ್ಲಿ ಬೃಹತ್ ಉದ್ಯಮಗಳ ಬಗ್ಗೆ, ಬೃಹತ್ ಯೋಜನೆಗಳ ಬಗ್ಗೆ ಆಕ್ರೋಶ ವ್ಯಕ್ತಪಡಿಸಿದ ಹಿನ್ನೆಲೆಯಲ್ಲಿ, ಮಾನ್ಯ ಮಧು ಗಾಡ್ಗಿಲ್‌ರ ನೇತೃತ್ವದಲ್ಲಿ ಒಂದು ಧಾರಣ ಶಕ್ತಿ ಅಧ್ಯಯನ ಸಮಿತಿ

ನೇಮಕ ಮಾಡಿ, ಅಧ್ಯಯನ ಆದ ನಂತರ ಬೃಹತ್ ಯೋಜನೆಗಳು ಹಾಗೂ ಬೃಹತ್ ಉದ್ದಿಮೆಗಳ ಅನುಷ್ಠಾನಕ್ಕೆ ಮಂಜೂರಾತಿ ಕೊಡಲಾಗುವುದು ಎಂದು ಹಿಂದಿನ ಸರ್ಕಾರದ ಧೋರಣೆ ಇತ್ತು. ಈ ಧೋರಣೆ ಮಧ್ಯದಲ್ಲಿ ಕೂಡ ಇದನ್ನು ಮುಂದುವರಿಸುತ್ತೀರೋ ಹೇಗೆ ಎಂಬ ಬಗ್ಗೆ ಒಂದು ಸ್ಪಷ್ಟೀಕರಣ ಕೊಡಿ. ಎರಡನೆಯದಾಗಿ ಮಂಗಳೂರಿನಲ್ಲಿ ಒಂದು ಸಾವಿರ ಮೆ.ವ್ಯಾ ವಿದ್ಯುತ್ ಯೋಜನೆ ಮಂಜೂರಾತಿ ಕೊಡಲಾಗುವುದು ಎಂದು ಹೇಳಿ ಮಾನ್ಯ ಮುಖ್ಯಮಂತ್ರಿಗಳು ಹೇಳಿದ್ದಾರೆ. ಅದು ವಿಶೇಷ ಕಂಪನಿ ಅಥವಾ ಸ್ವದೇಶಿ ಕಂಪನಿಗೆ, ಯಾವ ಕಂಪನಿಗೆ ಯಾವ ರೀತಿ ಮಂಜೂರಾತಿ ಕೊಟ್ಟಿದ್ದೀರಿ ಎಂದು ಹೇಳಬೇಕೆಂದು ನಾನು ತಮ್ಮಲ್ಲಿ ಕೇಳುತ್ತಿದ್ದೇನೆ.

ಒಬ್ಬ ಸದಸ್ಯರು : ಸನ್ಮಾನ್ಯ ಅಧ್ಯಕ್ಷರೆ, ಉತ್ತರಕರ್ನಾಟಕದ ಭಾಗಕ್ಕೆ ಬಹಳ ಅನ್ಯಾಯವಾಗಿದೆ ಎಂದು ನಮ್ಮ ಕೂಗು ಇದೆ. ಮಾನ್ಯ ಮುಖ್ಯಮಂತ್ರಿಗಳ ಉತ್ತರದಲ್ಲಿ ಈ ವಿಚಾರ ಏನೂ ಬಂದಿಲ್ಲ. ಇನ್ನೊಂದು ಪ್ರಶ್ನೆ, ಹೊಸ ಜಿಲ್ಲೆಗಳನ್ನು ರಚನೆ ಮಾಡಿದ ನಮ್ಮ ಮಾನ್ಯ ಜೆ.ಹೆಚ್.ಪಟೇಲರನ್ನು ಸ್ವಾಗತಿಸಬೇಕಾಗುತ್ತದೆ. ಆ ಜಿಲ್ಲೆಗಳಿಗೆ ಮೂಲಭೂತ ಸೌಲಭ್ಯಗಳನ್ನು ಒದಗಿಸುವ ವ್ಯವಸ್ಥೆ ಬಗ್ಗೆ ಮಾನ್ಯ ರಾಜ್ಯಪಾಲರ ಭಾಷಣದಲ್ಲಿ ಯಾವ ವಿಚಾರವೂ ಇಲ್ಲ; ಮುಖ್ಯ ಮಂತ್ರಿಗಳ ಉತ್ತರದಲ್ಲೂ ಆ ವಿಚಾರ ಇಲ್ಲ. ಇದು ಬಹಳ ನೋವಿನ ಸಂಗತಿ. ಅತಿವೃಷ್ಟಿಯಿಂದ ಹಾನಿ ಏನಾಗಿದೆ, ಅಲ್ಲಿ ಯಾವ ಯಾವ ಜಿಲ್ಲೆಗೆ ಎಷ್ಟು ಹಣ ಕೊಡುತ್ತಿದ್ದೀರಿ? ನಮ್ಮ ನಾಯಕರಾದ ಪಿ.ಜಿ.ಆರ್.ಸಿಂಧ್ಯಾನವರು ಕೂಡ ಈ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ಅದಕ್ಕೆ ನಾನು ಉತ್ತರ ಬಯಸುತ್ತೇನೆ. ಈ ಮೂರು ಕ್ಲಾರಿಫಿಕೇಷನ್ಸ್‌ಗೆ ಉತ್ತರ ಕೊಡಬೇಕೆಂದು ಮಾನ್ಯ ಮುಖ್ಯಮಂತ್ರಿಗಳಲ್ಲಿ ನಾನು ಮನವಿ ಮಾಡಿಕೊಳ್ಳುತ್ತೇನೆ.

ಶ್ರೀ ವಿ. ಸೋಮಣ್ಣ (ಬಿನ್ನಿಪೇಟೆ) : ಅಧ್ಯಕ್ಷರೆ, ಸನ್ಮಾನ್ಯ ಮುಖ್ಯಮಂತ್ರಿಗಳು ಈ ರಾಜ್ಯದ ಬಗ್ಗೆ ತಮ್ಮದೇ ಆದ ಸಮಗ್ರವಾದ ಯೋಜನೆ ಮಾಡುತ್ತೇವೆ, ಈ ನಗರಕ್ಕೆ ಹೆಚ್ಚಿನ ಒತ್ತನ್ನು ಕೊಡುತ್ತೇವೆ ಎಂದು ಹೇಳಿದ್ದು, ನಾನು ಈ ನಗರದ ನಗರಪಾಲಿಕೆಯಲ್ಲಿ ಎರಡು ಬಾರಿ ಸದಸ್ಯನಾಗಿ, ಅಧ್ಯಕ್ಷನಾಗಿ ಅವರನ್ನು ಅಭಿನಂದಿಸುತ್ತೇನೆ. ಆದರೆ ಬೆಂಗಳೂರು ನಗರದಲ್ಲಿ ಇರತಕ್ಕಂತಹ ಅಧಿಕಾರಿಗಳನ್ನು ವರ್ಗಾವಣೆ ಮಾಡುತ್ತೇವೆಂದು ತಾವು ಕಠಿಣವಾದ ನಿಲುವನ್ನು ತೆಗೆದುಕೊಂಡಿದ್ದೀರಿ. ಅದು ಸ್ವಾಗತಾರ್ಹ. ಒಂದೇ ನಾಣ್ಯದ ಎರಡು ಮುಖಗಳಿರುವುದನ್ನು ತಾವು ಮನಗಾಣಬೇಕು. ಮಾನ್ಯ ಮುಖ್ಯಮಂತ್ರಿಗಳ ಮನೆಯಲ್ಲಿ ನಾನೂ ಕೂಡ ಒಬ್ಬ ಹತ್ತಿರದಿಂದ ನೋಡಿದವನೇ; ಒಂದು ಮುಖದ ಅಧಿಕಾರಿಗಳು ರಾಜ್ಯದ ಬಗ್ಗೆ, ನಗರದ ಬಗ್ಗೆ ಕಳಕಳಿ ಇರುವ ಅಧಿಕಾರಿಗಳು, ಎರಡನೆಯವರೂ ಇದ್ದಾರೆ. ಆದರೆ ಒಂದು ನೋವಿನ ಸಂಗತಿಯನ್ನು ನಾನು ನಿಮಗೆ ಹೇಳಬಯಸುತ್ತೇನೆ. ಮಾಜಿ ಮಂತ್ರಿಯಾದ ಹಾಗೂ ಹಾಲಿ ಶಾಸಕರಾದ ಶ್ರೀ ಚೌಡರೆಡ್ಡಿಯವರು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರಕ್ಕೆ ನಿನ್ನೆಯ ಬೆಳಿಗ್ಗೆ 10-45 ನಿಮಿಷಕ್ಕೆ ತಮ್ಮ ವಾಹನವನ್ನು ತಾವೇ ಚಾಲನೆ ಮಾಡಿಕೊಂಡು ಹೋಗಿದ್ದರು. ಆದರೆ ಅವರ ವಾಹನವನ್ನು ಬಿ.ಡಿ.ಎ.ನಲ್ಲಿ ಸಿಬ್ಬಂದಿಗಳು ತಡೆಗಟ್ಟಿ ಒಳಗಡೆ ಹೋಗುವುದಕ್ಕೆ ಬಿಟ್ಟಿಲ್ಲ. ಆಗ ತಮ್ಮ ಪರಿಚಯವನ್ನು ಅವರಿಗೆ ಹೇಳುತ್ತಾ ತಾವೊಬ್ಬ ಮಾಜಿ ಮಂತ್ರಿಯಾಗಿದ್ದು ಹಾಲಿ ಶಾಸಕನಾಗಿರುವುದಾಗಿಯೂ ಕೆಲವು ಕ್ಲಾರಿಫಿಕೇಷನ್ಸ್ ಕೇಳುವ ಸಲುವಾಗಿ ತಾವೊಬ್ಬರೇ ಬಂದಿರುವುದಾಗಿ ಹೇಳಿದರೂ ಕೂಡ ಒಳಗಡೆ ಅವರನ್ನು ಬಿಡದೇ ಬೇರೆ ಬೇರೆ ಏಜೆನ್ಸಿಗಳಿಂದ

ಬಂದಿದ್ದ ಕಾರುಗಳನ್ನು ಒಳಗಡೆ ಬಿಟ್ಟರೇ ಹೊರತು ಇವರ ಕಾರನ್ನು ಮಾತ್ರ ಒಳಗಡೆ ಬಿಟ್ಟಿಲ್ಲ. ಕಡೆಗೆ ಮಾನ್ಯ ಚೌಡರೆಡ್ಡಿಯವರು ತಮ್ಮ ಕಾರನ್ನು ದೂರದಲ್ಲೆಲ್ಲೋ ನಿಲ್ಲಿಸಿ ಅನಂತರ ಕಛೇರಿಯ ಒಳಗಡೆ ಹೋಗಿ ನೋಡಿಕೊಂಡು ಬಂದಿದ್ದಾರೆ. ಈ ಒಂದು ಹಿನ್ನೆಲೆಯಲ್ಲಿ ಮಾನ್ಯ ಮುಖ್ಯಮಂತ್ರಿಗಳಲ್ಲಿ ನನ್ನ ಮನವಿಯೇನೆಂದರೆ ಒಬ್ಬ ಶಾಸಕರು ಅಲ್ಲಿಗೆ ಕಾರ್ಯನಿಮಿತ್ತ ಹೋಗಿ ತಾನು ಇಂಥವನು ಎಂದು ಅವರಿಗೆ ಹೇಳಿದರೂ ಕೂಡ ಅವರನ್ನು ಒಳಗೆ ಬಿಡದೇ ವಾಪಸ್ಸು ಕಳುಹಿಸಿರುವ ಪ್ರವೃತ್ತಿ ಏನಿದೆ ಇಂಥದಕ್ಕೆ ತಾವು ಕಡಿವಾಣ ಹಾಕಬೇಕು. ಅಧಿಕಾರಿಗಳು ತಮ್ಮ ಗಮನಕ್ಕೆ ತರುವ ಎಲ್ಲಾ ವಾಸ್ತವಾಂಶಗಳು ಸರಿಯಾಗಿರುತ್ತದೆ ಎಂಬುದನ್ನು ತೀರ್ಮಾನ ಮಾಡುವುದನ್ನು ಮಾನ್ಯ ಮುಖ್ಯಮಂತ್ರಿಗಳಾದ ತಮಗೇ ಬಿಡುತ್ತೇವೆ. ಬೆಂಗಳೂರು ನಗರದಿಂದ ಗೆದ್ದು ಬಂದಿರುವ ಎಲ್ಲಾ 12 ಜನ ಶಾಸಕರುಗಳೂ ಕೂಡ ತಮ್ಮ ಎಲ್ಲಾ ಕಾರ್ಯಗಳಿಗೆ ಸಹಕಾರವನ್ನು ಕೊಡುತ್ತೇವೆ. ನೀವೂ ಕೂಡ ನಮ್ಮ ವಿಷಯಗಳ ಕಡೆಗೆ ಆದ್ಯತೆಯನ್ನು ಕೊಡಬೇಕೆಂದು ವಿನಂತಿಸುತ್ತೇನೆ. ಆದರೆ ಉದ್ಧಟತನದಿಂದ ಅಧಿಕಾರಿಗಳು ಎಲ್ಲಿ ವರ್ತಿಸುತ್ತಾರೋ ಅಂಥವುಗಳಿಗೆ ತಾವು ಕಡಿವಾಣ ಹಾಕಬೇಕು.

ಶ್ರೀ ಎಸ್.ಎಂ. ಕೃಷ್ಣ(ಮುಖ್ಯಮಂತ್ರಿಗಳು) : ಮಾನ್ಯ ಅಧ್ಯಕ್ಷರೆ, ಕೆಲವು ಮಹತ್ವದ ವಿಚಾರಗಳನ್ನು ನನ್ನ ಭಾಷಣದಲ್ಲಿ ಅಳವಡಿಸಲಿಲ್ಲ ಎನ್ನತಕ್ಕಂಥ ಮಾತುಗಳನ್ನು ಮಾನ್ಯ ವಿರೋಧ ಪಕ್ಷದ ನಾಯಕರು ಹೇಳಿದ್ದಾರೆ. ಪ್ರಾದೇಶಿಕ ಅಸಮತೋಲನದ ಬಗ್ಗೆ ನಮ್ಮ ನಿಲುವೇನು ಎನ್ನತಕ್ಕಂಥದ್ದರ ಬಗ್ಗೆ ಕೇಳಿದ್ದಾರೆ. ಈ ಪ್ರಾದೇಶಿಕ ಅಸಮತೋಲನದ ಬಗ್ಗೆ ಸರ್ಕಾರದ ನಿಲುವೇನು ಎನ್ನುವುದರ ಬಗ್ಗೆ ಮಾನ್ಯ ರಾಜ್ಯಪಾಲರ ಭಾಷಣದಲ್ಲಿ ಹೇಳಲಾಗಿದ್ದು ಈ ಸಂಬಂಧ ಅಪೆಕ್ಸ್ ಬಾಡಿಯೊಂದನ್ನು ನೇಮಕ ಮಾಡುವುದಾಗಿ ಸ್ಪಷ್ಟವಾಗಿ ನಮ್ಮ ನಿಲುವನ್ನು ಹೇಳಿರುವುದರಿಂದ ಮತ್ತೆ ನನ್ನ ಉತ್ತರದಲ್ಲಿ ಇದಕ್ಕೆ ಪೂರಕವಾಗಿ ಇನ್ನೇನು ಹೇಳುವುದು ಉಳಿದಿರಲಿಲ್ಲ. ನಾವು ಈಗ ಏನು ಹೇಳಿದ್ದೇವೆ ಅದನ್ನು ಜಾರಿಗೆ ತರಬೇಕಾದದು ನಮ್ಮ ದೃಷ್ಟಿಯಾಗಿದೆ.

"Never the less studies have been made to assess the indicators of development of these areas. These indicators are per capita income, educational status, as revealed in enrolments in primary school and adult literacy, basic health as indicated by life expectancy. We must actively work at improving the conditions of the citizens of less favoured areas and move together towards the coming century. An Apex Body will be constituted to evolve strategies and closely monitor the progress made by these regions." ಈಗಾಗಲೇ ನಾವು ನಮ್ಮ ಪ್ರಣಾಳಿಕೆಯಲ್ಲೂ ಕೂಡ ಈ ಪ್ರಾದೇಶಿಕ ಅಸಮತೋಲನದ ಬಗ್ಗೆ ನಿಲುವೇನು ಎಂಬುದರ ಬಗ್ಗೆ ಹೇಳಿಕೊಂಡೇ ಬಂದಿದ್ದೇವೆ. ಅದನ್ನು ನಾವು ಜಾರಿಗೊಳಿಸುತ್ತೇವೆ. ಪ್ರಾದೇಶಿಕ ಅಸಮತೋಲನವನ್ನು ತೆಗೆದುಹಾಕಬೇಕೆಂಬುದೇ ನಮ್ಮ ನಿಲುವಾಗಿದೆ. ಅದಕ್ಕೆ ಬೇಕಾಗಿರತಕ್ಕಂಥ ಎಲ್ಲಾ ಕಾರ್ಯಕ್ರಮಗಳನ್ನೂ ಕೂಡ ನಾವು ತೆಗೆದುಕೊಳ್ಳುತ್ತೇವೆ. ಮುಖ್ಯವಾಗಿ ಹೈಕೋರ್ಟ್ ಪೀಠ ಹುಬ್ಬಳ್ಳಿಯಲ್ಲಿ ಆಗಬೇಕೆಂದು ಅಲ್ಲಿಂದ ಅಭಿವ್ಯಕ್ತವಾಗಿರತಕ್ಕಂಥ

ಅಭಿಪ್ರಾಯವಾಗಿದೆ. ಈಗಾಗಲೇ ಈ ಅಭಿಪ್ರಾಯಕ್ಕೆ ನಾವು ಸ್ಪಂದಿಸಿದ್ದೇವೆ. ಈಗಾಗಲೇ ಅದರ ಬಗ್ಗೆ ಹೈಕೋರ್ಟ್ ಉಚ್ಛ ನ್ಯಾಯಾಧೀಶರಾದ ಚೀಫ್ ಜಸ್ಟಿಸ್‌ರವರು ಒಂದು ಕಮಿಟಿಯನ್ನು ಮಾಡಿದ್ದಾರೆ. ಅತಿ ಶೀಘ್ರದಲ್ಲಿಯೇ ನಮ್ಮ ಸಂದಸದೀಯ ವ್ಯವಹಾರ ಮತ್ತು ಕಾನೂನು ಮಂತ್ರಿಗಳು ಉಚ್ಛ ನ್ಯಾಯಾಧೀಶರನ್ನು ಭೇಟಿ ಮಾಡಿ ಇದರ ಬಗ್ಗೆ ಏನು ಮಾಡಬೇಕು ಎನ್ನತಕ್ಕಂಥದ್ದರ ಬಗ್ಗೆ ವಿಚಾರ ಮಾಡಿ ಅದನ್ನು ಗಮನದಲ್ಲಿ ಇಟ್ಟುಕೊಳ್ಳುತ್ತೇವೆ. ಈ ಸದನದಲ್ಲಿ ಇದಕ್ಕೆ ಒಮ್ಮತದ ಏಕಾಭಿಪ್ರಾಯವಿದೆ. ಅದೇನೆಂದರೆ, ಹೈಕೋರ್ಟ್ ಪೀಠ ಹುಬ್ಬಳ್ಳಿಯಲ್ಲಿ ಆಗಬೇಕೆಂಬುದೇ ಆಗಿದೆ.

ಶ್ರೀ ಮಾಲೀಕಯ್ಯ ವಿ. ಗುತ್ತೇದಾರ್: ಗುಲ್ಬರ್ಗಾದಲ್ಲೂ ಆಗಬೇಕೆಂದು ಇದೆ.

ಶ್ರೀ ಎಸ್.ಎಂ. ಕೃಷ್ಣಾ : ಗುಲ್ಬರ್ಗಾ ಬಗ್ಗೆಯೂ ಹೇಳಲಾಗಿದೆ. ಆದರೆ ಅವರು ಏನು ತೀರ್ಮಾನ ಮಾಡುತ್ತಾರೆ ನೋಡಬೇಕು. ಅಂತೂ ಯಾವ ಭಾಗಕ್ಕೆ ಹೋದರೂ ಕೂಡ ಅಸಮತೋಲನ ಸರಿಹೋಯಿತು ಎಂಬತಕ್ಕಂಥದ್ದೇ ಮುಖ್ಯ ದೃಷ್ಟಿಯಾಗಿದೆ. ಆ ದೃಷ್ಟಿಯಲ್ಲಿ ನಾನು ಇದಕ್ಕೆ ಸ್ಪಂಧಿಸುತ್ತೇನೆ ಹೊರತು ಗುಲ್ಬರ್ಗಾ ಕಡಿಮೆ, ಹುಬ್ಬಳ್ಳಿ-ಧಾರವಾಡ ಹೆಚ್ಚು ಎಂದು ನಾನು ತಿಳಿದುಕೊಂಡಿಲ್ಲ ಮತ್ತು ಆ ರೀತಿಯಲ್ಲಿ ಭಾವಿಸುವುದೂ ಇಲ್ಲ. ಇನ್ನು ಮಾನ್ಯ ಸಿಂಧ್ಯಾರವರು ಮಾತನಾಡಿ ಮೂರು ಪ್ರಶ್ನೆಗಳನ್ನು ಹಾಕಿದ್ದಾರೆ. ಬಳ್ಳಾರಿ ಜಿಲ್ಲೆಗೆ ಸಂಬಂಧಪಟ್ಟಂತೆ ನೀವೇನು ಹೇಳಿದ್ದೀರಿ ಅದನ್ನು ಯಾವಾಗ ಜಾರಿಗೆ ತರುತ್ತೀರಿ ಹಾಗೂ ಇದಕ್ಕೆ ಬಜೆಟ್‌ನಲ್ಲಿ ಪ್ರಾವಿಷನ್ ಮಾಡಿದ್ದೀರಾ ಎಂದು ಮಾನ್ಯ ಸಿಂಧ್ಯಾರವರು ಕೇಳಿದ್ದಾರೆ. ಆದರೆ ನಾನು ಬಜೆಟ್ ಮಂಡನೆ ಮಾಡುವುದು ಫೆಬ್ರವರಿಯಲ್ಲಿ; ಆ ಫೆಬ್ರವರಿ ಬಜೆಟ್ ಮಂಡನೆವರೆಗೆ ಅವರು ಕಾಯಬೇಕಾಗುತ್ತದೆ. ಆದರೆ ವಿಜಯನಗರ ಉಕ್ಕು ಕಾರ್ಖಾನೆ ಘಟಕಕ್ಕೆ ಏನು ಮಾಡಬೇಕಾಗಿದೆಯೇ ಅದಕ್ಕೆ ಎಲ್ಲಿಂದ ಫೈನಾನ್ಸ್‌ಸ್ ಮಾಡಬೇಕು ಎಂಬುದರ ಬಗ್ಗೆ we are tying up the finances. We have already taken 1,300 acres of land. ಇನ್ನು ಇದರ ಜೊತೆಗೆ 300 ಎಕರೆ ಭೂಮಿ ಬೇಕು ಎಂದು ಹೇಳುತ್ತಿದ್ದಾರೆ. ಮೊನ್ನೆ ನಾನು ಬಳ್ಳಾರಿಗೆ ಹೋಗಿದ್ದಾಗ ಆ ಪ್ರದೇಶಕ್ಕೂ ಕೂಡ ಭೇಟಿ ಕೊಟ್ಟು ಕರ್ನಾಟಕ ಪವರ್ ಕಾರ್ಪೊರೇಷನ್ ಅಧಿಕಾರಿಗಳ ಜೊತೆ ಮಾತನಾಡಿದ್ದೇನೆ. ಕೆ.ಪಿ.ಸಿ. ಬೋರ್ಡ್ ಮೀಟಿಂಗ್ 15ನೇ ತಾರೀಖು ಇದೆ. ಆಗ ಇದರ ಬಗ್ಗೆ ತೀರ್ಮಾನಗಳನ್ನು ನಾವು ತೆಗೆದುಕೊಳ್ಳುತ್ತೇವೆ. ಇನ್ನು ಮಳೆ ಹಾನಿಯಿಂದ ತೊಂದರೆಗೊಳಗಾದವರಿಗೆ ನೀವು ಎಷ್ಟು ಹಣವನ್ನು ಕೇಂದ್ರದಿಂದ ಕೇಳಿದ್ದೀರಿ ಎಂದು ಕೇಳಿದ್ದಾರೆ. ಈಗಾಗಲೇ ನಾವು 11 ಕೋಟಿ ರೂಪಾಯಿಗಳನ್ನು ಮಳೆ ಹಾನಿಯಾದ ಪ್ರದೇಶಗಳಿಗೆ ಹಣವನ್ನು ಬಿಡುಗಡೆ ಮಾಡಿದ್ದೇವೆ. ಕೇಂದ್ರ ಸರ್ಕಾರಕ್ಕೆ ನಾವು 200 ಕೋಟಿ ರೂಪಾಯಿಗಳನ್ನು ಕೋರಿ ಇದರ ಬಗ್ಗೆ ಒಂದು ಸಂಕ್ಷಿಪ್ತ ವರದಿಯನ್ನು ಕಳುಹಿಸಿಕೊಟ್ಟಿದ್ದೇವೆ. ದಿನಾಂಕ 16ನೇ ತಾರೀಖು ಕೇಂದ್ರ ಹಣಕಾಸು ಸಚಿವರು ಎಲ್ಲಾ ರಾಜ್ಯಗಳ ಮುಖ್ಯಮಂತ್ರಿಗಳ ಸಮ್ಮೇಳನವನ್ನು ಕರೆದಿದ್ದಾರೆ. ಅವೊತ್ತು ಸಾಯಂಕಾಲ ಕೇಂದ್ರ ಹಣಕಾಸು ಸಚಿವರನ್ನು ನಾನು ಭೇಟಿ ಮಾಡಿ ನಮ್ಮ ರಾಜ್ಯದ ಪರವಾಗಿ ಮಾತನಾಡಿ 200 ಕೋಟಿ ರೂಪಾಯಿಗಳಿಗೂ ಹೆಚ್ಚು ಹಣವನ್ನು ಬಿಡುಗಡೆ ಮಾಡುವಂತೆ ನಾನು ಅವರನ್ನು ಕೇಳಿಕೊಳ್ಳುತ್ತೇನೆ. ಇನ್ನು ಪಂಚಾಯತ್ ಚುನಾವಣೆಗಳ ಬಗ್ಗೆ ನಿಮ್ಮ ವಿಚಾರವೇನು ಎಂದು ಮಾನ್ಯ ಸಿಂಧ್ಯಾರವರು ಕೇಳಿದ್ದಾರೆ. ಈ ಪಂಚಾಯತ್ ಚುನಾವಣೆ ಬಗ್ಗೆ ಪ್ರಣಾಳಿಕೆಯಲ್ಲಿ

ಹೇಳಿರುವುದಕ್ಕಿಂತ ಇನ್ನೂ ಹೆಚ್ಚು ಹೇಳುವುದಕ್ಕೆ ಸಾಧ್ಯವಿಲ್ಲ. ಆದುದರಿಂದ, ಈ ಪ್ರಣಾಳಿಕೆಗೆ ನಾವು ಬದ್ಧರಾಗಿದ್ದೇವೆ. ಈ ಪ್ರಣಾಳಿಕೆ ಪ್ರಕಾರ ನಾವು ಕಾರ್ಯೋನ್ಮುಖರಾಗುತ್ತೇವೆ.

ಶ್ರೀ ಪಿ.ಜಿ.ಆರ್. ಸಿಂಧ್ಯಾ: ನಿಮ್ಮ ಪ್ರಣಾಳಿಕೆಯಲ್ಲಿ ಏನು ಹೇಳಿದ್ದೀರೋ ಅದನ್ನು ಕಾರ್ಯಗತ ಮಾಡುವುದಕ್ಕೆ ನಮ್ಮದೇನೂ ಆಕ್ಷೇಪವಿಲ್ಲ; ಜನಾದೇಶ ಆ ರೀತಿ ಇದೆ. ನಾನು ಕೇಳಿದ್ದೇನೆಂದರೆ ಈಗ ನಮ್ಮ ಈ ಸಭೆ ನಡೆಯುತ್ತಿದೆ, ಪ್ರಜಾತಂತ್ರ ವ್ಯವಸ್ಥೆಯಲ್ಲಿ ಎಷ್ಟರಮಟ್ಟಿಗೆ ವಿರೋಧ ಪಕ್ಷದವರ ಮತ್ತು ಬೇರೆಯವರ ಅಭಿಪ್ರಾಯವನ್ನು ತೆಗೆದುಕೊಂಡು ನೀವು ಅದನ್ನು ಅಳವಡಿಸಿಕೊಳ್ಳುವುದಕ್ಕೆ ಏನು ಪ್ರಯತ್ನ ಮಾಡುತ್ತೀರಾ ಎನ್ನುವುದು ಬೇರೆ ವಿಚಾರ. ಆದರೆ ನಮಗೂ ಕೂಡ ನಮ್ಮ ಅಭಿಪ್ರಾಯಗಳನ್ನು ಹೇಳುವುದಕ್ಕೆ ಹಕ್ಕಿದೆ. ಈಗ ತಾವು ಆರ್ಡಿನೆನ್ಸ್ ತಂದು ಕೆಲವೊಂದು ಬದಲಾವಣೆಗಳನ್ನು ಮಾಡಿ ಚುನಾವಣೆಯನ್ನು ನೀವು ಮಾಡಿಬಿಟ್ಟರೆ ನಾವು ಮತ್ತೆ ಈ ಸದನದಲ್ಲಿ ಸೇರತಕ್ಕಂಥಾದ್ದು ಜನವರಿ ಕೊನೆಯ ವಾರದಲ್ಲಿ ಅಥವಾ ಫೆಬ್ರವರಿಯಲ್ಲಿಯೇ. ಮಾನ್ಯ ಸಂಸದೀಯ ವ್ಯವಹಾರಗಳ ಸಚಿವರಾದ ಚಂದ್ರೇಗೌಡರು ಜನವರಿ ಮೊದಲ ವಾರದಲ್ಲಿ ಚುನಾವಣೆ ಮಾಡತಕ್ಕಂಥ ಸಂಭವವಿದೆ ಎನ್ನತಕ್ಕಂಥ ಮಾತನ್ನು ಹೇಳಿದ್ದಾರೆ. ಈ ರೀತಿಯಾದರೆ ಅಧಿವೇಶನದಲ್ಲಿ ಇದರ ಬಗ್ಗೆ ಚರ್ಚೆ ಮಾಡುವುದಕ್ಕೆ ಅವಕಾಶವೆಲ್ಲಿದೆ? ಒಂದು ಕಡೆ ಮಾನ್ಯ ಘೋರ್ಪಡೆಯವರು ಅನೇಕ ಸಂದರ್ಭಗಳಲ್ಲಿ ಈ ಚುನಾವಣೆ ಪಕ್ಷಾತೀತವಾಗಿರುತ್ತದೆ ಎಂದು ಹೇಳಿದ್ದಾರೆ. ಪಕ್ಷಾತೀತವಾಗಿಯೇ ಚುನಾವಣೆ ಮಾಡಿ, ಅದಕ್ಕೆ ನಮ್ಮ ಸ್ವಾಗತವಿದೆ. ಆದರೆ ನಮ್ಮ ಅಭಿಪ್ರಾಯವನ್ನೂ ಕೂಡ ನೀವು ಗಣನೆಗೆ ತೆಗೆದುಕೊಂಡು ನೀವು ಇದರ ಬಗ್ಗೆ ಬಿಲ್ ಇಂಟ್ರಡ್ಯೂಸ್ ಮಾಡಿ. ಇದರ ಬಗ್ಗೆ ಸದನದಲ್ಲಿ ಚರ್ಚೆಯಾಗಲಿ. ಅದನ್ನು ಬಿಟ್ಟು ಆರ್ಡಿನೆನ್ಸ್ ಮುಖಾಂತರ ಏಕೆ ಮಾಡುತ್ತೀರಿ ಎಂದೇ ನಾನು ಕೇಳಿದ್ದು.

ಶ್ರೀ ಕೆ. ಜಯಪ್ರಕಾಶ್ ಹೆಗಡೆ: ಇವೊತ್ತು ಒಂದೊಂದು ಗ್ರಾಮ ಪಂಚಾಯತಿಗೂ ಒಬ್ಬೊಬ್ಬ ಕಾರ್ಯದರ್ಶಿಯನ್ನು ಕೊಟ್ಟಿಲ್ಲ. ಮೂರ್ನಾಲ್ಕು ಗ್ರಾಮ ಪಂಚಾಯತಿಗಳನ್ನು ಒಳಗೊಂಡಂತೆ ಒಬ್ಬ ಕಾರ್ಯದರ್ಶಿಯನ್ನು ಕೊಟ್ಟಿರುವುದರಿಂದ ಇವರು ಒಂದು ಕಡೆ ಇದ್ದಾರೆ ಮತ್ತೊಂದು ಕಡೆ ಇರುವುದಕ್ಕೆ ಆಗದೇ ಎಲ್ಲಿಯೂ ಅವರು ಸರಿಯಾಗಿ ಸಿಗುತ್ತಿಲ್ಲ. ಈ ರೀತಿಯ ವ್ಯವಸ್ಥೆ ಇದೆ. ಇದಲ್ಲದೇ ಈಗ ಮತದಾರರ ಪರಿಷ್ಕರಣೆ ಕಾರ್ಯ ಕೂಡ ನಡೆಯುತ್ತಿದೆ. ಆ ಪ್ರಕ್ರಿಯೆ ಕೂಡ ಪ್ರಾರಂಭವಾಗಿರುವಾಗ ಇದರ ಮಧ್ಯದಲ್ಲಿಯೇ ಚುನಾವಣೆಯನ್ನು ಮಾಡುತ್ತೇವೆ ಎಂದು ತಾವು ಹೇಳುತ್ತಿದ್ದೀರಿ. ಇದನ್ನು ಮಾಡುವ ಮೊದಲು ಇದರ ಬಗ್ಗೆ ಚರ್ಚೆಯನ್ನು ಮಾಡಿದರೆ ಒಳ್ಳೆಯದಲ್ಲವೆ?

ಶ್ರೀ ಎಸ್.ಎಂ. ಕೃಷ್ಣ : ಮಾನ್ಯ ಅಧ್ಯಕ್ಷರೆ, ಈ ಗ್ರಾಮ ಪಂಚಾಯತಿ ಚುನಾವಣೆಗಳು ರಾಜ್ಯಾಂಗದ ಪ್ರಕಾರ 1998ರ ಡಿಸೆಂಬರ್‌ನಲ್ಲಿಯೇ ಆಗಬೇಕಾಗಿತ್ತು. ಆದರೆ ಏತಕ್ಕಾಗಿ ಈ ವರ್ಷದ ಡಿಸೆಂಬರ್‌ವರೆಗೂ ಚುನಾವಣೆ ಆಗದೇ ಮುಂದಕ್ಕೆ ಬಂತೋ ನನಗೆ ಗೊತ್ತಾಗಲಿಲ್ಲ.

SRI P.G.R. SINDHIA: We are very clear about it.

SRI S.M. KRISHNA: We are also very clearer about it.

SRI P.G.R. SINDHIA: Let us debate it. Why it should come in the form of an ordinance?

ಶ್ರೀ ಎಸ್.ಎಂ. ಕೃಷ್ಣ : ನಾವು ರಾಜ್ಯಾಂಗಕ್ಕೆ ಅಪಚಾರ ಮಾಡುವುದಿಲ್ಲ. ರಾಜ್ಯಾಂಗದ ತಿದ್ದುಪಡಿಯನ್ನು ಯಾವ ಉದ್ದೇಶಕ್ಕಾಗಿ ನಾವು ಮಾಡಿದೆವೋ ಅದಕ್ಕೆ ಬದ್ಧವಾಗಿ ನಡೆದುಕೊಳ್ಳಬೇಕಾಗುತ್ತದೆ.

SRI P.G.R. SINDHIA: This is a very important issue because it is covering 80% of the population of the State. ತಾವು ಸಾರ್ವಜನಿಕ ಜೀವನದಲ್ಲಿ 40 ವರ್ಷಗಳ ಅನುಭವವನ್ನು ಹೊಂದಿರುತ್ತೀರಿ. ಇದಲ್ಲದೇ ಸಂಸದೀಯ ವ್ಯವಹಾರಗಳ ಬಗ್ಗೆ ಹೆಚ್ಚಿನ ಪರಿಜ್ಞಾನವನ್ನು ಕೂಡ ಹೊಂದಿದವರಾಗಿರುತ್ತೀರಿ. You are honest enough. You might have talked as Congress President outside this House. But in this House, you are honest enough to admit.... ಈ ಬಗ್ಗೆ ಹಿಂದಿನ ಸರ್ಕಾರದಲ್ಲಿ ಆಗಿರುವಂತಹ ಕೆಲಸ ಒಳ್ಳೆಯದೆಂದು ತಾವು ಒಪ್ಪುತ್ತೀರಿ. ನಾವು ಎಷ್ಟು ಸಂಖ್ಯೆಯಲ್ಲಿ, ಎಷ್ಟು ಕಡೆಗಳಲ್ಲಿ ಇದ್ದೇವೆಂಬ ಅರಿವು ನಮಗಿದೆ. ನೀವು ಪಂಚಾಯತ್ ರಾಜ್ ಬಿಲ್ ಅನ್ನು ಇಲ್ಲಿ ಇಂಟ್ರಡ್ಯೂಸ್ ಮಾಡಿದ ತಕ್ಷಣವೇ ನಾವು ಹೇಳಿದ ಅಭಿಪ್ರಾಯವನ್ನೆಲ್ಲಾ ನೀವು ಇನ್‌ಕಾರ್ಪೊರೇಟ್ ಮಾಡುತ್ತೀರೆನ್ನುವಂಥಾದ್ದು ಇಲ್ಲ. ಈಗ ನೀವು ಅನುಭವಿ ಮಂತ್ರಿಗಳು, ನೀವು ಯಾವಾಗ ಚುನಾವಣೆಯನ್ನು ಮಾಡುತ್ತೀರೆಂಬುದು ನಮಗೆಲ್ಲಾ ಗೊತ್ತಿದೆ. But why it should come in the form of an ordinance? Let it be debated. We don't want a bad precedent to be created when you are the Chief Minister.

ಶ್ರೀ ಎಂ.ವೈ. ಘೋರ್ಪಡೆ: ಮಾನ್ಯ ಅಧ್ಯಕ್ಷರೆ, ಇವರು bad ಪ್ರಿಸಿಡೆಂಟ್ ಸ್ಟಾರ್ಟ್ ಮಾಡುವಂಥಾದ್ದು...

ಶ್ರೀ ಪಿ.ಜಿ.ಆರ್. ಸಿಂಧ್ಯ : ನಾವು ಮಾಡಿದ ತಪ್ಪನ್ನೇ ನೀವು ಮಾಡಬೇಕೆಂದು ಇದ್ದೀರಾ...

ಶ್ರೀ ಎಂ.ವೈ. ಘೋರ್ಪಡೆ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರು): ದಯಮಾಡಿ ಅದನ್ನು ನೀವು ಅರ್ಥ ಮಾಡಿಕೊಳ್ಳಬೇಕು. ನೀವು ಇಷ್ಟೆಲ್ಲಾ ಹೇಳಿದ ಮೇಲೆ ನಾನು ಉತ್ತರ ಹೇಳಬೇಕಲ್ಲಾ, ಈ ಪಂಚಾಯತ್ ಚುನಾವಣೆಗಳು ಕಾನ್‌ಸ್ಟಿಟ್ಯೂಷನ್ ಪ್ರಕಾರ ಲಾಸ್ಟ್ ಡಿಸೆಂಬರ್ ತಿಂಗಳಲ್ಲಿ ಆಗಬೇಕಾಗಿತ್ತು. ಅದು ರಾಜಕೀಯ ಕಾರಣಕ್ಕಾಗಿ ನಿಮಗೆ ಇದು ಬೇಕಾಗಿರಲಿಲ್ಲ. ಆದಕಾರಣ ನೀವು ಒಂದು ಆರ್ಡಿನೆನ್ಸ್ ತಂದಿರಿ, ಅದೇನೆಂದರೆ ಪಂಚಾಯತ್ ರಾಜ್ ಸಿಸ್ಟಂ ಒಪ್ಪುತ್ತೇವೆ. ಇಲ್ಲಿ 5,700 ಗ್ರಾಮ ಪಂಚಾಯತ್ ಇರುವಂಥಾದ್ದನ್ನು 2,700ಕ್ಕೆ ಇಳಿಸುತ್ತೇವೆಂದು ಹೇಳಿದ್ದೀರಿ. ಇದರಿಂದ ಸ್ಟ್ರಕ್ಚರ್ ಬದಲಾಗುತ್ತದೆ. ಆದಕಾರಣ ನಾವು ಪಂಚಾಯತ್ ಚುನಾವಣೆಗಳನ್ನು ಮಾಡುವುದಕ್ಕಾಗುವುದಿಲ್ಲವೆಂಬ ವಾದವನ್ನು ಮಂಡಿಸಿದ್ದೀರಿ. ಆಗ ನೀವು ಇದನ್ನು ನಮ್ಮ ಜೊತೆಯಲ್ಲಿ ಚರ್ಚೆ ಮಾಡಲಿಲ್ಲ. ಆಗ ನೀವು ಈ

ಬಿಲ್ ಸಭೆಯ ಮುಂದೆ ತಂದು ಚರ್ಚೆ ಮಾಡಬೇಕಾಗಿತ್ತು. ನಿಮಗೆ ಅದನ್ನು ತಪ್ಪಿಸುವಂತಹ ಅವಸರ ಎಷ್ಟು ಇತ್ತೆಂದರೆ ನೀವು ಅನಾವಶ್ಯಕವಾಗಿ ಆರ್ಡಿನೆನ್ಸ್ ಅನ್ನು ತಂದು ತಡೆಗಟ್ಟಿದಿರಿ. ಇದಕ್ಕೆ ಹೈಕೋರ್ಟ್‌ನವರು ಪಂಚಾಯತ್ ಚುನಾವಣೆಯನ್ನು ಮಾಡಬೇಕೆಂದು ತೀರ್ಪು ಕೊಟ್ಟರು. ಆದರೂ ನೀವು ಸುಪ್ರೀಂ ಕೋರ್ಟ್‌ಗೆ ಹೋಗಿ ಯಾವುದೋ ಕಾರಣಕ್ಕೆ ಸ್ಟೇ ತಂದು ನೀವು ಇಲ್ಲಿಯವರೆಗೂ ಚುನಾವಣೆಗಳನ್ನು ಮುಂದಕ್ಕೆ ಹಾಕಿಕೊಂಡು ಬಂದಿದ್ದೀರಿ. ನೀವು ಒಂಭತ್ತು ತಿಂಗಳು ಕಾನ್‌ಸ್ಟಿಟ್ಯೂಷನ್‌ಗೆ ಅಪಚಾರ ಮಾಡಿದ್ದೀರಿ. ಮಾನ್ಯ ಮುಖ್ಯಮಂತ್ರಿಯವರು ಹೇಳಿದ ಹಾಗೆ ನಾವು ಚುನಾವಣೆಗೆ ಹೋದಂತಹ ಸಂದರ್ಭದಲ್ಲಿ ನಾವು ಅಧಿಕಾರಕ್ಕೆ ಬಂದರೆ 1993ನೇ ಜನವರಿ ಆ್ಯಕ್ಟ್ ಪ್ರಕಾರ ಯಾವ ವ್ಯವಸ್ಥೆ ಇದೆಯೋ ಅದೇ ವ್ಯವಸ್ಥೆಯನ್ನು ವಾಪಸ್ಸು ಜಾರಿಗೆ ತರುತ್ತೇವೆಂದು ಜನತೆಗೆ ಹೇಳಿದ್ದೇವೆ. ನಾವು 5,700 ಗ್ರಾಮ ಪಂಚಾಯತ್‌ಗಳ ಚುನಾವಣೆಯನ್ನು ನಡೆಸುತ್ತೇವೆ, ತಾವು ಹೇಳುವಂತೆ 2,700ಕ್ಕೆ ಮಾತ್ರ ಅಲ್ಲ. ನಾವು ಈ ವಿಚಾರವನ್ನು ಎಲ್ಲಾ ಡೆಪ್ಯೂಟಿ ಕಮೀಷನರ್‌ಗಳಿಗೂ ತಿಳಿಸಿದ್ದೇವೆ. ನೀವು ಮಾಡಿದ ಕಾನೂನಿನ ಪ್ರಕಾರ ಯಾವ ಕ್ರಮವನ್ನು ಮಾಡುವುದಕ್ಕೆ ಹೋಗಬೇಡಿ, ಇದು ವ್ಯತಿರಿಕ್ತವಾಗಿದೆ. ಆದಕಾರಣ 1993ರ ಆ್ಯಕ್ಟ್ ಪ್ರಕಾರ ಚುನಾವಣೆಗಳನ್ನು ಮಾಡುತ್ತೇವೆಂದು ಅವರಿಗೆ ಹೇಳಿದ್ದೇವೆ. ಈಗ ಚುನಾವಣೆಗಳನ್ನು ಜನವರಿ ತಿಂಗಳಲ್ಲಿ ಮಾಡುವುದಕ್ಕಾದರೆ ಸಂತೋಷ, ಇದಕ್ಕೂ ಮುಂಚೆ ಮಾಡುವುದಕ್ಕಾಗುವುದಿಲ್ಲ., ಇದಕ್ಕೆ ಟೈಮ್ ಬೇಕಾಗುತ್ತದೆ. ನಮ್ಮ ಲೆಕ್ಕದ ಪ್ರಕಾರ ಜನವರಿ ತಿಂಗಳಲ್ಲಿ ಈ ಗ್ರಾಮ ಪಂಚಾಯತ್ ಚುನಾವಣೆಗಳನ್ನು ಮಾಡುವುದಕ್ಕೆ ಸಾಧ್ಯವಾಗಬಹುದು. ಇದಕ್ಕೆ ಕಾನೂನಿನ ಪ್ರಕಾರ ಏನೇನು ಸ್ಟೆಪ್ ತೆಗೆದುಕೊಳ್ಳಬೇಕಾಗುತ್ತದೆ ಅದನ್ನು ಮುಚ್ಚುಮರೆಯಿಂದ ತೆಗೆದುಕೊಳ್ಳುವುದಕ್ಕಾಗುವುದಿಲ್ಲ. ನಾವು ಒಂದು ವೇಳೆ ಏನಾದರೂ ಆರ್ಡಿನೆನ್ಸ್ ತಂದೆವು ಎಂದು ಇಟ್ಟುಕೊಳ್ಳಿ, ಇದನ್ನು ಯಾವಾಗ ತರಬೇಕು, ಯಾವ ರೀತಿಯಲ್ಲಿ ತರಬೇಕೆಂಬ ಬಗ್ಗೆ ನಿಮಗೆ ಎಷ್ಟು ಗೊತ್ತಿದೆಯೋ, ನಮಗೂ ಅಷ್ಟೇ ಗೊತ್ತಿದೆ. ನಾವು ಕಾನೂನು ಪ್ರಕಾರ ಆರ್ಡಿನೆನ್ಸ್ ತರಬೇಕೆಂದು ಆದರೂ ಕೂಡ ಆ ಆರ್ಡಿನೆನ್ಸ್ ಡಿಸ್‌ಕಷನ್ ಆಗಿ ಕಾನೂನು ಆಗಬೇಕೆಂದರೆ ಅದು ಈ ಸಭೆಯ ಮುಂದೆ ಬರುತ್ತದೆ. ಇಲ್ಲಿ ನಮ್ಮ ಉದ್ದೇಶವೇನೆಂದರೆ ನಿಮ್ಮ ಹಾಗೆ ಯಾವುದೋ ಒಂದು ಕಾನೂನನ್ನು ಉಪಯೋಗಿಸಿ ಚುನಾವಣೆಗಳನ್ನು ಮುಂದಕ್ಕೆ ಹಾಕುವಂಥಾದ್ದು ನಮ್ಮ ಉದ್ದೇಶವಲ್ಲ. ನಾವು ಕಾನೂನು ಪ್ರಕಾರ ಆದಷ್ಟು ಬೇಗ ಗ್ರಾಮ ಪಂಚಾಯತ್ ಚುನಾವಣೆಗಳನ್ನು ಮಾಡಿ ಮುಗಿಸುತ್ತೇವೆ. ಇನ್ನು ತಾಲ್ಲೂಕು ಪಂಚಾಯತ್ ಮತ್ತು ಜಿಲ್ಲಾ ಪಂಚಾಯತ್‌ಗಳ ಚುನಾವಣೆಗಳು ಏಪ್ರಿಲ್ ತಿಂಗಳಲ್ಲಿ ಮಾಡಲೇ ಬೇಕು, ಏಕೆಂದರೆ ಇವರ ಅವಧಿ ಮೇ ತಿಂಗಳಲ್ಲಿ ಮುಗಿಸುತ್ತದೆ. ನಾವು ಈ ಚುನಾವಣೆಗಳನ್ನು ಏಪ್ರಿಲ್ ತಿಂಗಳಲ್ಲಿ ಮಾಡದಿದ್ದರೆ ಮತ್ತೆ ನಿಮ್ಮ ಹಾಗೆ ನಾವು ರಾಜ್ಯಾಂಗಕ್ಕೆ ಅಪಚಾರ ಮಾಡಿದಂತೆ ಆಗುತ್ತದೆ. ನಾನು ಈ ಸಂದರ್ಭದಲ್ಲಿ ಹೇಳುವಂಥಾದ್ದು ಏನೆಂದರೆ ಕಾನ್‌ಸ್ಟಿಟ್ಯೂಷನ್‌ಗೆ ನೀವು ಏನು ಅಪಚಾರ ಮಾಡುವಂತಹ ಪ್ರಯತ್ನ ಮಾಡಿದ್ದೀರಿ ಅದನ್ನು ನಾವು ಕಾನೂನು ಪ್ರಕಾರ ರದ್ದು ಮಾಡಿ, ಜನರು ನಮಗೆ ಯಾವ ಆಧಾರದ ಮೇಲೆ ಓಟು ಕೊಟ್ಟಿದ್ದಾರೆ ಅದಕ್ಕೆ ನಾವು ವಿಶ್ವಾಸಘಾತ ಮಾಡುವುದಿಲ್ಲವೆಂದು ಹೇಳುತ್ತೇವೆ. ಇವತ್ತು ಮಾನ್ಯ ಮುಖ್ಯಮಂತ್ರಿಯವರು ತಮ್ಮ ಭಾಷಣದಲ್ಲಿ ಮುಖ್ಯವಾದಂತಹ ಒಂದು ಮಾತನ್ನು ಹೇಳಿದ್ದಾರೆ. ಈಗ ಪಂಚಾಯತ್‌ಗಳಿಗೆ ಒಂದು ಲಕ್ಷ ರೂಪಾಯಿಗಳು ಎಂದು ಏನಿದೆ, ಅದನ್ನು ಎರಡು ಲಕ್ಷ ರೂಪಾಯಿಗಳಿಗೆ ಹೆಚ್ಚು ಮಾಡುತ್ತೇವೆಂದು ಹೇಳಿದ್ದಾರೆ. ನೀವು 'ವಯಬಿಲಿಟಿ' ಇಂತಹ ಇಂಗ್ಲೀಷ್

ಪದಗಳನ್ನು ಉಪಯೋಗಿಸಿ ಕನ್‌ಫೂಜನ್ ಕ್ರಿಯೇಟ್ ಮಾಡುವಂತಹ ಪ್ರಯತ್ನವನ್ನು ಮಾಡಿದ್ದೀರಿ. ಈ ಕನ್‌ಫ್ಯೂಜನ್ ಎಲ್ಲವನ್ನು ನಾವು ಕಿತ್ತು ಹಾಕುತ್ತೇವೆ. ನಾವು ಚರ್ಚೆಗೆ ಹೆದರುವವರಲ್ಲ, ನಾವು ಕಾನೂನನ್ನು ಬಿಟ್ಟು ಯಾವ ಕ್ರಮವನ್ನು ತೆಗೆದುಕೊಳ್ಳುವುದಿಲ್ಲ. ನಾವು ಒಂದು ವೇಳೆ ಆರ್ಡಿನೆನ್ಸ್ ಮಾಡಿದರೂ ಕೂಡ ಅದು ಕಾನೂನು ಆಗುವಾಗ ಇದರ ಬಗ್ಗೆ ಇಲ್ಲಿ ಸಂಪೂರ್ಣವಾಗಿ ಚರ್ಚೆ ಮಾಡುವುದಕ್ಕೆ ಮತ್ತು ಕೌನ್ಸಿಲ್‌ನಲ್ಲೂ ಚರ್ಚೆ ಮಾಡುವುದಕ್ಕೆ ಅವಕಾಶವಿರುತ್ತದೆ. ಆಗ ಪ್ರಜಾಪ್ರಭುತ್ವ ತತ್ವಕ್ಕೆ ಯಾವುದೇ ಧಕ್ಕೆ ಬರುವುದಿಲ್ಲ.

ಶ್ರೀ ಪಿ.ಜಿ.ಆರ್. ಸಿಂಧ್ಯ: ಮಾನ್ಯ ಅಧ್ಯಕ್ಷರೆ, ಇದು ಬಹಳ ಮಹತ್ವವಾದಂತಹ ವಿಚಾರವಾಗಿದೆ. ನಾವು ಯಾವುದೇ ವಿಧವಾದಂತಹ confusion ಕ್ರಿಯೇಟ್ ಮಾಡುವುದಕ್ಕೆ ಪ್ರಯತ್ನ ಮಾಡಿಲ್ಲ. We honestly and genuinely feel.. 5,700 ಪಂಚಾಯತ್‌ಗಳು ಏನಿವೆ, ಅದನ್ನು 2,500 ದಿಂದ 3,000ವರೆಗೆ ಮಾಡಬೇಕೆಂಬ ಬಗ್ಗೆ ನಾವು ಮಾನ್ಯ ಮುಖ್ಯಮಂತ್ರಿಯವರಿಗೆ ಇದರ ಬಗ್ಗೆ ನಾವು ಏನು ನಿರೀಕ್ಷೆ ಮಾಡಿದ್ದೆವು ಎಂದು ಹೇಳುವುದಕ್ಕೆ ಈಗ ಸಮಯವಿಲ್ಲ. ಈಗ ಹೊಸ ಸದಸ್ಯರು ಮಾತನಾಡಬೇಕೆಂದು ಹೇಳುತ್ತಿದ್ದಾರೆ, ಮತ್ತೆ ಕೆಲವರು ಕ್ಲಾರಿಫಿಕೇಷನ್ ಕೇಳಬೇಕೆಂದು ಹೇಳುತ್ತಿದ್ದಾರೆ, ಮತ್ತೆ ಇವರು ಎಕ್ಸ್‌ಪೆಂಡಿಚರ್ ಮಾಡಬೇಕೆಂಬ ದೃಷ್ಟಿಯಿಂದ ಕೆಲವು ವಿಚಾರಗಳನ್ನು ಹೇಳಿದರು. ಈ ರೀತಿಯಾಗಿ there are so many implications in that. ನಾವು ಆರ್ಡಿನೆನ್ಸ್ ತಂದಮೇಲೆ ಚುನಾವಣೆಯನ್ನು ಮಾಡುವುದಕ್ಕೆ ಹೋಗಲಿಲ್ಲ. ಅದನ್ನು ಸಭೆಯ ಮುಂದೆ ತಂದು ಅದು ಪಾಸ್ ಆದಮೇಲೆ ಚುನಾವಣೆಯನ್ನು ಮಾಡುವಂಥಾದ್ದು. ಆದರೆ ತಾವು ಈಗ ಏನು ಮಾಡುತ್ತಿದ್ದೀರಾ? ನೀವು ಇದನ್ನು ಉದ್ದೇಶಪೂರ್ವಕವಾಗಿ ಮಾಡುತ್ತಿದ್ದೀರೆಂದು ನಾನು ಹೇಳುತ್ತಾ ಇಲ್ಲ. ಈಗ ಸಮಯ ಯಾವ ರೀತಿಯಾಗಿ ಬಂದಿದೆ ಎಂದರೆ ಇನ್ನು ಕಾನ್‌ಸ್ಟಿಟ್ಯೂಷನ್ ಪ್ರಕಾರ ಮಾಡಲೇ ಬೇಕು. ಈ ಚುನಾವಣೆಗಳನ್ನು ಜನವರಿ ತಿಂಗಳಲ್ಲಿ ಮುಗಿಸಬೇಕಾಗುತ್ತದೆ. ನಮ್ಮ ಒಪಿನಿಯನ್ ಡೆಮಾಕ್ರಸಿಯ ಪರವಾಗಿಯೇ ಹೋಗಬೇಕು, ಯಾವುದೇ ಕನ್‌ಫ್ಯೂಜನ್ ಕ್ರಿಯೇಟ್ ಮಾಡುವುದಕ್ಕೆ ನಾವು ತಯಾರಿಲ್ಲ. ನಾವು ಕಾನ್‌ಸ್ಟಿಟ್ಯೂಷನ್ ಅನ್ನು ಪಾವಿತ್ರತೆಯಿಂದ ನೋಡುತ್ತೇವೆನ್ನುವಂತಹ ದೃಷ್ಟಿಕೋನವನ್ನು ಇಟ್ಟುಕೊಂಡಿರುವವರು. ಆದುದರಿಂದ ನೀವು ಇದಕ್ಕಾಗಿ ಡಿಸೆಂಬರ್ ತಿಂಗಳಲ್ಲಿ ಅಧಿವೇಶನವನ್ನು ಕರೆಯಿರಿ. ಆಗ ನೀವು ನಮ್ಮ ಅಭಿಪ್ರಾಯಗಳನ್ನು ತೆಗೆದುಕೊಳ್ಳಿ. ನೀವು ಪಕ್ಷಾತೀತವಾಗಿ ತಾನೇ ಚುನಾವಣೆಯನ್ನು ಮಾಡುವಂಥಾದ್ದು ಇದಕ್ಕೆ ನೀವು ಏಕೆ ಆರ್ಡಿನೆನ್ಸ್ ಮೇಲೆ ತರಬೇಕೆನ್ನುತ್ತಿದ್ದೀರಿ? ನೀವು ನಮ್ಮ ಮಾತನ್ನು ಕೇಳದೆ ಇರಬಹುದು, ಅಥವಾ ನಿಮ್ಮ ಮೊಂಡುತನ ಅಥವಾ ಇನ್ನೇನಾದರೂ ಇಟ್ಟುಕೊಳ್ಳಿ. ನೀವು ನಮ್ಮನ್ನು ಕೇಳದೇ ನಾವು ಮಾಡಿದ್ದೇ ಮಾಡುವುದು ಎಂದು ಹೇಳಿಕೊಂಡು ಹೋದರೆ ನಮ್ಮದು ಏನು ತಕರಾರು ಇಲ್ಲ. ಆದರೆ ನಾನು ಹೇಳುವಂಥಾದ್ದು ನಾವು ಇದನ್ನು ಯಾವ ರೀತಿಯಲ್ಲಿ ರಾಜ್ಯಾಂಗಬದ್ಧವಾಗಿ ಯಾವ್ಯಾವ ವೇದಿಕೆಯನ್ನು ಉಪಯೋಗಿಸಿಕೊಂಡು ಮಾಡಿದ್ದೇವೆ ಅದನ್ನೇ ಉಪಯೋಗಿಸಬೇಕಾಗುತ್ತದೆನ್ನುವಂಥಾದ್ದನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ.

ಶ್ರೀ ಬಿ.ಸೋಮಶೇಖರ್: ಮಾನ್ಯ ಅಧ್ಯಕ್ಷರೆ, ನಾವು ತಂದಂತಹ ತಿದ್ದುಪಡಿ ಉದ್ದೇಶಪೂರ್ವಕವಾಗಿ ತಂದದ್ದಲ್ಲ. ನಮ್ಮ ಕರ್ನಾಟಕ ರಾಜ್ಯದಲ್ಲಿ ನಾವು ಎರಡು, ಮೂರು

ಪ್ರಯೋಗಗಳನ್ನು ನೋಡಿದ್ದೇವೆ. ಮೊದಲನೆಯದಾಗಿ 1986ರಿಂದ 1991ರವರೆಗೆ ಮಂಡಲ್ ಪಂಚಾಯತ್‌ನಲ್ಲಿ ಒಂದು ಪ್ರಯೋಗವಾಗಿದೆ, ಎರಡನೆಯದಾಗಿ 1991ರಿಂದ ಗ್ರಾಮ ಪಂಚಾಯತ್ ಮೇಲೆ 5,700 ಗ್ರಾಮ ಪಂಚಾಯತ್‌ಗಳನ್ನು ಮಾಡಿದೆ. ಈ ಎರಡು ಪ್ರಯೋಗಗಳನ್ನು ನೋಡಿ ವಯಬಲ್ ಆಗುವಂತಹದನ್ನು ನೋಡಿ ಹಿಂದಿನ ವ್ಯವಸ್ಥೆಯೇ ಚೆನ್ನಾಗಿದೆ ಎನ್ನುವಂತಹ ಸದುದ್ದೇಶದಿಂದ ತಂದಂತಹ ತಿದ್ದುಪಡಿಯೇ ಹೊರತು ಮತ್ತೇನೂ ಅಲ್ಲ. ಈಗ ಅದರ ಬಗ್ಗೆ ನೀವು ತರುತ್ತೀರಿ, ನಾವು ಅದನ್ನು ವಿರೋಧ ಮಾಡಬೇಕೆಂದು ಅಲ್ಲ. ಈಗ ಮೆರಿಟ್ ಏನು, ಡಿ-ಮೆರಿಟ್ ಏನು ಎನ್ನುವಂಥಾದ್ದು ಚರ್ಚೆಯಾಗುತ್ತಿದೆ. ನೀವು ನಮ್ಮನ್ನು ಕನ್ವೀನಿಯನ್ಸ್ ಮಾಡಿ, ನಾವು ನಿಮಗೆ ಮಾಡುತ್ತೇವೆ. ಏಕೆಂದರೆ ಈ ಎರಡು ಸಾರ್ವಜನಿಕವಾಗಿ ನಡೆಯಬೇಕಾದರೆ ಯಾವುದು ಒಳ್ಳೆಯ ವ್ಯವಸ್ಥೆ ಎಂಬ ಬಗ್ಗೆ ಚರ್ಚೆ ಮಾಡಬೇಕೆಂದು ಹೇಳುತ್ತಿದ್ದೇವೆ. ನಾವು ಏನು ಇಡೀ ಕೇಂದ್ರ ಪಾರ್ಲಿಮೆಂಟ್‌ನ ಅವಧಿ ವಿಸ್ತರಣೆ ಮಾಡಿ ತಿದ್ದುಪಡಿ ತರುವಂತಹ ಕೆಲಸವನ್ನು ನಮ್ಮ ನಾಯಕರು ಯಾರು ಮಾಡಲಿಲ್ಲ. ಕೇಂದ್ರದಲ್ಲಿ ಪಾರ್ಲಿಮೆಂಟ್ ವ್ಯವಸ್ಥೆಯನ್ನು ಐದು ವರ್ಷದಿಂದ ಆರು ವರ್ಷಕ್ಕೆ ಮುಂದುವರಿಸಬೇಕೆಂಬ ಪಕ್ಷ ನಮ್ಮದಲ್ಲ.

ಶ್ರೀ ಎಂ.ಪೈ.ಘೋರ್ಪಡೆ: ಮಾನ್ಯ ಅಧ್ಯಕ್ಷರೆ, ನಾನು ಈ ಬಗ್ಗೆ ಸಂಕ್ಷಿಪ್ತವಾಗಿ ಹೇಳುವುದಾದರೆ ಅವರು ಕೂಡ ಆರ್ಡಿನೆನ್ಸ್ ತರದೆ ಇಲ್ಲಿ ಚರ್ಚೆ ಮಾಡಬಹುದಾಗಿತ್ತಲ್ಲಾ, ಆಗ ಅವರಿಗೆ ಚರ್ಚೆ ಮಾಡುವ ಅವಶ್ಯಕತೆ ಇರಲಿಲ್ಲ, ಈಗ ಅದರ ಅವಶ್ಯಕತೆ ಇದೆ. ಈಗ ಈ ಸಭೆಗೆ ಇನ್ನೊಂದು ವಿಚಾರವನ್ನು ಹೇಳುವುದೇನೆಂದರೆ ವಯಾಬಿಲಿಟಿ ವಿಷಯದ ಬಗ್ಗೆ ಹೇಳುತ್ತೇನೆ. ಈ ನಂಬರ್‌ಗಳನ್ನು ಜಾಸ್ತಿ ಮಾಡುವಂಥಾದ್ದು ಕಡಿಮೆ ಮಾಡುವಂಥಾದ್ದು ಇದರ ಬಗ್ಗೆ ಸಮಗ್ರವಾಗಿ ಚರ್ಚೆಯಾಯಿತು. ಆಗ ಎಲ್ಲಾ ವಿರೋಧಪಕ್ಷದ ನಾಯಕರನ್ನು ಬರಮಾಡಿಕೊಂಡು ಈ ಸಭೆಯಲ್ಲೆ ನಿಮ್ಮ ಸರ್ಕಾರವೂ ತೀರ್ಮಾನಕ್ಕೆ ಬಂತು. ಅದನ್ನು ತಾವು ಮರೆಯಬಾರದು, ಹಳೆಯ ವ್ಯವಸ್ಥೆ ಸರಿಯಾಗಿದೆ. ಅದನ್ನು ಕಡಿಮೆ ಮಾಡಿದರೆ ವೀಕರ್ ಸೆಕ್ಷನ್‌ಗೆ ಅನ್ಯಾಯವಾಗುತ್ತದೆ. ಈ 5,600 ಗ್ರಾಮ ಪಂಚಾಯತ್‌ನಲ್ಲಿ 80,000 ಜನ ಎಸ್.ಸಿ,ಎಸ್.ಟಿ, ಒ.ಬಿ.ಸಿ, ಹೆಣ್ಣು ಮಕ್ಕಳು ಚುನಾಯಿತರಾಗಿ ಬಂದಿದ್ದಾರೆ. ನಾವು ಇದನ್ನು ಅರ್ಧಂಬರ್ಧ ಮಾಡಿದರೆ ಆ ಜನರಿಗೆ ಪ್ರಜಾಪ್ರಭುತ್ವದಲ್ಲಿ ಅವಕಾಶ ಕಡಿಮೆ ಮಾಡಿದ ಹಾಗೆ ಆಗುತ್ತದೆ. ಅದನ್ನು ಮಾಡಬಾರದೆಂದು ಎಲ್ಲಾ ಪಕ್ಷವೂ ಆ ಒಂದು ತೀರ್ಮಾನಕ್ಕೆ ಬಂತು. ಆ ಸಭೆಯಲ್ಲಿ ಒಂದು ತೀರ್ಮಾನವನ್ನು ತೆಗೆದುಕೊಂಡು ಅನಂತರ ನಮಗೆ ಮೋಸ ಮಾಡಿ ನೀವು ಆರ್ಡಿನೆನ್ಸ್ ತಂದಿರೆಲ್ಲಾ, ಇದು ನಿಮ್ಮ ಸರ್ಕಾರಕ್ಕೆ ಶೋಭೆಯನ್ನು ತಂದಿತೆ? ಈ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳಾಗಿದ್ದ ಜೆ.ಹೆಚ್.ಪಟೇಲರನ್ನು ಕೇಳಿ, ಮಂತ್ರಿಗಳಾಗಿದ್ದ ಎಂ.ಪಿ.ಪ್ರಕಾಶ್‌ರವರನ್ನು ಕೇಳಿ. ನಮ್ಮ ಅಭಿಪ್ರಾಯಗಳನ್ನು ತೆಗೆದುಕೊಂಡ ನಂತರ, ಇದಕ್ಕೆ ನಾವು ಒಪ್ಪುವುದಕ್ಕೆ ಹೋಗಬಾರದು ಎನ್ನುವ ತೀರ್ಮಾನಕ್ಕೆ ಬಂದನಂತರ ಏಕಾಏಕಿಯಾಗಿ ನೀವು ಆರ್ಡಿನೆನ್ಸ್ ಅನ್ನು ತಂದಿರಲ್ಲಾ, ಇದು ಯಾವ ಕನ್ವೆನ್‌ಷನ್, ಯಾವ ಕಾನೂನು ಆಧಾರದ ಮೇಲೆ ಮಾಡಿದಿರಿ? ಒಂದು ಕಾನೂನು ಇಲ್ಲ, ಕನ್ವೆನ್‌ಷನ್ನು ಇಲ್ಲ, ಎರಡನ್ನು ನೀವು ಧಿಕ್ಕರಿಸಿ ಮಾಡಿದ್ದನ್ನು ನಾವು ಆದಷ್ಟು ಬೇಗ ಸರಿಪಡಿಸುತ್ತೇವೆ, ಅದರಲ್ಲಿ ಏನು ನಿಮಗೆ ಅನುಮಾನ ಬೇಡ.

ಶ್ರೀ ಎಸ್.ಎಂ.ಕೃಷ್ಣ (ಮಾನ್ಯ ಮುಖ್ಯಮಂತ್ರಿಗಳು): ಯಾರಿಗೂ ನಾವು ಅಪಚಾರ ಮಾಡಬೇಕೆನ್ನುವ ಉದ್ದೇಶ ನಮಗಿಲ್ಲ. ನಾವು ಯಾವ ಸಾಮಾಜಿಕ ನ್ಯಾಯದ ಚೌಕಟ್ಟಿನಲ್ಲಿ ಕೆಲಸ ಮಾಡುತ್ತಿದ್ದೇವೆ, ಆ ಸಾಮಾಜಿಕ ನ್ಯಾಯದ ಚೌಕಟ್ಟಿಗೆ ಯಾರು ನಮಗೆ ಆಶ್ರಯವನ್ನು ಕೊಟ್ಟಿದ್ದಾರೆ ಆ ಜನಗಳಿಗೆ ನ್ಯಾಯವನ್ನು ಒದಗಿಸುವ ದೀಕ್ಷೆಯನ್ನು ತೊಟ್ಟಿರುವುದರಿಂದ ಇದರ ಬಗ್ಗೆ ನಮ್ಮ ಅನಿಸಿಕೆಗಳನ್ನು ನಮ್ಮ ಪಂಚಾಯತ್ ರಾಜ್ ಸಚಿವರು ಸ್ಪಷ್ಟಪಡಿಸಿದ್ದಾರೆ; ಅದಕ್ಕೆ ನಾನು ಸೇರಿಸುವುದು ಏನೂ ಇಲ್ಲ. It was bad to distort the Constitution taking an execuse. Then, when once the High Court directed the state government to hold elections, we go to the Supreme Court in appeal against that decision of the High Court, which this government is not going to do. They can go. They have gone, but we shall not go. We will not resort to that. We are very clear about it. ಮಾನ್ಯ ಸೋಮಶೇಖರ್‌ರವರು ಇಲ್ಲಿ ಕೆಲವು ಪ್ರಬುದ್ಧವಾದ ವಿಚಾರಗಳನ್ನು ಪ್ರಸ್ತಾಪ ಮಾಡಿದ್ದಾರೆ. ಒಂದು, ಅವರು ಕಂದಾಯ ಇಲಾಖೆಯಲ್ಲಿ ಗಣಕೀಕರಣ, ನೆಟ್‌ವರ್ಕಿಂಗ್ ಮುಂತಾದ ಪ್ರಗತಿಪರವಾದ ಕೆಲಸಗಳನ್ನು ಅಳವಡಿಸಿದ್ದಾರೆ. ಆ ಪ್ರಗತಿಪರ ಸ್ಟೆಪ್ಸ್‌ನಿಂದ ಏನು ಸುಧಾರಣೆಯನ್ನು ಕಂದಾಯ ಇಲಾಖೆಯಲ್ಲಿ ತರಬಹುದೋ ಅದನ್ನು ತೋರಿಸಿಕೊಟ್ಟಿದ್ದಾರೆ, ನಾನು ಅದಕ್ಕಾಗಿ ಅವರಿಗೆ ಧನ್ಯವಾದಗಳನ್ನು ಸಲ್ಲಿಸುತ್ತೇನೆ. ಈ ಗಂಗಾ ಕಲ್ಯಾಣ ಯೋಜನೆಯಲ್ಲಿ 2,500 ನೀರಾವರಿ ಯೋಜನೆಗಳಿಗೆ ವಿದ್ಯುತ್ ಒದಗಿಸಬೇಕೆಂದು ಸರ್ಕಾರವನ್ನು ಕೇಳಲಾಗಿದೆ, ಅದಕ್ಕೂ ಕೂಡ ಜೂನ್ 2000 ನೇ ಇಸವಿಯೊಳಗೆ ವಿದ್ಯುತ್ ಸಂಪರ್ಕವನ್ನು ಒದಗಿಸುವುದಕ್ಕೆ ನಿರ್ದೇಶನವನ್ನು ವಿದ್ಯುತ್‌ಚ್ಛಕ್ತಿ ಮಂಡಳಿಗೆ ಕೊಡುತ್ತಿದ್ದೇವೆ ಎನ್ನುವ ಮಾತನ್ನು ನಾನು ಹೇಳುತ್ತಿದ್ದೇನೆ; ಮತ್ತೆ ಮಾನ್ಯ ಬೈರೇಗೌಡರು ಮುಖ್ಯಮಂತ್ರಿಗಳು ಹೊಸದನ್ನೇನನ್ನು ಹೇಳಲಿಲ್ಲ, ಹೊಸದೇನು ಇದರಲ್ಲಿ ಕಾಣಲಿಲ್ಲವೆಂದು ಹೇಳಿದರು. ನನಗೂ ವಯಸ್ಸಾಯಿತು, ಮತ್ತೆ ಹೊಸದೇನನ್ನು ಹೇಳುವುದಕ್ಕೆ ನನ್ನಿಂದ ಸಾಧ್ಯವಿಲ್ಲ. ಆದುದರಿಂದ ಮಾನ್ಯ ಬೈರೇಗೌಡರು ನನ್ನಿಂದ ಹೊಸದನ್ನು ಅಪೇಕ್ಷೆ ಪಟ್ಟರೆ ಶಾಶ್ವತವಾದ ನಿರಾಶೆಯಲ್ಲೇ ಅವರು ಇರಬೇಕಾಗುತ್ತದೆ. ಆದುದರಿಂದ ನಾನು ಹೊಸದೇನನ್ನು ಮಾಡುವುದಕ್ಕೆ ಬರುವುದಿಲ್ಲ. ಕೈಗಾರಿಕೆಗಳಿಗೆ ಅವರು ಇನ್ನು ಹೆಚ್ಚು ಕೊಡುತ್ತಲೇ ಇದ್ದಾರೆಂದು ಹೇಳಿದರು. ನಾನು ಹೇಳಿದ್ದು, ಯಾರೊ ಒಬ್ಬರು ಕೈಗಾರಿಕೋದ್ಯಮಿಯನ್ನು ನಾವು ನೋಡಬೇಕು. Bangalore is the capital of information technology in this country. It is known as the Silicon Valley of India. ಕೆಲವು ಪ್ರಚಾರಗಳು ನಡೆದವು, ವ್ಯವಸ್ಥಿತವಾದ ಪಿತೂರಿಗಳು ನಡೆದವು, ಅದೇನೆಂದರೆ, there is a flight of capital to some other destination, Bangalore is being relegated as second class city because of infrastructural difficulties and because of various other constraints. It is in that context I said even before I became Chief Minister. If they give me hundred reasons, why I should not go to xyz? I will give them thousand reasons why I should go to xyz. ಹಾಗೆಂದ ಮಾತ್ರಕ್ಕೆ ನಾನು ರೈತರ ಹತ್ತಿರಕ್ಕೆ ಹೋಗಲಿಲ್ಲ ಎಂದು ಅರ್ಥವಲ್ಲ. ನಾನು

ಹುಟ್ಟಿರುವುದೇ ರೈತರ ಕುಟುಂಬದಲ್ಲಿ, ಬೆಳೆದಿರತಕ್ಕಂಥದ್ದೇ ರೈತರ ಮಧ್ಯೆ, ಮುಂದೆ ಸಾಯುವುದು ಕೂಡ ರೈತರ ಮಧ್ಯೆ. ಆದುದರಿಂದ ಮಾನ್ಯ ಬೈರೇಗೌಡರಿಗೆ ಆ ರೀತಿಯ ಅನುಮಾನ ಬೇಕಾಗಿಲ್ಲ, ನಾನು ರೈತರನ್ನು ಕಡೆಗಾಣಿಸಿ ಕೈಗಾರಿಕೋದ್ಯಮಿಗಳನ್ನು ಒಪ್ಪಿಕೊಳ್ಳುವುದಿಲ್ಲ. ಆದರೆ ರಾಜ್ಯದ ಹಿತದೃಷ್ಟಿಯಿಂದ, ಕೈಗಾರಿಕೆಗಳಿಗೂ ಒಂದು ಸ್ಥಾನವಿದೆ, ರೈತರಿಗೂ ಒಂದು ಸ್ಥಾನವಿದೆ; ಇವತ್ತು ರೈತರಿಂದಲೇ ನನ್ನ ಉತ್ತರವನ್ನು ಆರಂಭ ಮಾಡಿದೆ, ಆ ರೈತರಿಂದಲೇ ನನ್ನ ಉತ್ತರವನ್ನು ಮುಗಿಸುತ್ತಿದ್ದೇನೆ. ನಿಮಗೆ ಅನುಮಾನ ಬೇಡವೆಂದು ನಾವು ಸಂಪೂರ್ಣವಾದ ಭರವಸೆಯನ್ನು ಈ ನಿಟ್ಟಿನಲ್ಲಿ ತಮಗೆ ಕೊಡುತ್ತಿದ್ದೇವೆ; ಇನ್ನು ನೀವು ಡಬ್ಲ್ಯೂಟಿಓ ಬಗ್ಗೆ ಪ್ರಸ್ತಾಪಿಸಿದಿರಿ, ಅದು ದೊಡ್ಡ ವಿಚಾರ. ಅದನ್ನು ನೀವು ಹಿಂದೆ ವಿರೋಧಿಸಿದಿರಿ, ಆಗ ವಿರೋಧಿಸಿದವರೆಲ್ಲಾ ಈಗ ಒಪ್ಪಿಕೊಂಡು ಅದರ ಚೌಕಟ್ಟಿನೊಳಗೆ ಸೇರಿಕೊಂಡಿದ್ದಾರೆ. ಕಳೆದ ಏಳೆಂಟು ವರ್ಷಗಳಲ್ಲಿ ನಮ್ಮ ದೇಶದಲ್ಲಾಗಿರುವ ಒಂದು ದೊಡ್ಡ ಮಾನಸಿಕ ಪರಿವರ್ತನೆಯ ಬಗ್ಗೆ ವಿಚಾರ ಮಾಡಿದಾಗ ನಮ್ಮ ನಿನ್ನೆಯ ಸಿದ್ಧಾಂತಗಳು, ನಿಲುವುಗಳು ಇವತ್ತಿಗೆ ಅಪ್ರಸ್ತುತವಾಗಿವೆ ಅಥವಾ ಇವತ್ತಿನ ನಿಲುವುಗಳು ನಾಳೆಗೆ ಅಪ್ರಸ್ತುತವಾಗಬಹುದು ಎನ್ನುವ ಭಯದಲ್ಲೇ ನಾವು ಮುಂದುವರೆಯಬೇಕಾಗುತ್ತದೆ. WTO opens up vast areas for public discussion where there could be honest differences of opinion. So, knowing the limitations of that as a Chief Minister, knowing the limitations of this august House as Legislative Assembly, we will have to proceed further. As and when things come up we will have to address ourselves to those conditions and situations. ನಾವು ಇನ್ನೂ ಕೂಡ ಬಚಾವತ್(ಎ) ಸ್ಕೀಂನಲ್ಲೇ ಇದ್ದೇವೆ, (ಬಿ) ಸ್ಕೀಂನ ಬಗ್ಗೆ ಬಹಿರಂಗವಾಗಿ ಹೇಳಿಕೆಗಳನ್ನು ಕೊಡುವುದರಿಂದ ಬಹುಶಃ ಈಗಾಗಲೇ ಸುಪ್ರೀಂ ಕೋರ್ಟ್‌ನಲ್ಲಿ ನಮ್ಮ ಕ್ರೆಸ್ಟ್-ಗೇಟ್ ವಿಚಾರದಲ್ಲಿ ಈ ತಿಂಗಳ 30 ರಂದು ಆರ್ಗ್ಯೂಮೆಂಟ್ ಆರಂಭವಾಗುತ್ತದೆ. ಆದುದರಿಂದ, ನಮ್ಮ ನೀರಾವರಿ ಸಚಿವರಿಗೆ ಮನವಿ ಮಾಡಿಕೊಳ್ಳುತ್ತೇನೆ, ವಿರೋಧಪಕ್ಷದ ಎಲ್ಲಾ ನಾಯಕರನ್ನು ಆಹ್ವಾನ ಮಾಡಿ ಇದರ ಬಗ್ಗೆ ಒಟ್ಟಾರೆ ನಿಲುವನ್ನು ನಾವು ತೆಗೆದುಕೊಳ್ಳಲು ನಿಮ್ಮ ಮಾರ್ಗದರ್ಶನವನ್ನು ನಾನು ಪಡೆಯುತ್ತೇನೆ ಎಂದು ಹೇಳಿ ಆ ವಿಚಾರವನ್ನು ಅಲ್ಲಿಗೆ ಬಿಡುತ್ತೇನೆ. ಮಾನ್ಯ ಸದಸ್ಯರಾದ ಸದಾನಂದಗೌಡರು ಹಾಗೂ ಮಾನ್ಯ ಜಯಪ್ರಕಾಶ ಹೆಗ್ಡೆಯವರು ಮಾನ್ಯ ಅಧ್ಯಕ್ಷರ ಗಮನವನ್ನು ಸೆಳೆಯುವುದಕ್ಕೆ ಪ್ರಯತ್ನಪಟ್ಟರು, ಆದರೂ ತಾವು ಏನನ್ನು ಹೇಳಬೇಕೆಂದು ಇದ್ದಿರೆನ್ನುವುದನ್ನು ನಾನು ಊಹಿಸಬಲ್ಲೆ.

ಶ್ರೀ.ಜಯಪ್ರಕಾಶ್ ಹೆಗ್ಡೆ: ವರಾಹಿ ಯೋಜನೆ ನೀರಿನ ವಿಸ್ತರಣೆಯನ್ನು ತಡೆಗಟ್ಟುವುದರ ಕುರಿತಾಗಿದೆ.

ಶ್ರೀ.ಎಸ್.ಎಂ.ಕೃಷ್ಣ : ಇದು ಮಾನ್ಯ ರಾಜ್ಯಪಾಲರ ಭಾಷಣದ ಮೇಲೆ ಚರ್ಚೆಯೇ ಹೊರತು ಆಯವ್ಯಯದ ಮೇಲಿನ ಚರ್ಚೆಯಲ್ಲ. ಉದಾಹರಣೆಗೆ ನೀವು ಈಗ ಕೋಸ್ಟಲ್ ಡೆವಲಪ್‌ಮೆಂಟ್ ವಿಚಾರದ ಬಗ್ಗೆ ಹೇಳಲಿಲ್ಲವೆಂದು ಹೇಳಿದಿರಿ. ಈ ವಿಚಾರ ಮಾನ್ಯ ಸದಾನಂದಗೌಡರು ಎತ್ತಿರತಕ್ಕಂಥದ್ದು, I think, that is a very legitimate point. ಈ ಕೋಸ್ಟಲ್ ಡೆವಲಪ್‌ಮೆಂಟ್‌ಗೆ ಈಗಾಗಲೇ ಸುಮಾರು 500 ಕೋಟಿ ರೂಪಾಯಿಗಳ

ಯೋಜನೆಯನ್ನು ಎಡಿಬಿ ಸಹಾಯಕ್ಕೆ ಹಿಂದೆ ತಯಾರು ಮಾಡಲಾಗಿದೆ. ಅದನ್ನು ಕಾರ್ಯಗತ ಮಾಡುವುದಕ್ಕೆ ಬೇಕಾದ ಕ್ರಮಗಳನ್ನು ಜರುಗಿಸುತ್ತೇವೆ ಎನ್ನುವ ಮಾತನ್ನು ಕೋಸ್ಟಲ್ ಡೆವಲಪ್‌ಮೆಂಟ್ ವಿಚಾರದಲ್ಲಿ ಹೇಳಬೇಕಾಗುತ್ತದೆ. ಇನ್ನು ಕಾನೂನು ಸುವ್ಯವಸ್ಥೆಗೆ ಪಾಲಿಸಿ ಏನು ಬೇಕು.? Law and order will be maintained at all costs. That is the policy of this Government. We will not compromise on that. Do you want to add something to that policy?

ಶ್ರೀ ಡಿ.ವಿ. ಸದಾನಂದಗೌಡ: ಸರಿಯಾಗಿ ಈ ಯೋಜನೆಗಳು ಇಂಪ್ಲಿಮೆಂಟ್ ಆಗುತ್ತಿಲ್ಲ ಎನ್ನುವ ಬಗ್ಗೆ ತಾವು ಅರುಣ್ ಶೌರಿಯವರ ಲೇಖನದ ಭಾಗವನ್ನು ಓದಿದಿರಿ. ಹಿಂದಿನ ಸರ್ಕಾರಗಳು ಏನೆಲ್ಲಾ ಮಾಡಿವೆ, ಅದನ್ನು ಇಂಪ್ಲಿಮೆಂಟ್ ಮಾಡಿಲ್ಲ ಎನ್ನುವ ಬಗ್ಗೆ ಹೇಳಿದಿರಿ. ತಮ್ಮ ಸರ್ಕಾರ ಅದರ ಬಗ್ಗೆ ಹೆಚ್ಚು ಒತ್ತು ಕೊಡುವುದರಲ್ಲಿ ತಮ್ಮ ದೃಷ್ಟಿಕೋನ ಏನು ಎನ್ನುವುದನ್ನು ಹೇಳಬೇಕು.

SRI S.M. KRISHNA: Law and order maintenance is a State subject and this government is committed to maintain law and order, peace and tranquillity. I would invite and request the Opposition's cooperation in maintaining the law and order in the State. That is the policy. Whenever I make a request that doesn't mean that you have not been cooperating with us. It is only to reassure myself that I am going to get continued cooperation from the Opposition benches. ಮಾನ್ಯ ಚೌಡರೆಡ್ಡಿಯವರೇ, ನಿಮ್ಮ ವಿಷಯಕ್ಕೆ ಬರಬೇಕು ಎಂದು ಇದ್ದೆ. ನಿಮ್ಮ ವಿಚಾರವನ್ನು ಮಾನ್ಯ ಸೋಮಣ್ಣನವರು ಕೊನೆಯಲ್ಲಿ ಪ್ರಸ್ತಾಪ ಮಾಡಿದರು. ಆದ್ದರಿಂದ ಕೊನೆಯಲ್ಲಿ ಅದನ್ನು ಹೇಳಿ ಮುಗಿಸಬೇಕು ಎಂದು ನಾನು ಪ್ರಯತ್ನ ಮಾಡುತ್ತಿದ್ದೆ. ಮಾನ್ಯ ಚೌಡರೆಡ್ಡಿಯವರು ನಿನ್ನೆ ಬಿ.ಡಿ.ಎ.ಗೆ ಹೋಗಿದ್ದರು. ಆಗ ಅವರ ಕಾರನ್ನು ಒಳಗೆ ಬಿಡಲಿಲ್ಲ ಎಂದು ಒಂದು ದೂರು ಬಂದಿದೆ. ಅದರ ಬಗ್ಗೆ ನಾನು ವಿಚಾರಣೆ ಮಾಡುತ್ತೇನೆ. ಎಲ್ಲೆಲ್ಲಿ ಸಾರ್ವಜನಿಕ ಕಛೇರಿಗಳಿವೆ ಅಲ್ಲಿರತಕ್ಕ ಅಧಿಕಾರಿಗಳಿಗೆ ಒಂದು ಜನರಲ್ ಇನ್‌ಸ್ಟ್ರಕ್ಷನ್ ಕೊಟ್ಟು ಅದನ್ನು ಫಾಲೋ ಮಾಡಬೇಕು ಎಂದು ಹೇಳುತ್ತೇವೆ. ಈ ಶಾಸನಸಭಾ ಸದಸ್ಯರ ಕಾರುಗಳು ಮತ್ತು ಶಾಸನಸಭಾ ಸದಸ್ಯರು ಹೋಗುವಾಗ ಅವರಿಗೆ ಹೆಚ್ಚು ಮರ್ಯಾದೆಯನ್ನು ಕೊಟ್ಟು ಅವರನ್ನು ರಿಸೀವ್ ಮಾಡಬೇಕು, ಅವರಿಗೆ ಸೌಜನ್ಯವನ್ನು ತೋರಿಸಬೇಕು. ಇದರ ಬಗ್ಗೆ ನಾವು ಯಾವ ವ್ಯತ್ಯಾಸಗಳನ್ನೂ ಮಾಡುವುದಿಲ್ಲ. ಇದರ ಬಗ್ಗೆ ನಾವು ಸೂಕ್ತ ಕ್ರಮಗಳನ್ನು ತೆಗೆದುಕೊಳ್ಳುತ್ತೇವೆ. ತಮಗೆ ಆಗಿರತಕ್ಕಂಥ ನೋವನ್ನು ನಾನು ಅರ್ಥಮಾಡಿಕೊಳ್ಳಬಲ್ಲೆ. ಅದರ ಬಗ್ಗೆ ನಾವು ಎನ್‌ಕ್ವೈರಿ ಮಾಡಿ ಸಂಬಂಧಪಟ್ಟವರಿಗೆ ಸರಿಯಾಗಿ ಬುದ್ಧಿವಾದ ಹೇಳುತ್ತೇವೆ. ಇನ್ನು ಅನುದಾನದ ವಿಚಾರ. ಅನುದಾನ, ಸಂಪನ್ಮೂಲಗಳು ಬಹಳ ಕಷ್ಟ ಇದೆ. ಆಗಬೇಕಾದಂಥ ಅಭಿವೃದ್ಧಿ ಕೆಲಸಕಾರ್ಯಗಳು ಬಹಳ ಇವೆ. ಮಾನ್ಯ ಅಧ್ಯಕ್ಷರೇ, ತಾವೂ ಕೂಡ ಪ್ರಸ್ತಾಪ ಮಾಡಿದ್ದೀರಿ, ವಿರೋಧ ಪಕ್ಷದ ನಾಯಕರೂ ಪ್ರಸ್ತಾಪ ಮಾಡಿದ್ದಾರೆ. ಹೈದರಾಬಾದ್

ಡೆವೆಲಪ್‌ಮೆಂಟ್ ಬೋರ್ಡಿಗೆ ಹಿಂದಿನ ಸರ್ಕಾರದವರು ಪ್ರತಿಯೊಬ್ಬ ಸದಸ್ಯರಿಗೆ ಇಷ್ಟು ಎನ್ನತಕ್ಕಂಥ ನಿಗದಿತವಾದ ಒಂದು ಅನುದಾನವನ್ನು ಕೊಡುತ್ತಿದ್ದರು. ಇವೆಲ್ಲವನ್ನೂ ಗಮನದಲ್ಲಿಟ್ಟುಕೊಂಡು, ಫೆಬ್ರವರಿ ತಿಂಗಳಲ್ಲಿ ನಾವು ಬಜೆಟ್ಟನ್ನು ಈ ಸದನದಲ್ಲಿ ಮಂಡಿಸತಕ್ಕಂಥ ಕಾಲದಲ್ಲಿ ಇದರ ಬಗ್ಗೆ ಸರ್ಕಾರ ತನ್ನ ನಿಲುವನ್ನು ತೆಗೆದುಕೊಳ್ಳುತ್ತದೆ ಎಂದು ತಮ್ಮಲ್ಲಿ ವಿನಂತಿಸಿಕೊಂಡು,....

ಶ್ರೀ ಕೆ. ಶ್ರೀನಿವಾಸಗೌಡ : ಮಾನ್ಯ ಕೆ.ಇ.ಬಿ. ಮೀಟರನ್ನು ಅಳವಡಿಸುವ ಬಗ್ಗೆ ಸ್ಪಷ್ಟೀಕರಣ ಕೊಡಿ ಎಂದು ಕೇಳಿದ್ದೆ. ಮತ್ತು ಕೆರೆಗಳಿಂದ ಹೂಳು ಎತ್ತಲು ಎಷ್ಟು ಹಣ ಕೊಡುತ್ತೀರಿ ಎಂದೂ ಕೇಳಿದ್ದೆ.

ಶ್ರೀ ಎಸ್.ಎಂ. ಕೃಷ್ಣ : ಕೆರೆಗಳ ಹೂಳನ್ನು ಎತ್ತಿಸಬೇಕು ಎನ್ನುವುದು ಜನರಲ್ ಪ್ರಿನ್ಸಿಪಲ್. ಆ ಪ್ರಿನ್ಸಿಪಲ್ ಅನ್ನು ಹೇಗೆ ಇಂಪ್ಲಿಮೆಂಟ್ ಮಾಡಬೇಕು ಎನ್ನುವುದಕ್ಕೆ you will have to wait for my budget proposals.

ಅದಕ್ಕೆ ಎಷ್ಟು ಹಣ ಇಡುತ್ತೇವೆ ಎನ್ನತಕ್ಕಂಥಾದ್ದನ್ನು ಆದರಲ್ಲಿ ನಾವು ನಮೂದು ಮಾಡುತ್ತೇವೆ. ಕೆ.ಇ.ಬಿ. ಮೀಟರ್‌ಗಳ ಅಳವಡಿಕೆ ವಿಚಾರದಲ್ಲಿ ನಾವು ಕರ್ನಾಟಕ ವಿದ್ಯುತ್ ಪ್ರಸರಣ ನಿಗಮದವರ ಜೊತೆಯಲ್ಲಿ ಚರ್ಚೆ ಮಾಡಿ ಮಾಡುತ್ತೇವೆ. ಈಗ ರೆಗ್ಯುಲೇಟರಿ ಆಪರೇಟೀವ್ಸ್ ಕೂಡ ಜಾರಿಗೆ ಬಂದಿದೆ. ನಾವು ಯೋಚನೆ ಮಾಡಿ, ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಯ ಆರೋಗ್ಯವನ್ನು ಉತ್ತಮಪಡಿಸುವಲ್ಲಿ ಕೆಲವು ನಿರ್ಣಯಗಳನ್ನು ತೆಗೆದುಕೊಳ್ಳಬೇಕಾಗಬಹುದು. ಆ ನಿರ್ಣಯಗಳು ಏನು ಎನ್ನುವುದನ್ನು ಮುಂದಿನ ದಿನಗಳಲ್ಲಿ ನಾವು ಸ್ಪಷ್ಟಪಡಿಸುತ್ತೇವೆ. ಇಷ್ಟು ಸಮಾದಾನದಿಂದ, ಔದಾರ್ಯದಿಂದ ಈಗ ನಾನು ಹೇಳಿದಂಥ ನಾಲ್ಕು ಮಾತುಗಳನ್ನು ಕೇಳಿದ್ದಕ್ಕೋಸ್ಕರ ತಮಗೆ ಮತ್ತು ಈ ಸದನಕ್ಕೆ ನನ್ನ ಅಭಾರಿಗಳನ್ನು ಸಮರ್ಪಣೆ ಮಾಡಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಅಧ್ಯಕ್ಷರು: ಮಾನ್ಯ ರಾಜ್ಯಪಾಲರು ಮಾಡಿದ ಭಾಷಣಕ್ಕೆ ವಂದನೆಯನ್ನು ಸಲ್ಲಿಸುವ ಪ್ರಸ್ತಾವಕ್ಕೆ ಶ್ರೀಯುತರುಗಳಾದ ಪಿ.ಜಿ.ಆರ್.ಸಿಂಧ್ಯ, ಸಿ.ಬೈರೇಗೌಡ, ಉಮೇಶ್‌ಕತ್ತಿ, ಬಿ.ಸೋಮಶೇಖರ್ ಮತ್ತು ಬಚ್ಚೇಗೌಡರು ತಿದ್ದುಪಡಿ ಕೊಟ್ಟಿದ್ದಾರೆ. ಮಾನ್ಯ ಬೈರೇಗೌಡರೆ, ಈಗ ಇದೇನು ಅಂಥ ಅವಶ್ಯಕತೆಯಿಲ್ಲ ಎಂದು ಕಾಣುತ್ತದೆ.

ಶ್ರೀ ಡಿ.ಬಿ. ಚಂದ್ರೇಗೌಡ : ಅದಕ್ಕೆ ಸಾಕಷ್ಟು ಉತ್ತರವನ್ನು ಕೊಟ್ಟಿದ್ದಾರೆ. ತಾವು ಕೊಟ್ಟಿರತಕ್ಕಂಥ ತಿದ್ದುಪಡಿಯ ಬಗ್ಗೆ ಮಾನ್ಯ ಸಭಾನಾಯಕರು ಸಾಕಷ್ಟು ಬೆಳಕನ್ನು ಚೆಲ್ಲಿದ್ದಾರೆ. ಅದರ ಅಗತ್ಯವಿಲ್ಲ ಎಂದು ನಾನು ತಮ್ಮಲ್ಲಿ ಕೇಳಿಕೊಳ್ಳುತ್ತಿದ್ದೇನೆ.

ಶ್ರೀ ಪಿ.ಜಿ.ಆರ್. ಸಿಂಧ್ಯ : ಈ ತಿದ್ದುಪಡಿಗಳು ಬಹಳ ಸಿಂಪಲ್ ಆಗಿವೆ. ಇದನ್ನು ಒಪ್ಪಿಕೊಂಡುಬಿಡಿ. 2004ನೇ ಇಸವಿಯೊಳಗೆ ರಾಜ್ಯದ ಎಲ್ಲಾ ಸಣ್ಣ, ಮಧ್ಯಮ ಮತ್ತು ಭಾರೀ ನೀರಾವರಿ ಯೋಜನೆಗಳನ್ನು ಮುಗಿಸಿ ರೈತರಿಗೆ ನೀರು ಕೊಡುತ್ತೇವೆ ಎಂದು ಸರ್ಕಾರ ತೀರ್ಮಾನಿಸಿದೆ ಎನ್ನತಕ್ಕಂಥಾದ್ದನ್ನು ಮಾನ್ಯ ರಾಜ್ಯಪಾಲರ ಭಾಷಣದಲ್ಲಿ ಸೇರಿಸಿ ಎಂದು ಹೇಳಿದ್ದೇವೆ. ನಿಮ್ಮ ಮ್ಯಾನಿಫ್‌ಸ್ಟೋದಲ್ಲಿ ಯಾವ ಮಟ್ಟದಲ್ಲಿ ಹೇಳಿದ್ದೀರಿ ಎಂದರೆ 'ಪಶ್ಚಿಮದತ್ತ ಹರಿದು ಬಂದು

ಸಮುದ್ರ ಸೇರುವ ನೇತ್ರಾವತಿ ಮುಂತಾದ ನದಿಗಳ ನೀರು ಹಾಸನ, ತುಮಕೂರು, ಮಂಡ್ಯ, ಬೆಂಗಳೂರು ಗ್ರಾಮಾಂತರ ಜಿಲ್ಲೆ ಇವುಗಳ ಉಪಯೋಗಕ್ಕೆ ಬರುವಂತೆ ನಮ್ಮ ಸರ್ಕಾರ ವ್ಯವಸ್ಥೆ ಮಾಡುವುದು' ಎಂದು ಹೇಳಿದ್ದೀರಿ. ಕೊನೆಯ ಪಕ್ಷ ಈಗ ಹಾಲಿ ತೆಗೆದುಕೊಂಡಿರತಕ್ಕಂಥ ಎಲ್ಲ ನೀರಾವರಿ ಯೋಜನೆಗಳನ್ನು ನಾಲ್ಕು ವರ್ಷದೊಳಗೆ, ನಮ್ಮ ಸರ್ಕಾರದ ಅವಧಿಯಲ್ಲಿ ನಾವು ಮಾಡುತ್ತೇವೆ ಎಂದು ಹೇಳಲಿ. ತಮಗೆ ಇದು ಗೊತ್ತಿರುವುದೇ, ನಾಗಾರ್ಜುನ ಡ್ಯಾಂ ಅನ್ನು ಕಟ್ಟಬೇಕಾದರೆ ಜನಗಳು ಸ್ಯಾಕ್ರಿಫೈಸ್ ಮಾಡಬೇಕಾದಂಥ ಸನ್ನಿವೇಶ ಬಂತು. ಆದ್ದರಿಂದ, ನಮ್ಮನ್ನು ವಿಶ್ವಾಸಕ್ಕೆ ತೆಗೆದುಕೊಂಡು ಚರ್ಚೆ ಮಾಡಿ ಇದನ್ನು ಸೇರಿಸಿ. ಇದರಲ್ಲಿ ತಪ್ಪೇನು ಇದೆ?

ಶ್ರೀ ಡಿ.ಬಿ. ಚಂದ್ರೇಗೌಡ: ನೀರಾವರಿ ಸಚಿವರ ಜೊತೆ ಚರ್ಚೆ ಮಾಡಲು ನಿಮಗೆ ಅವಕಾಶ ಕೊಡುತ್ತೇವೆ ಎಂದು ಹೇಳಿದ್ದಾರೆ; ನೀರಾವರಿ ಸಚಿವರಿಗೆ ಆದೇಶ ಕೊಡುತ್ತೇವೆ, ನಿಮ್ಮನ್ನೆಲ್ಲಾ ವಿಶ್ವಾಸಕ್ಕೆ ತೆಗೆದುಕೊಂಡು ಈ ಕೆಲಸ ಮಾಡುತ್ತೇವೆ ಎನ್ನುವಂಥ ಮಾತನ್ನು ಮಾನ್ಯ ಮುಖ್ಯಮಂತ್ರಿಯವರು ಹೇಳಿದ್ದಾರೆ. ಮತ್ತೆ ನೀವು ರಾಜ್ಯಪಾಲರ ಭಾಷಣದಲ್ಲಿ ಅದನ್ನು ಸೇರಿಸಿ ಎನ್ನುವುದು ಅನಾವಶ್ಯಕ, ತಾವು ಇದನ್ನು ಪ್ರೆಸ್ ಮಾಡಬಾರದು ಎಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಅಧ್ಯಕ್ಷರು: ಮಾನ್ಯ ಸಿಂಧ್ಯಾರವರೇ ನೋಡಿ, ಮಾನ್ಯ ಸಂಸದೀಯ ಸಚಿವರು ಏನು ಹೇಳಿದರು, ಅದನ್ನು ನೀವು ಪರಿಗಣಿಸಿದರೆ ಅನುಕೂಲವಾಗುತ್ತದೆ.

ಶ್ರೀ ಪಿ.ಜಿ.ಆರ್. ಸಿಂಧ್ಯ : ಮಾನ್ಯ ಮುಖ್ಯಮಂತ್ರಿಗಳು ಅದನ್ನು ಹೇಳಲಿ.

ಅಧ್ಯಕ್ಷರು: ಇಲ್ಲದಿದ್ದರೆ ಇದನ್ನು ಓಟಿಗೆ ಹಾಕಿಬಿಡೋಣ.

ಶ್ರೀ ಪಿ.ಜಿ.ಆರ್. ಸಿಂಧ್ಯ : ನಮಗೆ ಗೊತ್ತಿದೆ, ಅವರು 131 ಜನರಿದ್ದಾರೆ, ಮಾನ್ಯ ಮುಖ್ಯಮಂತ್ರಿಗಳ ರಿಪ್ಲೈ ದಿನ ಮೆಜಾರಿಟಿ ಅವರೇ ಇರುತ್ತಾರೆ. ನಾವು ಇಲ್ಲಿ 70-80 ಜನರಿದ್ದೇವೆ. ನಾವು ಏನು ಹೇಳುತ್ತಿದ್ದೇವೆ ಎಂದರೆ ಇದರಲ್ಲಿ ಹೇಳಿರತಕ್ಕಂಥಾದ್ದನ್ನು ಅವರು ಒಪ್ಪಿಕೊಳ್ಳಲಿ. ನಾವು ಇದನ್ನು ಏಕೆ ಹೇಳುತ್ತೇವೆ ಎಂದರೆ, ವಾಸ್ತವಾಂಶಗಳನ್ನು ಅರಿತುಕೊಂಡು ನಾವು ಮಾತನಾಡಬೇಕಾಗುತ್ತದೆ. ನಾವು ಅಧಿಕಾರಕ್ಕೆ ಬಂದ ತಕ್ಷಣ ಹೀಗೆ ಮಾಡುತ್ತೇವೆ, ಹಾಗೆ ಮಾಡುತ್ತೇವೆ ಎಂದು ಹೇಳಿದರೆ ಆಗುವುದಿಲ್ಲ. ನಾವು ಈಗ ಏನು ಹೇಳಿದ್ದೇವೆ ಎಂದರೆ 'ಕೃಷ್ಣೆಯ ಕಣ್ಣೀರು' ಅದನ್ನು ಬರೆದಿರತಕ್ಕಂಥ ಲೇಖಕರೇ ಇವತ್ತು ನೀರಾವರಿ ಮಂತ್ರಿಗಳಾಗಿದ್ದಾರೆ. ಆ ಪುಸ್ತಕದಲ್ಲಿ ಏನೇನು ಬರೆದಿದ್ದಾರೆ, ಉತ್ತರ ಕರ್ನಾಟಕಕ್ಕೆ ಆಗಿರತಕ್ಕಂಥ ಅನ್ಯಾಯ ಇವೆಲ್ಲವನ್ನೂ ಅವರು ಅದರಲ್ಲಿ ಸ್ಪಷ್ಟವಾಗಿ ಹೇಳಿದ್ದಾರೆ. ಆದ್ದರಿಂದ ಈಗ ಅವರೇ ನೀರಾವರಿ ಮಂತ್ರಿಗಳಾಗಿರತಕ್ಕಂಥ ಈ ಸಂದರ್ಭದಲ್ಲಿ ಇದನ್ನು ಹೇಳಲಿ ಎಂದು ಕೇಳುತ್ತಿದ್ದೇವೆ. 4,500 ಕೋಟಿ ರೂಪಾಯಿಗಳನ್ನು ಜನತಾ ಸರ್ಕಾರದವರು ಖರ್ಚು ಮಾಡಿದ್ದಾರೆ ಎನ್ನತಕ್ಕಂಥ ಪ್ರಾಮಾಣಿಕತೆಯನ್ನು ಮಾನ್ಯ ಮುಖ್ಯಮಂತ್ರಿಗಳು ಪ್ರದರ್ಶನ ಮಾಡಿದ್ದಾರೆ. ನಮಗೆ ಗೊತ್ತಿದೆ, ಈ ತಿದ್ದುಪಡಿಯನ್ನು ಓಟಿಗೆ ಹಾಕಿದರೆ ಅದು ಹೊರಟು ಹೋಗುತ್ತದೆ ಎನ್ನುವ ಅರಿವು ನಮಗೆ ಇದೆ. ಆದರೆ ಏಕೆ ಇದನ್ನು ತೆಗೆದುಕೊಂಡು ಬಂದಿದ್ದೇವೆ ಎಂದರೆ ನೀವು ಇದಕ್ಕೆ ಹೆಚ್ಚು ಒತ್ತು ಕೊಡಬೇಕು ಎನ್ನುವ ದೃಷ್ಟಿಯಿಂದ ಇದನ್ನು ಹೇಳಿದ್ದೇವೆ. ಮಾನ್ಯ ಮುಖ್ಯಮಂತ್ರಿಗಳು ನಮ್ಮನ್ನೆಲ್ಲಾ

ಕರೆಸಿ ನೀರಾವರಿ ಯೋಜನೆಗಳ ಬಗ್ಗೆ, ಅಂತರರಾಜ್ಯ ನೀರಾವರಿ ಮಾತುಕತೆ ಬಗ್ಗೆ ಇರತಕ್ಕಂಥ ಭಿನ್ನಾಭಿಪ್ರಾಯಗಳ ಬಗ್ಗೆ, ಅಷ್ಟೆಲ್ಲಾ ಹಣವನ್ನು ಯಾವ ರೀತಿ ಸಂಗ್ರಹ ಮಾಡಬೇಕು ಎನ್ನುವುದರ ಬಗ್ಗೆಯೂ ಸಹ ನಾವು ನಿಮ್ಮನ್ನೆಲ್ಲಾ ವಿಶ್ವಾಸಕ್ಕೆ ತೆಗೆದುಕೊಳ್ಳುತ್ತೇವೆ ಎನ್ನುವುದಾದರೆ ನಾವು ವಿಚಾರ ಮಾಡೋಣ. ಅವರು ಅದನ್ನು ಹೇಳಲಿ.

ಶ್ರೀ ಬಿ. ಸೋಮಶೇಖರ್: ನೀವು ಒಂದೇ ವರ್ಷದಲ್ಲಿ ಇದನ್ನು ಮುಗಿಸಿ ಎಂದು ನಾವು ಹೇಳುತ್ತಿಲ್ಲ. ಇನ್ನೂ ಐದು ವರ್ಷಗಳ ಕಾಲ ಕಾಂಗ್ರೆಸ್ ಸರ್ಕಾರ ಇರಲಿ ಎನ್ನುವ ಆಸೆಯಿಂದ, ಐದು ವರ್ಷಗಳಲ್ಲಿ ಇದನ್ನು ಮಾಡುತ್ತೇವೆ ಎಂದು ತಾತ್ವಿಕವಾಗಿ ಒಪ್ಪಿಕೊಳ್ಳಲಿ ಎಂದು ಕೇಳುತ್ತಿದ್ದೇವೆ. ಆಗದೇ ಇರತಕ್ಕಂಥ ತಿದ್ದುಪಡಿಯನ್ನು ನಾವು ಮಂಡಿಸಿಲ್ಲ. ಆನ್-ಗೋಯಿಂಗ್ ವರ್ಕ್‌ಗಳನ್ನು ಐದು ವರ್ಷಗಳಲ್ಲಿ ಮುಗಿಸುತ್ತೇವೆ ಎನ್ನತಕ್ಕಂಥಾದ್ದಕ್ಕೆ ತಾತ್ವಿಕವಾದಂಥ ಒಂದು ಒಪ್ಪಿಗೆಯನ್ನು ಕೊಡಿ ಎಂದು ನಾವು ಕೇಳುತ್ತಿದ್ದೇವೆ.

ಶ್ರೀ ಎಸ್.ಎಂ.ಕೃಷ್ಣ : 116 ಸಂಖ್ಯಾಬಲವನ್ನು ಹೊಂದಿದ್ದಂಥ ಆ ಸರ್ಕಾರವೇ ಐದು ವರ್ಷ ಮುಗಿಸಿತಂತೆ; ಇನ್ನು 132 ಸಂಖ್ಯಾಬಲವನ್ನು ಹೊಂದಿರತಕ್ಕಂಥ ಇವರೂ ಮುಗಿಸುತ್ತಾರೆ. ಅದರ ಬಗ್ಗೆ ಸಂಶಯ ಬೇಡ. ಆದರೆ ನಿಮ್ಮ ಸದಭಿಪ್ರಾಯಗಳಿವೆಯಲ್ಲಾ, ಅವನ್ನು ಇನ್ನೂ ಸ್ಟ್ರೆಂಥೆನ್ ಮಾಡುತ್ತೇವೆ. ಮಾನ್ಯ ಸಿಂಧ್ಯಾರವರು ನಮ್ಮ ಕಮಿಟ್‌ಮೆಂಟನ್ನು ಕೇಳಿದರು. We are all committed to that. ಕೊನೆಯ ಹನಿ ನೀರನ್ನು ಕೂಡ ನಮ್ಮ ರೈತಾಪಿ ಜನಗಳಿಗೆ, ಅದರಲ್ಲೂ ಅವಕಾಶಗಳಿಂದ ವಂಚಿತವಾದಂಥ ಪ್ರದೇಶಗಳಿಗೆ ಕೊಡಬೇಕು ಎನ್ನತಕ್ಕಂಥಾದ್ದು ಉದ್ದೇಶ ಇದೆ. ನಾವು ನಿಮ್ಮನ್ನು ಕೃಷ್ಣಾ, ಕಾವೇರಿ ವಿಚಾರದಲ್ಲಿ ಚರ್ಚೆಗೆ ಕರೆದಾಗ ಇದನ್ನೂ ಕೂಡ ಚರ್ಚೆ ಮಾಡೋಣ.

SRI P.G.R. SINDHIA: In that case we don't press for this amendment.

ಅಧ್ಯಕ್ಷರು : ಬಹುಶಃ ಎರಡನೇ ತಿದ್ದುಪಡಿಗೂ ಕೂಡ ಅದೇ ಪರಿಸ್ಥಿತಿ ಇದೆ ಎಂದು ಕಾಣುತ್ತದೆ. ಮಾನ್ಯ ಬೈರೇಗೌಡರೇ ನೀವು ಏನು ಹೇಳುತ್ತೀರಿ?

ಶ್ರೀ ಸಿ.ಭೈರೇಗೌಡ : ತಿದ್ದುಪಡಿ ಏನಾಗುತ್ತದೆ ಎನ್ನುವುದು ಗೊತ್ತಿದೆ. ಆದರೆ ಸಮಸ್ಯೆ ಇರತಕ್ಕಂಥಾದ್ದು ಇಂದು ನಿನ್ನೆಯದಲ್ಲ. ರೈತರ ಗೋಳು, ರೈತರ ಸಮಸ್ಯೆ ಇರತಕ್ಕಂಥಾದ್ದು ಇಂದು ನಿನ್ನೆಯದಲ್ಲ. ಅಥವಾ ಈ ಸರ್ಕಾರ ಬಂದ ಮೇಲೆ ಆಯಿತು ಎಂದು ಅಲ್ಲ ಅಥವಾ ನಾವು ಇದ್ದಾಗ ಆಯಿತು ಎನ್ನತಕ್ಕಂಥಾದ್ದಲ್ಲ. ಈ ದೇಶದಲ್ಲಿ ನಿರ್ಮಾಣವಾಗಿರತಕ್ಕಂಥ ವಾತಾವರಣ ರೈತರನ್ನು ಯಾವ ರೀತಿಯ ಪರಿಸ್ಥಿತಿಗೆ ಕೊಂಡುಹೋಗಿದೆ ಎನ್ನುವುದೇ ಪ್ರಶ್ನೆ. ಸ್ವಾತಂತ್ರ್ಯ ಬಂದು 53 ವರ್ಷಗಳಾಗಿವೆ. ಈ 53 ವರ್ಷಗಳ ಸ್ವಾತಂತ್ರ್ಯದ ಪ್ರತಿಫಲ ಏನಾಗುತ್ತಿದೆ ಎಂದರೆ, ರೈತರು ಇವತ್ತಿನ ದಿವಸ ಆತ್ಮಹತ್ಯೆ ಮಾಡಿಕೊಳ್ಳತಕ್ಕಂಥ ಪ್ರಯತ್ನ ನಡೆದಿದೆ. ಅದರ ಹಿಂದೆ ಬೇರೆ ಬೇರೆ ಕಾರಣಗಳಿರಬಹುದು.

ಆತ್ಮಹತ್ಯೆ ಮಾಡಿಕೊಂಡಿರುವ ಬಗ್ಗೆ ವರದಿ ಆಗಿರುವುದೆಲ್ಲವನ್ನು ಕೂಡ ಇದು ನೇರವಾಗಿ ಬೆಳೆ ನಷ್ಟದಿಂದ ಆಗಿರುವುದೆಂದು ನಾನು ಹೇಳತಕ್ಕವನಲ್ಲ ಇದರ ಹಿಂದೆ ಬೇರೆ ಬೇರೆ ಕಾರಣಗಳಿರಬಹುದು. ಈ ಒಂದು ತಿದ್ದುಪಡಿ ತಂದರೆ ಇದು ಒಂದು ಮಹತ್ತರವಾದ ತೀರ್ಮಾನ ಕೂಡ ಆಗುತ್ತದೆ. ಇಡೀ ದೇಶದ ರೈತವರ್ಗಕ್ಕೆ ಮಾರ್ಗದರ್ಶನ ಮತ್ತು ಅವರಿಗೆ ಆಶಾಕಿರಣ ಆಗತಕ್ಕಂಥ ರೀತಿಯಲ್ಲಿ ಯೋಜನೆ ರೂಪಿಸಬಹುದು. ಈ ತಿದ್ದುಪಡಿಯ ಬಗ್ಗೆ ಕೊನೆಯ ಪಕ್ಷ ಚರ್ಚೆ ಆದರೂ ಆಗಲಿ, ಅದಕ್ಕೆ ಆದರೂ ನಾನು ಸಂತೋಷಪಡುತ್ತೇನೆ. ಇದು ಒಂದು ಪ್ರಯತ್ನ ಆಗಲಿ. ಮೊದಲನೆ ಹೆಜ್ಜೆ ಇಡತಕ್ಕಂಥಾದ್ದಕ್ಕೆ ಕರ್ನಾಟಕ ಮುಂದಾಗಬೇಕು ಎನ್ನುವ ದೃಷ್ಟಿಯಿಂದ ನಾವು ಈ ತಿದ್ದುಪಡಿಯನ್ನು ತಂದಿರುವುದು. ಆದ್ದರಿಂದ ಕೊನೆಯ ಪಕ್ಷ ನಾವು ಚರ್ಚೆ ಮಾಡೋಣ. ಚರ್ಚೆ ಮಾಡುತ್ತೇವೆ ಎನ್ನುವ ಭರವಸೆಯನ್ನಾದರೂ ಸರ್ಕಾರದ ಕಡೆಯಿಂದ ಕೊಟ್ಟರೆ ಒಳ್ಳೆಯದು. ಈ ರೀತಿ ಭರವಸೆಯನ್ನು ಕೊಟ್ಟರೆ ನಾನು ಈ ತಿದ್ದುಪಡಿಯನ್ನು ಮಾಡುವುದಕ್ಕೆ ಒತ್ತಾಯಪಡಿಸುವುದಿಲ್ಲ ಎಂದು ಹೇಳುತ್ತೇನೆ.

ಶ್ರೀ ಎಸ್.ಎಂ.ಕೃಷ್ಣ (ಮುಖ್ಯಮಂತ್ರಿಗಳು) : ಮಾನ್ಯ ಅಧ್ಯಕ್ಷರೆ, ಇದರ ಬಗ್ಗೆ ಚರ್ಚೆ ಮಾಡೋಣ. ಏಕೆಂದರೆ ಇದು ಬಹಳ ಪ್ರಾಮುಖ್ಯವಾದ ವಿಚಾರ. ಮತ್ತು ಇದರ ಬಗ್ಗೆ ಬಹಳ ವರ್ಷಗಳಿಂದ ವ್ಯವಸ್ಥಿತವಾದ ಪ್ರಯತ್ನ ನಡೆದಿರಬಹುದು, ನಡೆಯದೆ ಇರಬಹುದು ಅಥವಾ ನಡೆದಿದ್ದರೆ ಅದು ಯಾವ ಪ್ರಮಾಣದಲ್ಲಿ ಆಗಬೇಕೋ ಅಷ್ಟು ಆಗದೇ ಇರಬಹುದು; ಆದರೆ ಇದರ ಚರ್ಚೆಗೆ ಬಹಳ ಸ್ಕೋಪ್ ಇದೆ; ಚರ್ಚೆ ಮಾಡಿ ನಮ್ಮಲ್ಲಿ ಒಂದು ನೆಲೆಗಟ್ಟು ಆಗುವುದಾದರೆ ಅದಕ್ಕೆ ನಮ್ಮ ಸಂಪೂರ್ಣವಾದ ಸ್ವಾಗತ ಇದೆ.

ಶ್ರೀ ಸಿ.ಭೈರೇಗೌಡ : ಆಗಬಹುದು.

ಅಧ್ಯಕ್ಷರು: ತಿದ್ದುಪಡಿಗಳನ್ನು ವಾಪಸ್ಸು ಪಡೆದಿರುವುದರಿಂದ ಮುಖ್ಯ ಪ್ರಸ್ತಾವನೆಯನ್ನು ಈ ಸಭೆಯ ಮತಕ್ಕೆ ಹಾಕುತ್ತೇನೆ.

ಪ್ರಸ್ತಾವ ಹೀಗಿದೆ:

"27ನೇ ಅಕ್ಟೋಬರ್ 1999ರಂದು ವಿಧಾನಮಂಡಲದ ಸದಸ್ಯರನ್ನುದ್ದೇಶಿಸಿ ದಯಪಾಲಿಸಿದ ಭಾಷಣಕ್ಕಾಗಿ ಈ ಅಧಿವೇಶನದಲ್ಲಿ ಸೇರಿರುವ ವಿಧಾನಸಭೆಯ ಸದಸ್ಯರಾದ ನಾವು ಮಾನ್ಯರಾಜ್ಯಪಾಲರಿಗೆಕೃತಜ್ಞತಾಪೂರ್ವಕವಾದ ವಂದನೆಗಳನ್ನು ಸಮರ್ಪಿಸಲು ಅಪ್ಪಣೆ ಕೋರುತ್ತೇನೆ."

ಪ್ರಸ್ತಾವವು ಅಂಗೀಕೃತವಾಗಿದೆ.

ವಂದನಾ ನಿರ್ಣಯದ ಪ್ರಸ್ತಾವಕ್ಕೆ ಈ ಸಭೆಯ ಅನುಮತಿ ದೊರಕಿದೆ. ವಂದನಾ ನಿರ್ಣಯವನ್ನು ಸನ್ಮಾನ್ಯ ರಾಜ್ಯಪಾಲರಿಗೆ ಕಳುಹಿಸಿಕೊಡಲಾಗುವುದು.

ಅಧ್ಯಕ್ಷರು: ಈಗ ಕೊನೆಯ ಕಾರ್ಯಕ್ರಮ ಸದನದ ಕಾರ್ಯಕಲಾಪಗಳ ಸಂಕ್ಷಿಪ್ತ ವರದಿ.